ಕಣವಿ
ಕಾವ್ಯ
ಸಂಪುಟ
೬

ಮಣ್ಣಿನ ಮೆರವಣಿಗೆ

ಚೆನ್ನವೀರ ಕಣವಿ



ಮಣ್ಣಿನ ಮೆರವಣಿಗೆ

ಚೆನ್ನವೀರ ಕಣವಿ

ತಳುಕಿನ ವೆಂಕಣ್ಣಯ್ಯ ಸ್ಮಾರಕ ಗ್ರಂಥಮಾಲೆ
ಗೋಕುಲಂ ಮೂರನೆಯ ಹಂತ, ಮೈಸೂರು - ೨

MANNINA MERAVANIGE
A Collection of poems

Written by
Chennaveera Kanavi

Published by
Talukina Venkaniah Smaraka Granthamale
9, Ramya, Gokulam 3rd stage
Mysore - 570 002

Pages : 82 ***Price : Rs. 40/-***

First Impression : 1960
Second Impression : 1986

ತಳುಕಿನ ವೆಂಕಣ್ಣಯ್ಯ ಸ್ಮಾರಕ ಗ್ರಂಥಮಾಲೆಯಿಂದ ಮೊದಲನೇ ಮುದ್ರಣ : 2009

Cover Page : Sudakar Darbe

D.T.P. : **LEKHA GRAPHICS**
Mysore -8 Ph: 2482854

Printing : Good Touch Printers, Mysore

ಕವಿಯ
ಕಲ್ಪನಾಲೋಕದ ಸುಂದರ ಕನಸುಗಳನ್ನು
ತಮ್ಮ ಕರ್ಮಕೌಶಲದಿಂದ
ವಾಸ್ತವಲೋಕದ ನನಸಾಗಿ ಕಂಡರಿಸುವ
ಕರ್ನಾಟಕ ವಿಶ್ವವಿದ್ಯಾಲಯ ಶಿಲ್ಪಿ
ಶ್ರೀ ದಾ. ಚಿಂ. ಪಾವಟೆಯವರಿಗೆ
ಗೌರವ ಪೂರ್ವಕ
ಸಮರ್ಪಿತ

ನನ್ನ ಮಾತು

೧೯೫೬ರಲ್ಲಿ, 'ದೀಪಧಾರಿ' ಪ್ರಕಟವಾದ ನಂತರ ಬರೆದ ಕವಿತೆಗಳಲ್ಲಿ ಹತ್ತನ್ನು ಮಾತ್ರ ಈ ಸಂಗ್ರಹ ಒಳಗೊಂಡಿದೆ.

ಇಲ್ಲಿ ಸಂಗ್ರಹಗೊಂಡಿರುವ ಕವಿತೆಗಳು ಇಂದಿನ ಹೊಸ ಕಾವ್ಯ ಪ್ರಯೋಗದಲ್ಲಿ ನನ್ನ ರೀತಿಯನ್ನು ಅರಿತುಕೊಳ್ಳಲು, ಕೆಲಮಟ್ಟಿಗಾದರೂ ಸಹಾಯಕವಾಗಬಹುದೆಂದು ಭಾವಿಸಿದ್ದೇನೆ. ಈ ಕವಿತೆಗಳ ಹಿನ್ನೆಲೆ - ಮುನ್ನೆಲೆಗಳನ್ನು ವಿವರಿಸಿ, ಅವುಗಳ ಒಲವು - ನಿಲವುಗಳನ್ನೂ ಶ್ರೀ ಗೌರೀಶ ಕಾಯಕಿಣಿಯವರು ದೀವಟಿಗೆ ಹಿಡಿದು ತೋರಿಸಿದ್ದಾರೆ. ಹೊಸ ಕವಿತೆಯ ಬಗ್ಗೆ ಅವರು ತಳೆದಿರುವ ರಸಜ್ಞತೆಯ ಧೋರಣೆ ಹಾಗೂ ಸಹಾನುಭೂತಿಯ ಸೂಕ್ಷ್ಮ ವಿಮರ್ಶೆಯಿಂದ ನಾನು ತುಂಬ ಉಪಕೃತನಾಗಿದ್ದೇನೆ.

ಈ ಕವಿತೆಗಳಲ್ಲಿ ಕೆಲವು ಈ ಮೊದಲು ಪತ್ರಿಕೆಗಳಲ್ಲಿ ಪ್ರಕಟವಾಗಿ ಮತ್ತು ಆಕಾಶವಾಣಿಯಲ್ಲಿ ಪ್ರಸಾರಗೊಂಡು ನಮ್ಮ ಜನತೆಯ ಕಣ್ಣ ಮುಂದೂ, ಕಿವಿಯ ಮೇಲೂ ಹಾದು ಹೋಗಿವೆ. ಅವುಗಳಿಗೆ ಎಡೆಕೊಟ್ಟ ಆಯಾ ಪತ್ರಿಕೆಗಳ ಸಂಪಾದಕರಿಗೂ ಆಕಾಶವಾಣಿಯ ಅಧಿಕಾರಿಗಳಿಗೂ ನಾನು ಕೃತಜ್ಞ. 'ನವ್ಯಧ್ವನಿ' ಸಂಕಲನದಲ್ಲಿಯ ಎರಡು ಕವಿತೆಗಳೂ ('ಮಣ್ಣಿನ ಮೆರವಣಿಗೆ' ಮತ್ತು 'ಯುಗಾದಿ') 'ದೀಪಧಾರಿ'ಯಲ್ಲಿಯ ಒಂದು ಕವಿತೆಯೂ ('ಕೊನೆಯ ನಿಲ್ದಾಣ') ಈ 'ಮೆರವಣಿಗೆ'ಯಲ್ಲಿ ಸೇರಿವೆ.

ಹತ್ತು ಕವಿತೆಗಳ ಈ ಸಂಕಲನವನ್ನು ಹೊತ್ತಿಗೆ ಸರಿಯಾಗಿ - ಚೆಂದವಾಗಿ - ಪ್ರಕಟಗೊಳಿಸಿದ ಶ್ರೇಯಸ್ಸು 'ಶಾರದಾ ಪ್ರಕಟನಾಲಯ'ದ ಗೆಳೆಯರು ಶ್ರೀ 'ಜಿಬಿಜ್' ಹಾಗೂ 'ಆರ್.ಬಿ.' ಅವರದು. ಕನ್ನಡ ಸಾಹಿತ್ಯ ಪ್ರಕಾಶನ

ಕ್ಷೇತ್ರದಲ್ಲಿ ಈಗಾಗಲೇ ನೂರು ಪ್ರಕಟನೆಗಳ ಮೈಲುಗಲ್ಲನ್ನು ದಾಟಿರುವ ಅವರ ಅಭ್ಯುದಯ'ವನ್ನು ಕಂಡು ಯಾರಿಗೆ ಸಂತೋಷವಾಗದು?

ಕಾವ್ಯವನ್ನು ಕುರಿತು ಹೊಸ ದೃಷ್ಟಿಯಿಂದ ಆಲೋಚಿಸುವ ನನ್ನ ಗೆಳೆಯರಿಗೆ, ಅದನ್ನು ಆದರದಿಂದ ಬರಮಾಡಿಕೊಳ್ಳುವ ಓದುಗರಿಗೆ, ಬದಲಾವಣೆಗೊಳ್ಳುತ್ತಿರುವ ಇಂದಿನ ಕಾವ್ಯಮಾರ್ಗದ ಕೂಲಂಕಷ ಪರಿಚಯವುಳ್ಳ ವಿಮರ್ಶಕರಿಗೆ (ಅವರ ಸಂಖ್ಯೆ ಅಲ್ಪವಿದ್ದರೂ)- ಎಲ್ಲರಿಗೂ ನನ್ನ ವಂದನೆಗಳು,

೨೮, ಸಾರಸ್ವತಪುರ,
ಧಾರವಾಡ — ಚೆನ್ನವೀರ ಕಣವಿ
೧೦-೧೨-೧೯೬೦

ಎರಡನೆಯ ಆವೃತ್ತಿಗಾಗಿ

ಈ ಕವನ ಸಂಗ್ರಹದ ಪ್ರತಿಗಳು ಮುಗಿದು ತುಂಬ ದಿನಗಳಾಗಿದ್ದವು. ಶಾರದಾ ಪ್ರಕಾಶನದ ಶ್ರೀ ಜಿ. ಬಸವರಾಜರು ಅದರ ಎರಡನೆಯ ಆವೃತ್ತಿಯನ್ನೂ ತಾವೇ ತರುತ್ತಿರುವುದು ಸಂತೋಷದ ಸಂಗತಿ. ಕರಡು ತಿದ್ದುವ ಕೆಲಸವನ್ನು ಸಂತೋಷದಿಂದ ವಹಿಸಿಕೊಂಡ ಸನ್ಮಿತ್ರ ಡಾ.ಜಿ.ಎಸ್. ಶಿವರುದ್ರಪ್ಪನವರಿಗೆ ಕೃತಜ್ಞತಾಪೂರ್ವಕ ವಂದನಗೆಳು.

ದೀಪಾವಳಿ — ಚೆನ್ನವೀರ ಕಣವಿ
೨-೧೧-೧೯೮೬


ಕೃತಜ್ಞತೆಯ ನುಡಿ

ಹಿರಿಯರಾದ ಶ್ರೀ ತ.ಸು. ಶಾಮರಾಯರು ಪ್ರಾರಂಭಿಸಿದ ತಳುಕಿನ ವೆಂಕಣ್ಣಯ್ಯ ಸ್ಮಾರಕ ಗ್ರಂಥಮಾಲೆಯನ್ನು ಅವರ ಪುತ್ರ ಶ್ರೀ ಟಿ.ಎಸ್. ಛಾಯಾಪತಿಯವರು ಕಳೆದ ನಾಲ್ಕು ದಶಕಗಳಿಂದ ಯಶಸ್ವಿಯಾಗಿ ಮುಂದುವರಿಸಿಕೊಂಡು ಬಂದು ಅನೇಕ ಮೌಲಿಕ ಕೃತಿಗಳನ್ನು ಪ್ರಕಟಿಸುವುದಲ್ಲದೆ 'ಅತ್ಯುತ್ತಮ ಪ್ರಕಾಶನ ಪ್ರಶಸ್ತಿ' (೧೯೯೯) ಯನ್ನು ಪಡೆದ ಶ್ರೇಯಸ್ಸಿಗೂ ಪಾತ್ರರಾಗಿದ್ದಾರೆ. ಈ ಗ್ರಂಥ ಮಾಲೆಯಲ್ಲಿ ನನ್ನ ನಾಲ್ಕು ಪುಸ್ತಕಗಳು ಅಚ್ಚುಕಟ್ಟಾಗಿ ಪ್ರಕಟಗೊಂಡಿರುವುದನ್ನು ಇಲ್ಲಿ ಕೃತಜ್ಞತೆಯಿಂದ ಸ್ಮರಿಸಿಕೊಳ್ಳುತ್ತೇನೆ.

ನನ್ನ 'ಸಮಗ್ರ ಕಾವ್ಯದ' ಮೂರು ಆವೃತ್ತಿಗಳು ಪ್ರಕಟಗೊಂಡಿದ್ದರೂ ವಿದ್ಯಾರ್ಥಿಗಳ ಹಾಗೂ ಸಾಮಾನ್ಯ ಓದುಗರ ದೃಷ್ಟಿಯಿಂದ ಬಿಡಿಕವನ ಸಂಗ್ರಹಗಳ ಪ್ರತಿಗಳೂ ಅವರಿಗೆ ಲಭ್ಯ ವಾಗುವದು ಪ್ರಯೋಜನಕರವೆಂದು ಭಾವಿಸಿ, ಸ್ವತಃ ಲೇಖಕರೂ ಆಗಿರುವ ಪ್ರಕಾಶಕ ಛಾಯಾಪತಿಯವರು ಪ್ರಸ್ತುತ ಮಾಲೆಯನ್ನು ಪ್ರಾರಂಭಿಸಿದ್ದಾರೆ. ಅದಕ್ಕೆ ತಕ್ಕ ರಕ್ಷಾಪುಟದ ವಿನ್ಯಾಸವನ್ನು ಸುಂದರವಾಗಿ ರಚಿಸಿಕೊಟ್ಟ, ಖ್ಯಾತ ಕಲಾವಿದ ಶ್ರೀ ಸುಧಾಕರ ದರ್ಭೆಯವರಿಗೂ ಈ ಯೋಜನೆಯ ಮುಖ್ಯ ಪ್ರೇರಕರಾದ ಶ್ರೀಛಾಯಾಪತಿಯವರಿಗೂ ನನ್ನ ವಂದನೆಗಳು.

ಧಾರವಾಡ
೨೦ - ೭ - ೨೦೦೯

ಚೆನ್ನವೀರ ಕಣವಿ



೧೯೫೭ ರಲ್ಲಿ ಕವಿ ಕಣವಿಯವರು

(ಭಾವಚಿತ್ರ : ನಾರಾಯಣರಾವ್ ಕುಲಕರ್ಣಿ, ವಿಜಾಪುರ)

ಮಣ್ಣಿನ ಮೆರವಣಿಗೆ

೧

ತಿರುಗುತ್ತಿದೆ, ಎಂದೋ ಸಿಡಿದಾರಿದ
ಅಗ್ನಿಯ ಪಿಂಡ ;
ಆರಿದೆಯೆಂದವರಾರೊ, ಇನ್ನೂ ನಿಗಿ ನಿಗಿ ಉರಿಯುತ್ತಿದೆ
ಅದರೆದೆಯಾಳದ ಕುಂಡ!
ಹರಿಯುತ್ತಿವೆ ಭೆಂಕಿಯ ಹೊಳೆ
ತಣ್ಣನೆ ಕಡಲೊಳಗೆ;
ಹೊಗೆಯಾಡುತ್ತಿದೆ ಸುಮ್ಮನೆ ನುಣ್ಣನೆ ಬಾನೊಳಗೆ,
ಬಿದ್ದಿವೆ
ಒಡ ಮುರಿದೆದ್ದಿವೆ ಗಿರಿ ಗಹ್ವರ -
ಯುಗ ಯುಗಗಳ ನೋವೆ!
ದರಿಕಂದರದೊಳಗಿನ್ನೂ ಹರಿದಾಡಿದೆ ಸಂಶಯವೆ.

ಕುದಿಯುವ ಆ ಬಸಿರಿನ ಆವುದೊ ರಸ ಹೀರಿ,
ಚಿಮ್ಮಿವೆ
ದಿನದಿನವೂ ಹೊಮ್ಮಿವೆ ಹಸುರಾಗಿ
ಲಕ್ಷಾಂತರ ಆಶೆ!
ದಿಕ್ಕು ದಿಕ್ಕುಗಳ ಗೋಪುರವೇರಿ ದಿಟ್ಟಿಸಿವೆ:
ಕಣ್ಣು ಕ್ಷಿತಿಜದ ಆಚೆ ನೂರು ಗೋಲಗಳಾಡಿ

ಅದನಿದನು ಇದನದನು ಹಿಡಿದು ಎಳೆದಾಡಿ,
ಕೂಡಿ ಕುಣಿದಾಡಿ,
ಕೊನೆಯಿರದ ವರ್ತುಲಕೆ ಒಯ್ದು ಮುಟ್ಟಿಸಿವೆ!
ಸಂಜೆ ಮುಂಜಾವಗಳ ಸೂರ್ಯಬಿಂಬದ ಸುತ್ತು,-
ಸದ್ದು ಗದ್ದಲವಿಲ್ಲದೆದ್ದು ಬಾನಂಗಳಕೆ ಬರುವ ಚಂದ್ರನ ಹೆಗಲ ಮೇಲೆ
ಹೊತ್ತು,
ಬಾನ ಕಣದಲಿ ಕೋಟಿ ಚಿಕ್ಕೆ ಹಂತಿಯ ಕಟ್ಟಿ
ದಿವದ ಬದುಕನು ಒಕ್ಕಿ ರಾಶಿ ಮಾಡಿ
ಬೆಳಕು ಚಕ್ರಾಕಾರ ತಿರುಗುತ್ತಿದೆ!

೨

ಮಣ್ಣ ಮನೆಯೊಳು ಮಗುವು ಕಣ್ಣು ತೆರೆದಿತ್ತು!
ಬೆಳಕಿಂಡಿಯಿಂದ ಪಡಸಾಲೆಯಲಿ, ಮೂಲೆಯಲಿ
ಕೋಲಾಡಿಸಿತ್ತೆಳವಿಸಿಲು;
('ದೇವರ ಬಂಗಾರದ ಕುದುರೆ')
ಕಿಟಕಿಯಲಿ ಕೈಚಾಚಿ ಕರೆದ ಚಂದ್ರ.
(ಚೆಂದಪ್ಪ ಚೆಂದಪ್ಪ ಚೆಲುವ, ಚುಂಗಬಿಟಗೊಂಡು ಬರುವ)
ಚಿಕ್ಕೆ ನಕ್ಕವು ಬಾನ ಕನ್ನಡಿಯ ತುಣುಕಿನಲಿ
ಬಾನ ಬೀದಿಗೆ ನೂರು ಬೆಳ್ಳಿಯ ರಥ1
ಅಕ್ಕಪಕ್ಕದ ಮರದ ಹೂ ತುರಾಯಿಯ ಮೇಲೆ
ಹಾಡಿನುಯ್ಯಾಲೆ -
'ಅಕ್ಕ ಓ ಚಿಕ್ಕವ್ವಾ'
ಸಾಲೆ ಕೋಣೆಯಲಂದು ಮಗ್ಗಿ ಒಪ್ಪಿಸುವಾಗ
ಮೇಜ ಮೇಲೆಯೆ ಇತ್ತು ಪೃಥ್ವಿಗೋಳ.
ಗೂಡಿನಲಿ ಕುಳಿತು ಗುಟುಕರಿಸಿತ್ತು ಪಾರಿವಾಳ.
ಕಿಟಕಿಯಾಚೆಗೆ ದೂರ ಬೆಟ್ಟ, ಬಯಲುಗಳಲ್ಲಿ
ಮುಂಗಾರು ಮಳೆ ಬೆಳೆದ ಭಾವ ಮೇಳ!
ಮಣ್ಮನೆದೆಯೊಳು ಸ್ನೇಹವಂಕುರಿಸಿ ಬೆಳೆದು
ಬೆಳುದಿಂಗಳಿನ ಹೊನಲೆ ಎಲ್ಲೆಲ್ಲು ಹರಿದು
ಕಣ್ಣೆದುರು ಸಾಗಿತ್ತು ಮಣ್ಣ ಮೆರವಣಿಗೆ
ಇಲ್ಲಿಂದ ಆ ಬಾನ ಗುಡಿಯವರೆಗೆ!

೩

ಕತ್ತಲೆಯ ಕೋಣೆಯಲಿ ಹುಣ್ಣಿಮೆಯು ಹರಿದಾಡಿ
ಮಣ್ಣ ಗೋಡೆಯ ಮೇಲೆ ಬಣ್ಣ ಬರೆದಿತ್ತು,
ಆಷಾಢ ನಿಬ್ಬಣವು ಸೂಸ್ಯಾಡಿ ಬರುವಾಗ ಎಷ್ಟೊಂದು ಚೆಂದವಿತ್ತು!
ಚಿತ್ತವೆಲ್ಲಾ ಅದರ ಮೇಲೆ ಇತ್ತು.
ಬಂದು ಹೋದವು ಬಂಡು ಹೂಡಿ ಒಂದರ ಮೇಲೆ ಒಂದು ಮಳೆಗಾಲ -
ಗುಡುಗಿ, ಗದ್ದಲಿಸಿ, ಮದ್ದಳೆ ಬಡಿದು ಕುಣಿದಾಡಿ
ಹಿಡಿದು ಹೆಂಡದ ಬುಂಡಿ ಎತ್ತಿ ಕುಡಿದು!
ಹಾಗು ಹೀಗೂ ಗೋಡೆ ನಿಂತಿಹವು ಜೋಲಿ ಹೊಡೆದು;
ಕುಸಿಯತೊಡಗಿದೆ ಕೆಳಗೆ ನೆಲಗಟ್ಟು, ಮೇಲೆ ಬಿದ್ದಿದೆ ಭಾರ ನೀಗದಷ್ಟು.
ಎಷ್ಟು ಮಣ್ಣನು ಹಾಕಿ ಮೆತ್ತಿದರು ಪ್ರತಿ ವರುಷ ಇದರ ಹಾಡೇ ಇಷ್ಟು:
ಮಾಳಿಗೆಯ ಮೇಲೆ ಇರುವೆಗಳ ಸಾಲುದುರ್ಗ
ಜಂತಿಯಲಿ ಇಲಿಗಳೋಡಾಡಿ ದಿನವೂ ಬುಟ್ಟಿ ಬುಟ್ಟಿ ಮಣ್ಣುದುರಿ
ಎಲ್ಲಿ ನೋಡಿದರಲ್ಲಿ ಸುರಂಗ ಮಾರ್ಗ!
ಇರುಳಿನಲಿ ಕುರುಡು ಬೆಳಕಿನ ಸುತ್ತ ನೆರಳುಗಳ ಕುಣಿತ.
ಇತ್ತೋ ಇಲ್ಲೋ ಎನಿಸಿ ಬಿಡುವ ಕತ್ತಲೆ ಒಳಗೆ;
ಹತ್ತು ಸಲ ಆರಿ ಹತ್ತುವ ದೀಪ ಬೀದಿಯಲಿ!
ಕೂಟು ಕೂಟುಗಳಲ್ಲಿ ಬೂಟು - ಸಪ್ಪಳ ಸೀಟಿ
ದಾಟಿ ಹೊಸತಿಲಿನಾಚೆ ಹೋದರೇನೊ ಎಂತೊ-
ಒಟ್ಟಿನ ಮೇಲೆ,
ಪರಿಸ್ಥಿತಿ ತುಂಬಾ ಶೋಚನೀಯ.

ಮೇಲೆ ಕಣ್ಣಿಟ್ಟ ಕಡೆಗೆಲ್ಲ ಜ್ಯೋತಿರ್ಮಾಲೆ
ನೀಲ ಬೆಳಕಿನಪೂರ್ವ ನೃತ್ಯ ಶಾಲೆ,
ಮಣ್ಣಮಡಿಲೊಳು ನಿತ್ಯ ಯಾತನೆಯ ನೆಲಗುಮ್ಮ

‘ಎಚ್ಚತ್ತು ತಾಯಿ ಎಂವೆ ಬಿಚ್ಚ ಏಳಮ್ಮಾ
ಮಲಗಿರುವ ತಾಯಿ ಪೃಥಿವೀ’
ಕತ್ತಲೆಯ ಹುತ್ತ ಬೆಳೆದಿದೆ ಎತ್ತ ಸರಿದರೂ
ಆದರೂ ಎಂಥ ಸೋಜಿಗವೆಂದಿ-
ಬೆಳಕಿನಿಂದಲೆ ಅದರ ಉಪಜೀವನ -
ಜನನದಲಿ ಮರಣದಲಿ ತುಂಬಿ ಜಯಗಾನ.

ಚಳಿಗಾಲದಲ್ಲಿ ಮೈ ಸೆಟೆದುಕೊಂಡಿದ್ದ ತರು
ಬಂದು ನಿಂತಿದೆ ಬೀದಿ ಮಧ್ಯದಲಿ ಸಿಂಗಾರಗೊಂಡ ತೇರು!
ಬೇಡವೆಂದವರಾರು?
ಹಲಗೆ ಬಾರಿಸಿ, ಕಹಳೆಯೂದಿ, ಸಾಗಲಿ ಮುಂದೆ
ದುಂದು ಮೆರವಣಿಗೆ -
ಓ ಜೀವನವೆ!
ಶುಭಮಸ್ತು ನಿನಗೆ.

ಯುಗಾದಿ

ಕರೆಯದಿದ್ದರೂ ನಾವು, ನೀನು ಬಂದೇ ಬರುವಿ
ಅಲ್ಲವೆ? ಬಾ ಮತ್ತೆ, ಬಾ ಯುಗಾದಿ;
ಎಂಥ ಬಿಸಿಲೊಳು ಬಂದೆ!
ಬೇಕೆ ಬಾಯಾರಿಕೆಗೆ ಬೇವು - ಬೆಲ್ಲ?
ಚಹಕೆ ಸಕ್ಕರೆಯಿಲ್ಲ; ನಡೆದೀತೆ ಬರಿಯ ತಣ್ಣೀರ ಗುಟುಕು?
ಇದು ಹೋದ ವರುಷವೆ ಕೊಂಡ ಬಾಳದ ಬೇರ ಬೀಸಣಿಗೆ
ನೀರು ಚಿಮುಕಿಸಿದೆ; ತಣ್ಣಗೆ ಬೀಸಿಕೊ.
ಇಲ್ಲೆ ಪಾಟಿಯ ಕಲ್ಲಮೇಲೆ ಹಾಸಿದೆ, ಸ್ವಲ್ಪ ಅಡ್ಡಾಗಿ ಏಳು;
ಆಮೇಲೆ ಮಾತಾಡೋಣ, ಕುಳಿತು ಹಾಯಾಗಿ,
ಒಂದು ಯುಗವಾಗಿ ಹೋಯಿತಲ್ಲವೆ ನಾವು ಭೆಟ್ಟಿಯಾಗಿ!

*   *   *

ಜೆಟ್ ವಿಮಾನ, ಹೆಲಿಕಾಪ್ಟರ್, ಉಗಿಹಡಗ, ಬೋಟು
ಎಮ್.ಎಸ್. ಎಮ್.. ರೈಲು, ಕಾರು ಕೊನೆಗೆ ಎಸ್.ಟಿ. ಬಸ್ಸು?-
ಯಾವ ವಾಹನದಲ್ಲೂ ಬರಲಿಲ್ಲವೆ? ನೋಡಿದರೆ ಇಳಿವಯಸ್ಸು.
ಕೊನೆಗೆ ಎತ್ತಿನ ಬಂಡಿ ಹತ್ತಿ ಬಂದೆಯ, ಹಿರಿಯ,
ಎಲೆಯಡಿಕೆ ಜಿಗಿದು, ಕಥೆ ಹೇಳಿ, ಲಾವಣಿ ಹಾಡಿಕೊಂಡು?
ಬಂದೊಡನೆ ನಿನ್ನ ಗುರುತಿಸಲಿಲ್ಲವೆ ಇಲ್ಲಿ ಯಾರೂ?
(ಬಗಲಗಸೆ ಅಂಗಿ ತಲೆಗೆ ಹೆಡಿಗೆಯ ರುಮಾಲು)
ಮರೆತು ಬಿಡಬೇಕೆ ಇಷ್ಟು, ಬೇಗ ಮುಂಚಿನ ಹಾದಿ

ಅಥವ ಕಂಡೆಯ ಬೇರೆ ಅದಲು ಬದಲು?!
ವರುಷಗಟ್ಟಲೆ ಎತ್ತಲೋ ಕಣ್ಮರೆಯಾಗಿ ಹೋಗುವ ನಿನಗೆ ಹೇಗೆ ಗೊತ್ತು-
ಇಲ್ಲಿ, ಒಳಗೊಳಗೆ ನಡೆಯುತ್ತಿರುವ ಮಸಲತ್ತು,
ನಿಮಿಷ ನಿಮಿಷಕ್ಕೆ ಹೊಸ ಹೊಸ ವೇಷಧರಿಸಿ ಓಡುವ ಜಗತ್ತು.
ಹಾಗೆ ನೋಡಿದರೆ, ನಮಗಿಲ್ಲಿ ಏನಿದೆ ಹೇಳು ವಿಶೇಷ ಸವಲತ್ತು?
ಇಂದೊ ನಾಳೆಯೊ ವಲಸೆ ಹೋಗುವರು ನಮ್ಮ ಜನ
ಚಂದ್ರ ತಾರಾಲೋಕ ಹುಡುಕಿಕೊಂಡು
(ಬಹುಶಃ) ಕವಿಗಳನ್ನೂ ಜೊತೆಗೆ ಕರೆದುಕೊಂಡು.

* * *

ವರುಷ ವರುಷಕ್ಕೊಮ್ಮೆ ಬಯಲಟ್ಟದಲಿ ತೊಟ್ಟು ಬರುವೆ ಭರ್ಜರಿವೇಷ
ಓ ಚೈತ್ರ ಪುರುಷ!
ಬಿರುಗಾಳಿ, ಕೋಲ್ಮಿಂಚು, ಆಣಿಕಲ್ಲಿನ ಮಳೆಯು, ಗುಡುಗು , ಸಂತೋಷ;
ಹೇಗಿಹುದು ಪಂಚಾಂಗದಲ್ಲಿ ಹೊಸ ವರುಷ?
ಕೋಗಿಲೆಯು ಮಾತ್ರ ಬಿಟ್ಟೂ ಬಿಡದೆ ತನ್ನ ಜಾಹೀರಾತು ಪ್ರಕಟಿಸಿದೆ.
ಅಚ್ಚಾಗಿಹುದು ಕೆಳಗಿನ ಕವಿತೆ
'ಚೈತ್ರ' ಪತ್ರಿಕೆಯ ವಿಶೇಷ ಸಂಚಿಕೆಯ ಮೊದಲ ಪುಟದ ಮೇಲೆ:

ತಳಿತ ಮಾವು ಮುಗುಳಾದ ಬೇವು
ಹುಲುಗಲದ ತುಂಬ ಹೂವು;
ಬೇಗೆ ಹತ್ತಿ ಮೈಸುಟ್ಟ ಕಾಡು
ಮರೆತಿಹುದು ಎಲ್ಲ ನೋವು.

ಅರ್ಧ ಹಸಿರು, ಇನ್ನರ್ಧ ಹಳದಿ
ಅಂಚಿನಲಿ ಚಿಗುರುಗೆಂಪು;

ಬಿಸಿಲ ಬೇಗೆಗೀ ನೆಳಲ ತಂಪು
ತಂಗಾಳಿ ತಂದ ಜೊಂಪು.

ಬಂತು ಗಾಳಿ ಕೆಂಧೂಳಿ - ಗೂಳಿ
ಮುಗಿಲುದ್ದ ಹೋಳಿಯಾಡಿ,
ಬೆಣಚುಗಲ್ಲ ಬಿಳಿ ಮೋಡದಲ್ಲಿ
ಕುಡಿಮಿಂಚು ಜೀವತಾಳಿ!

ಮೊದಲ ಮಳೆಗೆ ನೀರಡಿಸಿ ನಿಂತ
ಇಳೆಗಾಯ್ತು ಮೊದಲ ಕೂಟ
ಸಾಕು ಎನಿಸಿ ಸಾಕಾಗಲಿಲ್ಲ
ಹೊಸ ಋತುವಿನೊಡನೆ ಬೇಟ.

* * *

ನೆನೆಸಿದೊಡನೆಯೆ ಕನಸಿನಲ್ಲಿ ಬಂದವ ನೀನು
ಬಾ ಯುಗಾದಿ; 'ಶತಂ ಜೀವೇಮ ಶರದಃ'
ನೂರು ವರುಷದ ಮೆದುಳ ಮಡಿಕೆಯೊಳಗೇನಿಹುದೊ-
ಹಬ್ಬ ಹುಣ್ಣಿಮೆಗೊಮ್ಮೆ ಬಿಚ್ಚಿ ಬಿಸಿಲಿಗೆ ಹಾಕಿ,
ಮಡಿಚಿ ಪೆಟ್ಟಿಗೆಯೊಳಗೆ ಇಟ್ಟುದಷ್ಟೆ!
ನುಸಿ ಮುಟ್ಟಿದರೆ ಅದರ ಗತಿಯೇನು? ಮೊದಲೆ ರೇಶಿಮೆಯ ಬಟ್ಟೆ -
ಇರಲಿ; ದಾರಿಯಲಿ ಬರುವಾಗ ಎಡಬಲಕೆ ಕಂಡುದೇನು?-
ಎಲೆಯುದುರಿ ರಸವಾರಿ ಕೊಂಬೆಗೈಗಳ ಚಾಚಿ
ಬಾನಿಳೆಯ ನಡುವೆ ಜೋತಾಡುತಿರುವೀ ಅಸ್ಥಿಪಂಜರಗಳು?
ಸ್ವಲ್ಪ ತಾಳು -
ಯುಗ ಯುಗಕ್ಕೊಮ್ಮೆ ಸಂಭವಿಸಿ ಬಂದರು ಅವಗೆ
ದುಂಬಾಲು ಬೀಳುವ ಮಂದಿ ಎಷ್ಟು ಹೇಳು.

ಸ್ವತಃ ನೀನೇ ಎಷ್ಟು ಸಲ ಬಂದು ಹೋದೆಯೋ ಈ ಹಿಂದೆ
ಬರಲಿರುವೆಯೊ ಮತ್ತೆ ಇನ್ನು ಮುಂದೆ;
ಮಹಡಿ, ಗೋಪುರ ಗುಡಿಲು, ಕೋಟೆ, ಕೊತ್ತಳ, ಬೀಳು
ಕೊಳಚೆ, ಗೊಬ್ಬರ ಗುಂಡಿ, ಒಗ್ಗಾಲಿ ಬಂಡಿ -

ನೀ ಬರುವ ಮುನ್ನವೇ ನಡೆದಿತ್ತು ನೀ ಬರುವ ದಾರಿಯ ರಿಪೇರಿ;
ಮುಂದೆ ಬರುವಾಗೆಲ್ಲ ಬಲು ಹುಷಾರಿ!
ಮರೆಯದಿರು, ಕನಿಷ್ಠ ವರುಷಕೊಂದಾದರೂ ಬೇಕು ನಮಗೆ ಹೊಸ
ಮಾದರಿ.

*　　*　　*

ಯುಗ ಯುಗದ ಹಾದಿಯಲಿ ನೆಳಲು ಬಿಚ್ಚಿದೆ ಬೋಧಿ
ಆಗಾಗ ಬಂದು ವಿಶ್ರಾಂತಿ ಪಡೆಯುವವಿಲ್ಲಿ ಈ ಜಗದ ಕರುಣೆ ಶಾಂತಿ;
ಎದೆಯ ಗುಹೆಯಲ್ಲಿ ಮಿಣುಕುತಿದೆ 'ಕಲ್ಯಾಣವೆಂಬ ಪ್ರಣತಿ'
ಒಳಗು ಹೊರಗೆಲ್ಲ ಒಂದೆ ರೀತಿ.
ಯುದ್ಧ ರಂಗದಲಿ ಸನ್ನದ್ಧವಾಗಿದೆ ರಥವು
ಎಲ್ಲಿ ಆ ಸಾರಥಿ?

'ಓಡ್ಯಾವ ಏಳು ಕುದುರೀ ಮಬ್ಬು ಕೆದರೀ
ಮೂಡ್ಯಾವ ಏಳು ಬಣ್ಣಾ ತುಂಬಿಕಣ್ಣಾ
ನೋಡ್ಯಾವ ಬಯಲ ಸುತ್ತೀ ಬೆಳಕು ಬಿತ್ತೀ'

.... ಓ ! ಇದು ಈಗ ನಮ್ಮ ಸರತಿ.

ಅಪರಾವತಾರ

ಚೋಟುದ್ದ, ಗೇಣುದ್ದ, ಆಕಾಶದುದ್ದ
ಕುತುಬ ಮೀನಾರಕ್ಕೆ ಕೈಯೂರಿ ಎದ್ದ!
ಕೆರೆಯಿಂದ ಸಾಗರದವರೆಗೆ ಸಾಗರಬಿದ್ದ
ರಾಡಿ ಮೈಯಿಂದಲೇ ಮೇಲಕೆದ್ದ-
ಗೌರಿಶಂಕರ ಶಿಖರ ಏರಬೇಕೆಂದಿದ್ದ
ಆದರೀಗಾಗಲೆ ಅದು ನಿಷಿದ್ಧ.
ಬುದ್ಧನೊಬ್ಬನು ಬೇರೆ ಆಗಿ ಹೋಗಿದ್ದ
ಇಲ್ಲದಿದ್ದರೆ ಇವನೆ ಇಂದಿಗೂ ಮುಂದಿಗೂ
ಜಗದೆಲ್ಲ ಮಂದಿಗೂ ಸುಪ್ರಸಿದ್ಧ!

ಅಲ್ಲಿದ್ದ
ಇಲ್ಲಿದ್ದ
ಎಲ್ಲ ಕಡೆಗೂ ಬಾಲ ಗುಂಡಾಡಿಸಿದ್ದ,
ಹೋದ ಹೋದಲ್ಲೆಲ್ಲ ಹದನೋಡಿ ಹುಸಿಗುಂಡು ಹಾರಿಸಿದ್ದ!
ಮುದ್ದಾಗಿ ತೋರಿದವ ಹದ್ದಾಗಿ ಹಾರಿದ
'ಉಳಿದ ಪಕ್ಷಿಗಳೇನು ನನ್ನಂತೆ ಹಾರುವವೆ
ಹಾಡಬಲ್ಲವೆ' ಎಂದು ಡಂಗುರವ ಸಾರಿದ.
'ಕಿಂಖಿಲಿಲಿಲಿಲಿಲಿಲಿ' ಹರಡಿತ್ತು ನಾದಪ್ರಮಾದ!
ಆಕಾಶದಲ್ಲೆ ಯಾವ ದೇವರಿಗೊ ಪ್ರದಕ್ಷಿಣೆ ಹಾಕುತಿದ್ದವನು
ಕೆಳಗೆ ಸರ್ರನೆ ಇಳಿದು ಕೋಳಿಮರಿಗಳ ಮೇಲೆ

ಬಂದೆರಗಿದ!
ಪೂರ್ವಜನ್ಮದ ಸುಕೃತ-
ಈ ಮಹೋದಯ ಕೃಪಾಕಟಾಕ್ಷಕ್ಕೆ ನಾ ಬಿದ್ದೆ ಅಪ್ರಬುದ್ಧ.
ಚಿಕ್ಕೆ ಬಳಗದ ಚಂದ್ರ ಚಲುವಿನಿಂದ್ರ
ನಾಲ್ಕಾಣೆ ಚೂರುಗಳ ನಡುವೆ ಹೊಳೆಯುವ ಬೆಳ್ಳಿ ರೂಪಾಯಿಯಾದ.
ಬಿಡಲಿಲ್ಲ ಈತ ಅಲ್ಲಿಗೂ ಹೋಗಿ ಗಟ್ಟಿ ತಳವೂರಿದ;
ಹೂವಿನ ಸುವಾಸನೆಯ ಬೆಳದಿಂಗಳಿನ ತಂಪ
ತಕ್ಕಡಿಯ ಪರಡಿಯಲಿ ತೂಗ ಹೊರಟ.
ಕೊಬ್ಬರಿಯ ಜೊತೆಗದರ ಕರಟವನ್ನೂ ಕೂಡ
ತಿಂದು ಬಿಟ್ಟ.
ನಿತ್ಯವೂ ಮೊಗೆಮೊಗೆದು ಕುಡಿಯತೊಡಗಿದನಾಸೆಯಾಮಿಷದ ಪೀಯೂಷ
ಏನು ಕೊಟ್ಟರೆ ತಾನೆ ಬಂದೀತು ಇದರಿಂದ
ಬರುವ ಮಾದಕದಮಲು, ಸರಿಗಟ್ಟಿ ನಿಂತೀತು ದ್ರಾಕ್ಷಾರಸ?

ರೂಪಾಯಿ, ಆಣೆ, ಪೈ.
ಮನಸಿನೊಳಗೇ ಬೇಕಾದ್ದು ಬೈ
(ಪೂರ್ಣಪರವಾನಿಗಿ)
ಜಮಾಖರ್ಚಿಗೆ ಮಾತ್ರ ವ್ಯತ್ಯಯವಾಗದಿರಲಿ
ವೇದದಷ್ಟೇ ಪೂಜ್ಯ ರೋಜ ಕಿರ್ದಿ.
ರೂ. ಆ. ಪೈ.
ಇದರ ನಾದವೆ ನಾದ ಇದುವೆ ಸಂಗೀತ
ಇದರ ಕುಣಿತವೆ ಕುಣಿತ ಝಣ್ ಝಣ್ ತಕ್ಕಥೈ.
ಸೈ ಸೈ ತಲೆದೂಗಿ ಬೆನ್ನ ಚಪ್ಪರಿಸಿದನು
ಕಥೆಯಾಗಿ ಕುಳಿತ ಆ ಮಿಡಾಸ!

ಅವರಿವರು ತೊಟ್ಟ ಬಿಳಿಯ ಬಟ್ಟೆಯ ಮೇಲೆ
ಮಸಿಯ ಸಿಡಿಸಿದರೆಷ್ಟು ಸೊಗಸು ಸಂತೋಷ!
ಯಾರ ತಲೆಗೆಂಥ ಟೊಪ್ಪಿಗೆಯಾದರೊಪ್ಪೀತು-
ಹಗಲಿರುಳು ಅದರದೇ ಧ್ಯಾನ, ಅದುವೆ ಜೀವನೋಲ್ಲಾಸ!
ಕತ್ತರಿಸಿ, ಹೊಲಿದು, ಬಿಚ್ಚಿ ತೇಪೆಯ ಹಚ್ಚಿ ತೊಟ್ಟು
ತೋರಿಸುವನು ತಗೊ ತಾಸಿಗೆ ನೂರು ವೇಷ.
ಊರಿನುಸಾಬರಿ ಇವನ ಊಟಕುಪ್ಪಿನಕಾಯಿ
ಕೊಂಡಿ ಮಂಚಣ್ಣ, ಶಕುನಿ, ಜಕ್ಕಿಸಿಹೋದರಿವನೆದುರು
ಅವರಿಗಿದ್ದವೆ ಹೇಳಿ, ನೂರು ಬಾಯಿ?
ಸಮಯಬಂದಾಗಿರಲಿ ಎಂದು ಸಂಗ್ರಹಿಸಿಹನು
ನಸುಗುನ್ನಿ ಕಾಯಿ.
ಕರಟಕರು ದಮನಕರಿಗೆಲ್ಲ ಇವನೇ ಇಂದು
ತಂದೆ ತಾಯಿ.

ಕಣ್ಣು ಗುಳಿಗಣ್ಣು, ಸದಾ ಒಳಸಂಚುಗಳ ಕೋಣೆ
ಒಮ್ಮೆಯಾದರೂ ಅಪ್ಪಿ ತಪ್ಪಿ ಹೃದಯದ ಮಾತು
ಹೊರಬಂದರಾಣೆ!

ಬಿಂಕುದುಟಿಗಳ ಮೇಲೆ ಹಾಸ - ವಿರೋಧಾಭಾಸ
ಒಮ್ಮೊಮ್ಮೆ ಮಾತಿನಲಿ ಚೈತ್ರಮಾಸ!
ಮೊದಲ ನೋಟಕ್ಕಿವನು ಹಸುಳೆ, ಪೂರಾ ಹಸುಳೆ
ಗುಮ್ಮನಗುಸುಗ;
ಭಾವಕೋಶದ ಮೇಲುಮುಸುಗನೆಳೆದರೆ ಸಾಕು
ಮೂಗು ಮುಚ್ಚದೆ ಬೇರೆ ಗತಿಯೆ ಇಲ್ಲ.
ಒಳ ಮುಚುಗ ; ನಾಲಿಗೆಯು ಹೊರಗೆ ಹಾದರೆ ಚುಚುಗ -
ತಿಂದುಚುಗ!

ಬೆಳಕಿಂಡಿಯಲ್ಲಿಳಿದು ಬಂದು ಬೆಣ್ಣೆಯ ತಿಂದು
ಗುರ್ರೆನುವ ಬಾವುಗ!
ಗೋಣಿಚೀಲದಿ ಹಾಕಿ ಹೊತ್ತು ಹೊರಗೊಗೆದರೂ
ಮತ್ತೆ ಹೇಗೋ ಬಂದು ಮೂಸುವದು ಸೋಜಿಗ!
ಅಲ್ಲಿಲ್ಲಿ ಸಂಶಯದಿ ಏಕೆ ಹುಡುಕುತ್ತಿಹಿರಿ
ಇಲ್ಲಿಯೇ, ಇವನಂತರಂಗದಲ್ಲಿಯೇ ಹೊಗೆಯಾಡುತಿದೆ
ಬನ್ನಿ, ಮೂರನೆ ಮಹಾಯುದ್ಧ.
ಗೊಬೆಲ್ಸ ಮಹಾಶಯ ಕೊನೆಯ ಗಳಿಗೆಯಲಿ ತನ್ನೆಲ್ಲ
ಗುಟ್ಟು ಇವನಿಗೆ ಕೊಟ್ಟು ಪ್ರಾಣ ಬಿಟ್ಟ.

ಕಂಡಿರಾ ನೀವಿವನ, ಪರಮ ಸ್ನೇಹಿತನ?
ಸ್ನೇಹಕೆಂದೇ ಮೂರ್ತಿಮತ್ತಾಗಿ ಈ ಇಳೆಗೆ ಅವತರಿಸಿದವನ?
ಮೊನ್ನೆ ಮೊನ್ನೆಯೆ ಆಯಿತೆನಗೆ ತಾನಾಗಿಯೇ
ಇವನೊಡಲ ಬ್ರಹ್ಮಾಂಡದ ಮಹಾದ್ಭುತ ವಿಶ್ವರೂಪದ ದರ್ಶನ
ಸಿಡಿಲೆರಗಿದಂತಾಯ್ತು ನಡುಗಿಹೋಯಿತು ನನ್ನ ಅತ್ಯಲ್ಪ ಚೇತನ

'ನಮೋನಮಸ್ತೇSಸ್ತು ಸಹಸ್ರ ಕೃತ್ವಃ
ಪುನಶ್ಚ ಭೂಯೋಽಪಿ ನಮೊ ನಮಸ್ತೆ.'

ಶಿಶು ಕಂಡ ಕನಸು

೧

ಇವನ ಹಾಲ್ದುಟಿಯಂಚಿನಲ್ಲಿ ಮಿಂಚುವ ನಗೆಯು
ತುಂಬುಗಣ್ಣುಗಳಲ್ಲಿ ಹೊಳೆವ ಬದುಕು,
ಧ್ವನಿತರಂಗದಲೆದ್ದು ತೇಲಿ ಬರುತಿಹ ನಾದ
ಚಂದ್ರ - ದೋಣಿಯನೇರಿ ಹುಟ್ಟು ಹಾಕು.

ಹೂವಿಗೆರಗಿದ ತುಂಬಿ, ಸಿಂಪಿಗೊರಗಿದ ಮುತ್ತು
ತಂಪುಗಾಳಿಗೆ ಬಿರಿದ ಸಂಪಿಗೆಯ ಮೊಗ್ಗು,
ತೆಂಗಿನೊಳಗಿನ ತಿಳಿಲು, ಗಾನದಿಂಪಿನ ಹೊಳಲು
ಮನಸಿನೊಳಗಿನ ಕನಸು ಹೀಗೆ ಬೆಳೆದು.

ತೆಂಗುಗರಿ ಚಾಮರವ ಬೀಸಿ ಬೆಳ್ಗೊಡೆಯೆತ್ತಿ
ಚಿಕ್ಕೆ ಪಲ್ಲಕ್ಕಿಯನು ಸಜ್ಜುಗೊಳಿಸಿ
ಬೆಳ್ಳಿ ಗಂಟೆಯ ನುಡಿಸಿ ಹೂವು ಹಡದಿಯ ಹಾಸಿ
ಇರುಳ ದೇವರು ಇಳೆಗೆ ದಯಮಾಡಿಸಿ -

ನೆರಳ ನೇವರಿಸುತ್ತ ಬೆಳಕು ಬೆರಳಾಡಿಸಿತು
ಬೆಳುದಿಂಗಳಿನ ಹಾಲು ಖೀರು ಕುಡಿಸಿ,
ಹಗಲು ಧಿಮಿ ಧಿಮಿ ಕುಣಿದ ಬಿಸಿಲುಗುದುರೆಯ ಮೈಯ
ತಿಕ್ಕಿ ತೋಬರಿ ಕಟ್ಟಿ ಹಾಯಾಗಿಸಿ.

ಮಗುವಿನೆಳೆಗಂಗಳಲಿ ಬೆಳ್ಳಿ ಚಿಕ್ಕೆಯ ಮಿನುಗು
ಮನಸಿನಲಿ ತಿಂಗಳಿನ ತಂಪು ಕನಸು
ಹಸು ಹಾಲು ಕರೆದ ತಂಬಿಗೆ ತುಂಬ ಮಲ್ಲಿಗೆಯು -
ಶಿಶು ಕಂಡ ಕನಸಿನಲಿ ಜೀವದುಣಿಸು!

೨

ಬಯಲೆಲ್ಲವೂ ಒಂದೆ ಬೆಟ್ಟವಾಗುತ ನಿಂತು
ಬೆಳೆಯಿತು ಪ್ರಪಂಚ.
ಎಲ್ಲಿ ನೋಡಿದಡಲ್ಲಿ ಬಣ್ಣದಲಿ ಆಡಿದವು ನೂರು ಕುಂಚ:
ಸರಸರ ಕೊಂಬೆಯೇರಿ ಇಳಿಯುವ ಅಳಿಲು.
ಎಲೆಗಳಲಿ ಸೋಸಿ ರಂಗವಲ್ಲಿಯ ಬಿಡಿಸಿ ಹಾಸಿದೆಳವಿಸಿಲು,
ನಿಮಿಷ ನಿಮಿಷಕ್ಕೆ ಗೂಡಿಗೈತಂದು ಹಾರುವ ಗುಬ್ಬಿ.
ಹುಲ್ಲಿನಲಿ ಬಿಸಿಲುಕಾಸುತ ಮಲಗಿ, ಮೈ ಮುರಿದು
ಬಾಲ ನಿಗುರಿಸಿ ಒಂಟೆ ಡುಬುರಿಯೆತ್ತಿ
ಹೂವಿನ ಮೇಲೆ ಹೆಜ್ಜೆಯಿಡುವಂತೆ ಮೈಗೆ ಮೈ
ಸೋಕಿಸುವ ಕಾಮಿ ಬೆಕ್ಕು;

ನುಣ್ಣಗೆ ಸಣ್ಣ ಲೈನು ದಾರಿಯ ರಚಿಸಿ
ಒಂದರ ಹಿಂದೆ ಒಂದು
ಸಕ್ಕರೆಯ ವಾಗೀನು ಸಾಗಿಸುವ ಇರುವೆ ಸಾಲು,
ನಟ್ಟಿರುಳಿನಲಿ ಕಿಡಿಗೆದರಿ ಹಳಿಗುಂಟ ಉರುಳುವ
ರೈಲು, ಮೈಲು ಮೈಲು!

ಕಣ್ಣಗೊಂಬೆಗೆ ಮೂಡಿ ಮನಸಿನಲಿ ಅಚ್ಚಾಗಿ
ಕನಸಿನಲಿ ಬಿಚ್ಚುವವು ರೀಲು ರೀಲು!

೩

ನಾನು (ಬೆಳೆದ ಮಗು)
ಮೂರು ಮಕ್ಕಳ ತಂದೆ
ಮೂರು ಸಲ ಮಗುವಾಗಿ ಮತ್ತೆ ಬೆಳೆದೆ;
ನೂರು ಕನಸುಗಳನ್ನು ಮರಳಿ ಪಡೆದೆ.
ಎಳೆಯ ಕನಸೇ ಮರಳಿ ಕಳೆಗೂಡಿದಂತಿಹುದು
ಇಂದಿನಿರುಳು:
ಕಣ್ಣೆದಿರು ಕನಕಾಂಗಿ ಮುಗಿಲು ಕಪ್ಪುರಗೊಂಬೆ!
ಚಿಕ್ಕೆ ಲೋಕವ ತೆರೆದು ಅಕ್ಕರತೆ ಬೀರುತಿಹ ಸ್ವಚ್ಛ ಆಕಾಶ,
ಹಚ್ಚೆಯ ಚುಚ್ಚಿದಂತೆ ನೆಲದೊಳಚ್ಚೊತ್ತಿರುವ ಹಸುರ ಕುಸುರು.
ದಿಗಂತದಲಿ ಕೆಳಗೆ ಇಳಿಬಿಟ್ಟಿರುವ ಗಿರಿಸಾನುಗಳ ನೀಲ ತೆರೆ
ಮೇಲೆ ಚಂದ್ರನು ಬರಿಯ ದುಂಡು ಗೆರೆ.
ಕಿವಿಗೊಟ್ಟರೆದೆಗೆ ತೋಟ ಪಟ್ಟಿಯ ತೋಪಿನಿಂಚರದ
ದೂರವಾಣಿಯ ಕರೆ.

ನಗರದಲಿ ತುಂಬ ವಿದ್ಯುದ್ದೀಪ-
ಬೆಳಕನ್ನೆ ಬಿಗಿದು ಹಿಡಿದಂತೆ ಹತ್ತೂ ಕಡೆಗೆ ಸುತ್ತು
ತಂತಿಯ ಕಂಬ;

ಟಾರು ಬೀದಿಯಲಿ ಕಾರುಗಳ ಮಿಂಚಿನ ಲಾಳಿ,
ತಾಳ್ಮೆಯ ಮೇಲೆ ಕರಹೇರಿ ಕರಕರೆಪಡುವ ರೇಡಿಯೊ ಹಾಡು,
ಈಗ ಮ್ಯಾಟಿನಿ ಮುಗಿದು ಎರಡನೆಯಾಟ ಸುರುವು.
ನಗರ ಸಭೆಯುಪವನದ ಬೆಂಚಿಗೊರಗಿದ ಬಾಯ್ಗೆ
ಹುರಿಗಡಲೆ, ಎರಡು ದುಡ್ಡಿನ ಸುಟ್ಟಸೇಂಗಾ,

ಆಣೆಗೆ ಎಂಟು ಪೆಪ್ಪರಮೆಂಟು
ಬಾಯಾಡಿಸು, ಯಾರಪ್ಪನದೇನು ಹೋಯ್ತು ಗಂಟು -
ನಗರಭವನದ ಧ್ವನಿವರ್ಧಕ ತೂರಿ, ಸುರಿಯುತಿವೆ
ರಾಜಾ, ರೋರರ್, ರಾಕೆಟ್, ರಾಣಿ!
ನಾಳೆ ಬೆಳಿಗ್ಗೆ ನೋಡಿದರಾಯ್ತು ಪತ್ರಿಕೆಯಲ್ಲಿ ಯಾಕ್ರಿ?
ಇದ್ದೇ ಇರುವನಲ್ಲ ಸ್ವಂತ ಸುದ್ದಿಗಾರ.

ಇಲ್ಲಿ ರಹದಾರಿ ಬಂದು. ತೂಗುತಿದೆ ಕೆಂಪು ಕಂದೀಲು
ವರ್ಷಗಟ್ಟಲೆ ರಿಪೇರಿ ನಡೆಯುತ್ತಿರುವ ರಾಜಮಾರ್ಗ!
ಗಂಟೆಯಾಯಿತು, ಈಗ ಹೊರಟದ್ದು ನಿನ್ನೆಯ ರೈಲು.
ಇಂದಿನದು ನಾಳೆ ಎಷ್ಟೊತ್ತಿಗೋ
ದಾರಿಯಲಿ ಬರುವ ಸೇತುವೆಯೆಲ್ಲ ಭದ್ರವೊ-
ಭದ್ರಂ ಶುಭಂ ಮಂಗಲಂ.

*   *   *

ಹಗಲ ಪಾಜೆಯಗಟ್ಟಿ ಮುಟ್ಟಿ ಮರಳಿದೆ ಇರುಳ ತೇರು
ಆಕಾಶದಾಚೆ ತುದಿಯಿಂದ ಈ ತುದಿಯವರೆಗೆ
    ಬೆಳ್ಳಿಯ ಬೀದಿ
ಇಳೆಯ ಹಾಡನ್ನೆಲ್ಲ ಕುಡಿದ ಸಾವಿರ ಚಿಕ್ಕೆ -
ಮಿಡಿಯುತಿದೆ ಇರುಳ ಮೌನ.
ಅಲ್ಲಿ ಮೂಡಿದ ನೂರು ಹೆಜ್ಜೆ ಮಿನುಗಿವೆ ಹರಡಿ ಜೀವಕಾಂತಿ!
ಇಲ್ಲಿರುವ ನಮಗೊ?
ಕಣ್ಮುಚ್ಚಿ ಕಣ್ಣು ತೆರೆಯುವಷ್ಟರಲ್ಲಿಯೆ ಬೆಳಗು
ಮತ್ತದೇ... ಬೆಳಗು.

ಜೀರ್ಣೋದ್ಧಾರ

೧

ಹೊರಗೆ ಭಾರೀ ಥಂಡಿ
ನೆಲದ ಮೇಲಿದ್ದುದೆಲ್ಲವ ದಂಡುಸುತ್ತಿ ಮೇಲೆತ್ತಿ
ಎಲ್ಲಿಗೋ ಒಯ್ದು ಒಗೆಯುತ್ತಿಹುದು ಗಾಳಿ!
(ಕಂಡ ಕಂಡವರ ಬಾಚಿ ತಬ್ಬಿಕೊಳ್ಳುವದಿದರ ಕೆಟ್ಟಚಾಳಿ)
ಗುಡ್ಡದೋವರಿಯಿಂದ ಸಂದಿಗೊಂದಿಗಳಿಂದ
ಒಮ್ಮೆಲೇ ಇದರ ದಾಳಿ.
ಶ್ರಾವಣದ ಹಸಿರು ರೇಶಿಮೆ ನೆನೆದು ನೆಲದ ಮೈಗಂಟಿಹುದು
ಶಿರಸಲದ ಹೂವಿನರಿಷಿಣವ ತೊಡೆದು,
ಮಳೆಯ ಜಾಲರಿ ಹಿಡಿದು ಮುಂದೆ ಸಾಗಿವೆ ಮೋಡ
ಆಗಾಗ ಹೂಬಿಸಿಲ ಮುಳುಗುನಗೆ ತಳೆದು-
ಆದರೀಗಾಳಿ ರೋಮ ರೋಮವ ಕಿತ್ತು ತೆಗೆಯುತಿದೆ
ಎಲ್ಲೊ ಎಂದೋ ಉದುರಿಹೋದ ಎಲೆಗಳನೆತ್ತಿ
ಬುಗುರಿಯಾಡಿಸಿ ಮತ್ತೆ ಬೀಸಾಡಿದೆ.
ಮೈಮೇಲೆ ಎಚ್ಚರಿಲ್ಲದೆ ಅಲೆವ ಈ ಮದ್ದಾನೆಗೊಂದಲ್ಲ
ಸಾವಿರ ಸೊಂಡಿಲು!
ದೂರ್ವಾಸಮುನಿಯ ಹೂವಿನಹಾರ ನೆಲಕೊಗೆದು
ತಿಕ್ಕಿದ್ಯೆರಾವತಕು ಮಿಗಿಲು,

ಮೇಲೆ ಕುಳಿತವನಿಂದ್ರನೋ ಚಂದ್ರನೊ
ಕೊಟ್ಟ ಶಾಪವು ಅವನಿಗೇ ತಟ್ಟುತಿರಲು -
ಅದೊ, ಬಂತು, ಮೊರೆಗಿವಿಯ ಝಾಡಿಸಿ, ನೆಲದ
ಮಣ್ಣ ಮೇಲಕೆ ತೂರಿ -
ಕಾಲೊಳಗೆ ಸಿಕ್ಕುದೆಲ್ಲ ಕಚ ಪಚ ತುಳಿದು
ಭೂಮಿಯಾಕಾಶ ಒಂದು ಮಾಡಿ!
ಸಾಧುಗೊಳಿಸಿದ ಮಾವುತನೆ ಕಂಗಾಲಾಗಿ ಕುಳಿತಿದ್ದಾನೆ
ಉಳಿದವರಿಗೆಲ್ಲಿಯದು ಜೀವದಾನ,
ಕಿಟಕಿ ಮಚ್ಚಿ, ಬಾಗಿಲು ಹಾಕಿ, ಅಗಳಿ ಜಡಿದು ಬಿಡು
ನಿಶ್ಚಿಂತೆ:
ಹೊರಗಿನ ಪೀಡೆ ಹೊರಗೇ ಇರಲಿ
ಅದರುಸಾಬರಿ ಬೇಡ, ತಿಳಿಯಿತೆ?

೨

ಈ ಕಣ್ಣು ಕಾಣುವ ಜಗದ ಸೊಗದ ನೋಟ
ಈ ದಿನದ, ಈ ಹೊತ್ತಿನ, ಈ ಗಳಿಗೆಯ ಸಂಪುಟ
ಒಳಗೆ ಕನ್ನಡಿಸಿ ತೆರೆದಿದೆ ನೂರು ಪದರುಗಳ
ಮನೋಮಂದಿರದ ಸುಂದರ ಕವಾಟ!
ಬಣ್ಣ ಬಣ್ಣದ ಗೋಲ, ಬಣ್ಣ ಬಣ್ಣದ ಛಾಯೆ ....
ಒಂದೊಂದೂ ಪ್ರಸ್ಫುಟ,
    ಒಡೆದ ಗಾಜಿನ ಬಳೆಯ ತುಂಡುಗಳ ಶೇಖರಿಸಿ
    ಚಿತ್ರದಲಿ ಬಿಡಿಸಿಟ್ಟು ಕಂಡ ಮಾಟ'
    ಕಣ್ಣೆದುರು ಬೀಳದೆಯೆ ಕಿವಿಗೆ ಕೇಳಿಸುತಿಹುದು
    ಕೇಳಿದಂತೆಯೆ ಕಣ್ಣು ಕಾಣುತಿಹುದು;
    ಈ ದೃಶ್ಯದಾಚೆಗಿನ ಬೇರೆ ದೃಶ್ಯದ ಪರದೆ
    ರಂಗಭೂಮಿಯ ಮೇಲೆ ಜಾರುತಿಹುದು-
ಹನಿ ಹನಿಯಿಂದ ಹೊಡೆದು ಕವಣೆಗಲ್ಲನು ಹಿಡಿದು
ನುಗ್ಗು ನುಗ್ಗಾಗಿಸುವ ಕಾರೊಡಲ ಮೇಘ ;
ಹಳ್ಳ ಹೊಳೆ ಹುಚ್ಚೆದ್ದು ಹರಿದು ಸೇತುವೆ ಮುರಿದು
ಊರು ಕೇರಿಯ ಹೊಕ್ಕು ನೀರಿನೋಘ!-
ಅತ್ತ ದನಕರು, ಇತ್ತ ಮನೆಮಾರು ತೆಪ್ಪತೇಲಿ
ನೀರು ಕಾಯ್ದಿದೆ ತನ್ನ ಸಮಪಾತಳಿ!

ಒಮ್ಮೊಮ್ಮೆ ಮೈಯಲ್ಲಿ ದೆವ್ವ ಹೊಕ್ಕಂತೆ ಭೂಕಂಪ
ಆಕಾಶ ಗಾಳಿಯ ಪಟ!
ಬಸಿರು ಬಸಿರೇ ಬಿರಿದು ಬಕ್ಕರಿಸುವುದು, ಕಣ್ಣ
ಕೆಕ್ಕರಿಸುವದು - ಸೌರಬಿಂಬದಲಿ ಸ್ಫೋಟ!

'Things fall apart, centre cannot hold'
'ತಾಸಿಗಿಪ್ಪತ್ತು ಅಪಘಾತ ಆಕಾಶದಲ್ಲಿ, ನೆಲದಲ್ಲಿ, ಪಾತಾಳದಲ್ಲಿ'.
ಹತ್ತು ದಿಕ್ಕಿಗು ಸಂಪು
ಒತ್ತಿ ಮಾತಾಡಿದರೆ ರಂಪು
ಕೂಟು ಕೂಟಿಗೆ ಜನರ ಗುಂಪು - ಕೋಲಾಹಲ!
ಕಲ್ಲು, ಲಾಠಿ, ಲೂಟಿ, ಸೋಡಾಬಾಟ್ಲಿ, ಅಶ್ರುವಾಯು ಪ್ರಯೋಗ
ಕೊನೆಗೆ ಗುಂಡಿನೇಟು -
ಸದಾ ತೆರೆದುಕೊಂಡಿಹುದು ಆಸ್ಪತ್ರೆಗೇಟು;

ಮಹಾಸಾಗರದ ಗಂಭೀರ ಗುಂಭವೆನಿಸಿದ ಹಡಗು
ಹೀಗೇಕೆ ಹೊಯ್ದಾಡಿದೆ?
ಅಂತರಿಕ್ಷದಲಿ ತೂಗಿ ತಾಕಲಾಡಿವೆ ದೀಪ,
ಬೆಳಕಿನ ಮೊಟ್ಟೆಯೊಡೆದು ಕತ್ತಲೆ ಬರುವುದುಂಟೆ, ಪಾಪ,
ಕಿವಿಯಲ್ಲಿ ಗಾಳಿದುಂಬಿದ ಕರುವಿನಂತೆ ಸದಾ
ಜಿಗಿದಾಡುತಿರುವ ಇದಕೆ
ಇದ್ದಕ್ಕಿದ್ದಂತೆ ಎಲ್ಲಿಂದ ಬಂತು ಲಂಗರು ಬಿಚ್ಚಿ ನೀರ ತಳ-
ಕಿಳಿವ ಬಯಕೆ:
ದಿಗಂತವನೆ ವ್ಯಾಪಿಸಿ ನಿಂತ ಮಹಾಸಾಗರದ ಮಧ್ಯದಲಿ
ಎದ್ದು ನಿಂತಿದೆ ಮುಗಿಲವರೆಗೆ ವಿಷಧೂಮ -
ವಿಜಯಸ್ತಂಭ !
ಮೆದುಳಿನ ಮೇಲೆ ನಾಯಿಕೊಡೆ ಬೆಳೆಯಿಸಿಕೊಂಡ
ಶುದ್ಧ ಹುಂಬ!

೩

ಗತವೈಭವವೊ?- ಪಾಳುಬಿದ್ದ ಗುಡಿ:
ಅಂಗಳದಿ ಅಂಗುಲಂಗುಲಕೆ ನೆಗ್ಗುಲಿ ಮುಳ್ಳು, ಗೊಳ ಗೊಳಿಕೆ.
ಈ ಹಿಂದೆ ಎಲ್ಲ ದಾರಿಗಳಿಲ್ಲಿ ಬಂದು ಕೂಡಿದ ಗುರುತು
ನಮಗಿಂದು ಕಾಣುವದು ಬರಿಯ ತೋರು ಬೆರಳು,
ಗೋಡೆ ಗೋಡೆಯ ಗೋರಿಯಲ್ಲಿ ಹುಳುಹುಪ್ಪಡಿ
ಕಣ್ಣು ಕಪ್ಪಡಿ, - ಬಿಚ್ಚುಗತ್ತಿ ಮೈಗಾವಲು,
ಗಾಳಿಯಾಡಿದರೆ ಆಡು ಕುರಿ - ದಡ್ಡಿ ಜಿಡ್ಡುನಾತ.
ಆಚೀಚೆ ನಡುಬಾಗಿ ಒಂಟಿ ಮಲಗಿದ ತೆಂಗು
(ಆಯುಷ್ಯ ಗಟ್ಟಿಯಿದ್ದರೆ ಯಾರದೇನು ಹಂಗು?)
ಬದಿಯಲ್ಲಿ ಬೆಳೆದು ನಿಂತಿದೆ ಸ್ವಾಮಿ ಸನಾತನ
ಅಶ್ವತ್ಥ ವೃಕ್ಷ.
ಸುತ್ತು ಮುತ್ತೂ ಹಸುರು ಪೈರು ಮೊಳೆದಂತಿಲ್ಲ
ಅಷ್ಟು ವರ್ತುಲ ಜಾಗ ಇಂದಿಗೂ ರುಕ್ಷ.
ಇದರಡಿಗೆ ಕುಳಿತು ಮೋಕ್ಷ ಪಡೆದವರೆಷ್ಟೊ
ಆಗಲೂ ಈಗಲೂ ಟೊಂಗೆ ಟೊಂಗೆಗೆ ಜೋತು -
ಬಿದ್ದಿರುವ ತೊಗಲಬಾವಲಿ ಸಾಕ್ಷಿ ನುಡಿಯಬಹುದಲ್ಲ!
ಧೂಳಡರಿ ಜಂತಿಗೆ ಸೇರಿ ಕುಳಿತ ಪಲ್ಲಕ್ಕಿ -
ಮೂಲೆಗುಂಪಾಗಿರುವ ತೇರು -
ಒಳಗಿನುತ್ಸವ ಮೂರ್ತಿ ಮೊದಲೇ ಗಡೀಪಾರು,
ಯಾರ ಪುಣ್ಯವೊ - ಗರ್ಭಗುಡಿಯಲ್ಲಿ
ಇನ್ನೂ ಉರಿಯುತಿದೆ ಸಣ್ಣ ಹಣತೆ -
ನಮಸ್ತೆ, ನಮಸ್ತೆ, ನಮಸ್ತೆ.

*　　*　　*

ಕಲ್ಲು ಕಟೆಯುವ, ಮಣ್ಣು ಹೊರುವ, ನೇಗಿಲು
ಹಿಡಿದು ಉಳುವ, ಬಟ್ಟೆ ನೇಯುವ, ಕಾರ-
ಖಾನೆಯಲಿ ದುಡಿವ; ಭಂಗಿ ಬುಟ್ಟಿಯ ಹೊರುವ,
ಪತ್ರಿಕೆಯ ಮಾರುವ ; ಕಛೇರಿಯಲಿ
ಕುರ್ಚಿಗೆ ಕುಳಿತು ಬಗ್ಗಿ ಬರೆದೇ ಬರೆವ;
ಆಣೆಕಟ್ಟನು ಕಟ್ಟಿ, ಕಾಲುವೆಯ ತೋಡುವ
ಭೂಗರ್ಭದಿಂದ ಬಂಗಾರ ತೋಡಿಕೊಡುವ
ಲೇಖನಿ ಮಿಡಿದು ಅಂತರಂಗ ಕರಗಿಸುವ
ಪಾಟಿಪೇಣೆಯ ಕೊಟ್ಟು, ಅಕ್ಷರವ ತೀಡಿಸುವ
ಲಕ್ಷ ಲಕ್ಷ ಹೋರೆಯ ಭಾರತಶಕ್ತಿ ಪ್ರತ್ಯಕ್ಷ.
ದುಡಿದು ಹಣ್ಣಾದವಗೆ ಇಲ್ಲಿ ಸಾಕ್ಷಾತ್ಕಾರ;
ಇವರಿಂದ ಈ ಪಾಳು ಗುಡಿಯ ಜೀರ್ಣೋದ್ಧಾರ.

ವಕ್ರರೇಖೆ

ನಗರ ಮಧ್ಯಕೆ ನುಗ್ಗಿ ದೂರದ ದಿಗಂತಗಳ
ಕನಸು ಕಾಣುತ್ತಿರುವ ಟಾರು ಬೀದಿ -
ಸಂತೆ ಮೂಟೆಯ ಹೊತ್ತ ಬಾಡಿಗೆಯ ಚಕ್ಕಡಿಗೆ
ಸನಿಹದಲ್ಲಿಯೆ ಬೇರೆ ಹೊರಳು ಹಾದಿ.

ಓಣಿ ಓಣಿಯ ಸುತ್ತಿ ಸಂದಿ - ಗೊಂದಿಗೆ ಹಾಯ್ದು
ಇದ್ದಲ್ಲಿಯೇ ಇಹುದು ಬೀದಿನಾಯಿ -
ಗಂಟೆ ಗಂಟೆಯ ನಡುವೆ ಕಾಲ ಚಡಪಡಿಸಿಹುದು
ಇಲ್ಲಿಗೂ ಬಂದೆಯ ನೀನು, ಬೊಂಬಾಯಿ!

ಈ ಸಮಾಂತರ ಹಳಿಯ ಮೇಲೆ ಓಡುವ ರೈಲು
ವಕ್ರರೇಖೆಗೆ ತಿರುಗಿ ನೂರು ಮೈಲು
ಎಲ್ಲ ರಾಜ್ಯದ ಗಡಿಯ ತುಳಿದು ದಾಟುತ್ತಿಹುದು
ಕೆಂಪು ಹಸುರಿನ ದೀಪ ಎರಡು ಕೈಲು!

ಕಣಿವೆ ಬೆಟ್ಟದ ಅಂಕುಡೊಂಕಿನಲಿ ಒಡಮುರಿದು
ಕಡಲ ಹುಡುಕುವ ನದಿಗು ಬೇರೆ ದಾಹ:
ಮಳೆಗಾಲ ಬೇಸಿಗೆಯ ಹರೆಯ ಮುಪ್ಪಿನ ತಿರುವು
ತಳದ ಒರತೆಗೆ ನೂರು ಸೆಲೆಯ ಸ್ನೇಹ.

ಏಳು ಹೊರಸಿನ ನುಲಿಯ ಬಿಟ್ಟರೂ ತಳ ಮುಟ್ಟಿ
ಬರುವ ಭರವಸೆಯಿಲ್ಲ, ಬೋಳು ಬಾವಿ;
ಪಾವಟಿಗೆ ತುಂಬ ಹಾವಸೆಗಟ್ಟಿ, ದಿಳಿಜಾರು
ಎಷ್ಟು ಕುಡಿದರು ಆರದಂಥ ಬಾಯಿ!

೨

ಮರಿಗೆ ಮರಿಯಿಕ್ಕಿರುವ ಶೂನ್ಯ ಮಂಡಲ, ಕೆಳಗೆ
ತಿರುಗೆ ತಿರುಗುತ್ತಿರುವ ಪೃಥ್ವಿಗೋಲ.
ಜಾಳಿಗೆಯ ಬಿಚ್ಚಿರುವ ಬುಗುರಿಗಿನ್ನೂ ನಿದ್ದೆ
ದೀರ್ಘ ವರ್ತುಲದಲ್ಲಿ ಸ್ವಪ್ನಲೋಲ.

ತೆರೆದ ಕಣ್ಣಿನ ತಾರೆ, ತೇಲು ನೌಕೆಯ ಮೋಡ
ಮಳೆಯಿಳಿದ ಸಲಕೊಮ್ಮೆ ಹೊಸತು ನೀರು.
ನಿಂತಲ್ಲಿಯೇ ನೀಲಿಗಟ್ಟಿರುವ ಆಕಾಶ -
ನೆಲದ ಬಸಿರೊಳು ಸದಾ ಹಚ್ಚ ಹಸುರು.

ಗಾಳಿಪಟ ಹೆಡೆ ತೆರೆದು ಆಡುವಾಗಲು ಜಗ್ಗಿ
ಕೊಸರಿಕೊಂಡೇಳುವದು ಒಡಲ ಸೂತ್ರ;
ಕಡಲಿನುದ್ದುಕ್ಕು ಒಳಗೆ ಹರಿವ ಉಷ್ಣ ಪ್ರವಾಹ -
ಮೇಲೆ ತೆರೆಯಾಡುವದು ಬೇರೆ ಪಾತ್ರ.

ಸಂಜೆ ಕತ್ತಲೆಯೊಡನೆ ಹತ್ತು ಸಾವಿನ ದೀಪ
ಬೆಳಕು ಬಟ್ಟೆಯ ಕಳಚಿ ನಿಂತ ನಿಲುವು
ನಿಂತ ನೀರೆಲ್ಲವೂ ತಿಳಿದು ತಳ ಕಂಡಾಗ
ದುಷ್ಯಂತನಿಗೆ ಬೇರೆ ಅರಿವು - ಮರೆವು.

ಈಚೆ ಬಾಗಿಲಿನಲ್ಲಿ ಬೆಳಕು ಕರಗುತ್ತಿರಲು
ಇರುಳು ತೆರೆವುದು ಮರೆಯ ವಸ್ತು ಕೋಶ
ನಡುವೆ ಪಡಸಾಲೆಯಲ್ಲಿ ನೆರಳು ಹೊಡಮರಳುವದು
ಇವನ ಎದೆಯೊಳು ಸದಾ ಸಂಧಿ ಪ್ರಕಾಶ!

ನಾಳಿನ ನವೋದಯ

೧

ಬೆಳಗಾಯಿತು -
ಕಾಶ್ಮೀರದಿಂದ ಕನ್ಯಾ ಕುಮಾರಿಯವರೆಗೆ
ಹೊಂಬಿಸಲು ಸೂಸಿ ಹೂಗಾಳಿ ಹರಿದಾಡಿತು.
ನೀಲಿಯಾಗಸದ ತೊಳೆದ ಪಾಟಿಯ ಮೇಲೆ
ಹಕ್ಕಿ ಧ್ವನಿ ಮೂಡಿ ತೀಡಿಸು ಹೊಸದೊಂದು ವರ್ಣಮಾಲೆ!

ಕೆಂಪು ಕೋಟೆಯ ಭುಜಕೆ ಧರ್ಮಚಕ್ರ ಧ್ವಜವನಿರಿಸಿ
ತಾಜಮಹಲಿನ ಹಾಲುಗಲ್ಲಿನಲಿ ಪ್ರೀತಿ ಪ್ರತಿಬಿಂಬಿಸಿ
ಸದಾಸಿದ್ಧ ಗೊಮ್ಮಟೇಶ್ವರನ ಮಂದಸ್ಮಿತವ ಬಳಸಿ
ಗಂಗೆ, ಗೋದಾವರಿ, ಕೃಷ್ಣೆ, ತುಂಗಭದ್ರೆ, ಕಾವೇರಿಯರ
ತೆರೆ ಪರಂಪರೆಯಲ್ಲಿ ತಂಗಾಳಿ ಸೂಸಿ -
ಹಳ್ಳಿ ಹಳ್ಳಿಯ ಬದುಕ ಬೆಳ್ಳಿ ಚಿಕ್ಕೆಗೆ ಉಜ್ಜಿ
ದನಕರದ ಕೊರಳಿನಲಿ ಕಟ್ಟಿ ಹುರಿಗೆಜ್ಜೆ,
ಗುಡಿಸಲಿನ ಗೂಡಿಂದ ಹೊರಬಂದ ಹುಂಜ ಕೊರಳೆತ್ತಿ ಕೂಗಿ
ಬೆಳಗಾಯಿತು.

ಗಿರಣಿ ಬಂಬಿನ ಹುತ್ತದಿಂದ ಹೊಗೆಯೆದ್ದು
ಹಾವು ಹೆಡೆ ಬಿಚ್ಚಿತು!

ಬೀದಿಯೀ ತುದಿಯಿಂದ ಆ ತುದಿಯವರೆಗೆ
ರಬ್ಬರು ಗಾಲಿಯುರುಳಿ, ಎಬ್ಬಿಸಿತು ಧೂಳಿ.
ನಳದಲ್ಲಿ ನೀರು ಗೊರಗೊರ ಸದ್ದು ಮಾಡಿ
ಹಂಡೆ ಕೊಡಗಳ ಜೊತೆಗೆ ತೋಡಿಕೊಂಡಿತು ತನ್ನ ಸುಖ ದುಃಖ.

ಆಕಾಶವಾಣಿಯಲಿ ತಕ್ಕ ದೇವರ ನಾಮ.
ಹೊರ ಬಾಗಿಲಿಗೆ ಬಂದು ಹಾಲು ಅಳೆದನು ಗೌಳಿ;
ಸುದ್ದಿಯಲಿ ಅದ್ದಿ ತೆಗೆದಿರುವ ಪತ್ರಿಕೆ ಬಂದು ಬಿತ್ತು
ಜೊತೆಗೆ ಚಹವೂ ಬಂತು -
ಮತ್ತೇನು ಸುದ್ದಿ?

೨

ನಿನ್ನೆ ಮೊನ್ನೆಯದು, ತಿಂಗಳು ವರುಷದಾಚೆಯದು
ಇಂದಿಹುದೆ? ಇಹುದು - ಇಲ್ಲ;
ನಾಳೆ ನಾಡಿದ್ದು ದೇವರೇ ಬಲ್ಲ.
ಯುಗ ಯುಗಗಳನು ಸೆಳೆದು ತುಳಿದು ತಳಹದಿ ಮಾಡಿ ಮೇಲೆ ನಿಂತು
ಮುಗಿಯ ಬಂದಿಹುದೇನೊ ಮೊದಲ ಹಂತ -
ನಡೆದಷ್ಟು ದೂರ ಸಾರುವದು ದೂರದ ದಿಗಂತ.
'ಅಡಿಯ ಮುಂದಿಡೆ ಸ್ವರ್ಗ
ಅಡಿಯ ಹಿಂದಿಡೆ ನರಕ
ಅಡಿಗಶ್ವಮೇಧ ಫಲ'- ಸಾಗಿಹುದು ಪಾದಯಾತ್ರೆ;
ಯಾರು ಬಲ್ಲರು, ನಾಳೆ ಈ ಗುಡಿಯ ಮುಂದೆಯೇ
ನೆರೆದೀತು ದೊಡ್ಡ ಜಾತ್ರೆ.

ಕಣ್ಣೆದುರು ಬಣ್ಣದಲಿ ಹೊಳಹುಗೊಂಡೇಳುತಿಹ
ದೇಶದುದ್ದೇಶಗಳ ಹೊಸತು ನಕ್ಷೆ.
ಲಕ್ಷ ಲಕ್ಷದ ಜನದ ಆಶೆಯಾಕಾಂಕ್ಷೆಗಳ ಭರವಸೆಯ
ಬೆಳ್ಳಿ ರೇಖೆ!
ಒಂದೊಂದೆ ಇಟ್ಟಂಗಿ, ಒಂದು ಕಬ್ಬಿಣ ಬುಟ್ಟಿ ಗಚ್ಚುಗಾರೆ
ಕೋಟಿ ಕೈಗಳ ದಾಟಿ, ಕೋಟಿ ಹೃದಯವ ಮೀಟಿ
ಜಾತಿ, ಕುಲ, ಪಂಥ; ಊರು, ತಾಲೂಕು, ಜಿಲ್ಲೆ, ಪ್ರಾಂತ -
ಮೀರಿ ಅಂಥಿಂಥ ಸಂಕುಚಿತ ಮೇರೆ
ಸಮರ್ಪಿಸಿದೆ ಕೋಟಿ ತಾರೆಯ ಬೆಳಕಿನೆಲ್ಲ ಧಾರೆ.

ನಿಲ್ಲಿ ನದಿಗಳೆ ಇಲ್ಲಿ, ನಿಮಗೆಲ್ಲಿ ವಿಶ್ರಾಂತಿ, ನಿಂತು
ಸಾಗರವಾಗಿ, ವಿದ್ಯುದಾಗರವಾಗಿ ಮುಂದೆ ಸಾಗಿ;

ನೂರು ಯೋಜನ ನೆಲವನೆಲ್ಲ ಹಚ್ಚಗೆ ನಗಿಸಿ
ತೆನೆತೆನೆಯ ತಲೆದೂಗಿಸಿ
ನಿಮ್ಮ ಹೊನಲಿನ ಶಕ್ತಿ ಯುಕ್ತಿಯಲಿ ಆಗಸಕೆ ತಂತಿ ಬೀಸಿ
ಮನೆ -ಮಹಡಿ, ಗುಡಿ - ಜೋಪಡಿ, ಬೀದಿಯಿಕ್ಕಟ್ಟಿನಲಿ ಬೆಳಕು ಸೂಸಿ.
ಹಳ್ಳಿ ಪಟ್ಟಣ ನಗರ, ಗುಡ್ಡ ಕೊರಕಲು ಕಂಟಿ
ಎಲ್ಲೆಂದರಲ್ಲಿ ಶ್ರಮದಾನಕ್ಕೆ ಶುಭದ ಹಾದಿ.
'ಮೆಲ್ಲೆಲರಿಂ ಪೂತ ಕೊಳಂಗಳಿಂ ಕೆರೆಗಳಿಂ ಕಾಲೂರ್ಗಳಿಂ ಕೆಯ್ಗಳಿಂ'
ತುಂಬಿ ತೂಗಿ.

'ಚಾಗದ ಭೋಗದಕ್ಕರದ ಗೇಯದ ಗೊಟ್ಟಿಯಲಂಪಿನಿಂಪು -
ಗಳ್ಗಾಗರ ಮಾಗಿ'
ಹೊಸ ರೂಪ ರಚನೆಯಲಿ ಕಂಗೊಳಿಸಿ ಕಸುವಾಗಲಿದೆ ನಾಡು
ಅದಕಿದೇ ಮೊದಲ ನಾಂದಿ.
ಬರಿಯ ಹಾರೈಕೆಗಳನುಂಡು ಸೊರಗಿದ ದೇಹದಲ್ಲಿ ಬಿಸಿನೆತ್ತರಿನ
ಸಂಚಾರ -
ನೀರು ಗೊಬ್ಬರವುಂಡು, ಭೂಮಿಯಾಳಕೆ ನೂರು ನಾಲಗೆಯ ಚಾಚಿ
ಹೊಸಬಾಳ ಚಿಗುರು ಹೂ ಹಣ್ಣುಗಳ ಬಸಿರಲ್ಲಿ ಹೊತ್ತಿರುವ
ಜೀವಯಜ್ಞ.

ವರುಷ ವರುಷಕೆ ನಮಗು ನಿಮಗೂ ಬೇವು ಬೆಲ್ಲದ ಯುಗಾದಿ
ಬಿಡುಗಡೆಯ ಪಡೆದ ಈ ನಾಡು ಹುಡುಕುತಿದೆ ಸರ್ವೋದಯದ
ಸುಖದ ಹಾದಿ.
ಐದೈದು ವರುಷಗಳ ಸೋಪಾನವನ್ನೇರಿ ಆಪಾದಮಸ್ತಕವ
ನೋಡಿಕೊಂಡು
ನವಯುಗಾರಂಭದಲಿ ಅಂಬೆಗಾಲಿಟ್ಟ ಶಿಶು ಆಗಲೇ ಬೆಳೆದು ನಿಂತು
ಹಾಲಿನ ಬಾಟ್ಲಿ ಬಿಟ್ಟು, ಬಟ್ಟಲನ್ನವ ತೊರೆದು ತನ್ನಿಚ್ಛೆಯಲಿ ತಾನೆ
ಉಣ್ಣುತಿದೆ ಐದೈದು ಬೆರಳ ತುತ್ತು...
'ಸರ್ವೇಜನಾಃ ಸುಖಿನೋಭವಂತು.'
ಕೆಡುಗಾಳಿ ಬಿಟ್ಟಾಗ ಈ ಮಗುವಿಗೊಂದಿಷ್ಟು ನೆಗಡಿ ಕೆಮ್ಮು;
ಜ್ವರದಲ್ಲಿ ಬಡಬಡಿಸಿ, ಒಮ್ಮೊಮ್ಮೆ ಹೆದರಿಸಿಬಿಡುವುದೂ ಉಂಟು.
ಆದರೂ ನೆರೆಹೊರೆಯು ಬೆರಗುಬಡುವಂತಿಹುದು ಇದರ ಬೆಳವಣಿಗೆ:
ವರ್ಣಮಾಲೆಯ ಕಲಿತು, ಗುಣಿತಾಕ್ಷರವ ತೀಡಿ, ಅಂಕಿಮಗ್ಗಿಯ ಮುಗಿಸಿ
ವರ್ಗದಲಿ ಎಲ್ಲರಿಗೂ ಮುಂದಾಯಿತು.
ಮುಂದಿನದು ಬರೆದಂತೆ ಹಿಂದಿನದು ಮರೆಯುತ್ತ ಹೊರಟರೇ ಸ್ವಲ್ಪ ಕಷ್ಟ
ಅದಕಾಗಿ ಆಗೀಗ ಆಗಬೇಕಿವಗೆ 'ಅಜ್ಜಯ್ಯನಭ್ಯಂಜನ'-
ಗಾಂಧಿ ಗಾಂಧಿ ಗಾಂಧಿ
ಹೆಜ್ಜೆ ಹೆಜ್ಜೆಗೆ ಮನಸಿನಲ್ಲಿ ಕಟೆಯುತ್ತಿಹುದು
ಅವನ ಮನದಲಿ ಮೂಡಿ ಕೈ ಮೇಲೆ ಆಡಿ
ಹೆಗಲೇರಿ ಬೆಳೆದಂಥ ದಿವ್ಯ ಕನಸು.
ಹೊತ್ತು ಮುಳುಗಿತು ಎಂದು ಮತ್ತೆ ಹರಿದಾಡುತಿವೆ
ಸಿಕ್ಕ ಸಿಕ್ಕೆಡೆಗಳಲಿ ಹಾವು, ಚೇಳು;
ಕಾಡಿನಲಿ ಬೀಡು ಬಿಟ್ಟಿದ್ದ ಹುಲಿ, ಕರಡಿ, ಚಿರತೆ, ನರಿ, ತೋಳ
ನಾಡನಾಕ್ರಮಿಸಿ ಜಪ್ಪಿಸಿ ಕುಳಿತು, ಜಪಮಾಲೆ ಎಣಿಸುತಿವೆ

ಗುಂಡಾಡಿಸುತ್ತ ಬಾಲ.
ಅತ್ತ ಕತ್ತಲೆಯಲ್ಲ, ಇತ್ತ ಬೆಳಕೂ ಅಲ್ಲ;
ಮೋಟುಮರ ದೆವ್ವದಾಕಾರ ತಾಳಿರುವ ಸಂಧಿಕಾಲ.

ಎಂಥ ಕತ್ತಲೆಯಲ್ಲು ಸ್ವಂತ ತೇಜವ ಬಿಡದ
ಚಿಕ್ಕೆ ಬೆಳಕಿನ ಧೈರ್ಯ, ಶಾಂತಿ, ಔದಾರ್ಯ
ಈ ನಾಡಿನೆದೆಯಲ್ಲಿ ಮೂಡಬಹುದು;
ಇಂದಿನೀ ಕಂಬ, ತೊಲೆ, ಜಂತಿ, ತಂತಿಯ ಮೇಲೆ
ಇದರ ಬದುಕಿನ ಹಂತವೇರಲಿಹುದು;
ಮುಖ ಮುಖದ ನಡುವಿರುವ ಮಂಜು ಪರದೆಯು ಸರಿದು
ನಾಳಿನ ನವೋದಯವ ತೋರಲಿಹುದು.

ಲಾಗ

ಲಾಗ ಹೊಡಿಯೆಲೊ ಮಂಗ, ಲಾಗ ಹೊಡಿಯೆಲೊ ಮಂಗ
ಬಗ್ಗಿ ದಣಿಯರ ಮುಂದೆ ಲಾಗ ಹೊಡಿಯೊ;
ಹಾಕು ಅಂತರ್ಲಾಗ, ಹಾಕು ಜಂತರ್ಲಾಗ -
ನೆರೆದ ಮಹನೀಯರಿಗೆ ಶರಣು ಹೊಡಿಯೊ!

ಇಸ್ತ್ರಿ ಮಾಡಿದ ಪ್ಯಾಂಟು, ಕ್ರಾಪು ತಲೆ, ಬುಶ್ ಕೋಟು -
ತೊಗಲ ಚೀಲವ ಹಿಡಿದುಕೊಂಡು ಮಗನೆ;
ಅತ್ತಿತ್ತ ಹಣಿಕಿದರೆ ಲತ್ತೆ ಬಿದ್ದಾವು ಬಾ,
ಕುತ್ತಿಗೆಯ ಹಗ್ಗವನು ಜಗ್ಗಿದೊಡನೆ!

ಬಡಿವಾರ ಮಾಡುತ್ತ ಬಸನಿಂಗಿ ಬಂದಾಗ
ಓಡಿ ಹೋಗುವರೇನೊ ಬಡೇಮಿಯಾ?
ಲಾಗ ಹೊಡೆಯುತ ಬಂದು ಗಜಮು ನಿಂತರೆ ನಿನಗೆ
ದೊಡ್ಡ ಕೋಲಿನ ಪದವಿ, ನಿಸ್ಸಂಶಯ.

ಕಂಡ ಕಂಡವರೆದುರು ಹಲ್ಲು ಕಿರಿ, ಪರವಿಲ್ಲ;
ಕೆಲಸ ತೀರುವವರೆಗು ಮುಜುರೆ ಮಾಡು;
ತೊಲೆಯ ಸಂದಿಯ ನಡುವೆ ಬಾಲ ಜೋತಾಡಿಸುತ
ಕೀಲು ಹಿರಿದರೆ ಮಾತ್ರ ನಿನಗೆ ಕೇಡು!

ನೀ ಕೊಟ್ಟ ಹಣ್ಣು ರುಚಿ, ಹೃದಯವಿನ್ನೆಷ್ಟು ಸವಿ!
ಕಡಲ ತಳದಲಿ ಮೊಸಳೆ ತೆರೆದ ಬಾಯಿ-
ಮರದಲ್ಲಿ ಹೃದಯವನು ಬಿಟ್ಟ ಸೋಜಿಗವ ನುಡಿ,
ಬದುಕಿಕೊಳ್ಳಲು ಇದೇ ತಕ್ಕ ದಾರಿ.

ಬೆಕ್ಕು -ಬೆಣ್ಣೆಯ ಜಗಳದಲ್ಲಿ ತಕ್ಕಡಿ ತೂಗಿ
ನ್ಯಾಯದಾನವ ಗೈದ ನಿನ್ನ ಬುದ್ಧಿ -
ರಾಜಕಾರಣಿಗಳನು ತಲೆದೂಗಿಸಿಹುದಿಲ್ಲಿ
ನಿನಗಿಂತ ಅವರಿಗೇ ಹೆಚ್ಚು ಸಿದ್ಧಿ!

ಗುಲಗಂಜಿಯನು ಬೆಂಕಿ ಕಿಡಿಯೆಂದು ಊದಿದರೆ
ನಿನಗಂಜಿ ಚಳಿ ಹೋಯ್ತು, - ಬರೋಃಬರಿ;
ಸೂಚೀಮುಖಿನು ಪಟ್ಟಪಾಡು ಯಾರಿಗೆ ಬೇಕು
ಲಾಗ ಹೊಡಿಯೋ ರಾಜ, ನಿಂದೇ ಸರಿ!

ಪ್ರತಿ ವರುಷ ನಿನಗೆಂದೆ ವನಮಹೋತ್ಸವವುಂಟು
ಮೋರೆ ಒಣಗಿಸಿಕೊಂಡರೇನು ಬಂತು?
ಬೇರೆ ದೇಶಗಳಿಂದ ನಿನಗು ಬೇಡಿಕೆಯುಂಟು
ಸೇತು ಬಂಧವ ಬಿಟ್ಟು ಹಡಗ ಹತ್ತು.

ಲಾಗ ಹೊಡಿಯೆಲೊ ಮಂಗ, ಲಾಗ ಹೊಡಿಯೆಲೊ ಮಂಗ
ಲಾಗ ಹೊಡೆದರೆ ಬೇರೆ ತ್ಯಾಗ ಬೇಡ!
ಹಾಕು ಅಂತರ್ಲಾಗ, ಹಾಕು ಜಂತರ್ಲಾಗ-
ಡೋಲು ಬಡಿಸುವುದಕ್ಕೆ ಮರೆಯಬೇಡ.

ವಿಕಾರಿ

'ಬಿಕೊ' ಎನ್ನುತಿದೆ, ಹಾಳು ನೀಲಿಯ ಸುರಿವ ಆಕಾಶ,
ಅಲ್ಲಿ ಒಂದೇ ಸಮನೆ ಚಕ್ರ ಹಾಕುವ ಹದ್ದು -
ಅದಕೆ ಮದ್ದು.
ವಕ್ರ ಹಳಿಗಳಗುಂಟ ಹೊಟ್ಟೆ ಹೊಸೆಯುತ ಹೊರಟು
ನಿಂತಿಹುದು ರೈಲು.
ಬಿಸಿಲ ನೆತ್ತಿಯ ಬಿರಿವ ಸಿಳ್ಳು; ಕಪ್ಪು ಹೊಗೆ:
ಒಟ್ಟರಸಿ ಬಿಟ್ಟ ನಿಟ್ಟುಸಿರು!
ಬಡಕಲು ಗಿಡದ ಬುಡದಲ್ಲಿ ತಳಿರು ನಾಲಗೆ ಚಾಚಿ
ದಸದಸ ತೇಕುತಿದೆ ನಾಯಿ;
ಪಾತಾಳದಾಳಕ್ಕೆ ಸೇದು ಹಗ್ಗವ ಹಾಕಿ ಜಗ್ಗಿದಂತಿಹುದದರ ಬಾಯಿ!
ಊರು ಕೇರಿಯ ದಾಟಿ, ಕೋಲಿ ಹೊಲಗಳ ತುಳಿದು
ಕೆಮ್ಮಣ್ಣು ಮರಡಿಯಾಚೆ-
ಬಿಸಿಲ ಚಾಪೆಯ ಸುರುಳಿ ಬಿಚ್ಚಿ ಓಡುತ್ತಿಹವು ಎಲ್ಲಿಗೋ
ಬಿಸಿಲುಗುದುರೆ.

ವರುಷದುದ್ದಕ್ಕೂ ವಟಗುಟ್ಟಿತು ಕಪ್ಪೆ : ಈ ಜಗವೇ ಕೆಟ್ಟಿದೆಯೆಂದು,
ಸುತ್ತು ಸುತ್ತಿಗೂ ಬಾಳಿನ ಗಾಣಕೆ ಪ್ರಾಣವ ಹೂಡಿದೆಯೆಂದು,
ಕೀಲಿ ಜಡಿದಿರುವ ಗುದಾಮಿನೊಳಗೆ ಖಾಲಿ ಚೀಲಗಳೆ ಒಟ್ಟಿವೆಯೆಂದು,
ತುಂಬಿ ಬೆಳೆದ ಹೊಲ ನೋಡಿಕೊಂಡು ದನ ತುಡುಗಿಗೆ ಬಿಟ್ಟಿಹರೆಂದು.
ಕಟ್ಟಡದಲ್ಲಿಯ ಕಲ್ಲು ಸಿಡಿದು ತಾವಿಟ್ಟಲ್ಲಿರಲಾರೆವು ಎಂದು -

ಕೂಡಿ ಕಟ್ಟಿ ಬೆಳೆಸುವುದನೆ ಮರೆತಿವೆ ಬುದ್ಧಿಯೊ ತಲೆಗೊಂದು.
ಸೊಟ್ಟ ನಾಣ್ಯವೂ ದಿಟ್ಟಿಸಿ ನೋಡಿದೆ ಮನುಜನ ಮುಖವನ್ನು
ಬಟ್ಟೆಯ ಒಳಗೇ ಬೆಳೆಯುತ್ತಿದ್ದರು ಕಾಣದು ಬಿಳಿ ತೊನ್ನು -
ಆಗ ಈಗ ಲೊಚಗುಟ್ಟಿದೆ ಹಲ್ಲಿ, ಒಳಿತೋ ಒಳಿತೆನ್ನು.

ತೊಟ್ಟು ನೀರಿರದ ಬಟ್ಟ ಬಯಲಿನಲಿ ಸುಂಟರಗಾಳಿ -
ಕುಣಿವ ತಾಂಡವಮೂರ್ತಿ ಅಟ್ಟಹಾಸ!
ಮರ ಮರದ ಕೊಂಬೆಯಲಿ ಏನೊ ಪವಾಡ
ಚಿಂದುಟಿಯ ಮಂದಹಾಸ.
ಅಗ್ನಿಗೆಂಡವ ಹಾಯ್ದು ತಳಿರ ಪಲ್ಲಕ್ಕಿಯಲಿ
ಚಿಗುರು - ಹೂ-ಮಿಡಿ ಛತ್ರ ಚಾಮರವ ಹಿಡಿದು:
'ದೇವತಾ ಪೃಥಿವಿ'
ವರುಷ ವರುಷವು ತಪ್ಪದಂತೆ ಹೂವಿನ ತೇರು
ಬಾನ ಹರುಷಕೆ ನೆಲವು ತಾಯಿ ಬೇರು.
ಕೋಗಿಲೆಯ ಮೈದುಂಬಿ ಹೊಸ ಜೀವ ಬಂದಂತೆ
ಬರುವ ಸಂವತ್ಸರದ ಹೇಳಿಕೆಯ ಸಾರು.

ಯುಗ ಯುಗದ ವಿಸ್ಮೃತಿಯ ಬಾವಿ ತಳದಿಂದ ಕಪ್ಪಲಿ ಹೊಡೆದು
ಜೀವಕ್ಕೆ ನೀರು ಹಾಯಿಸುವ ಜುಳುಜುಳು ನಿನಾದ;
ಬದುಕಿನೆಲೆವಳ್ಳಿ ತೋಟ ಸೊಂಪಾಗಿ, ಕಬ್ಬಿನಾಲಿಯ ಹಾಲು
ಹಬ್ಬವಾಗಿ,
ಊರೂರ ಹಾದಿಯಲಿ ಬೆಳೆದ ಬೇವಿನ ಮರದ ನೆಳಲು ತಂಪಾಗಿ,
ಬಳಲಿಕೆಯ ಹೂದುಟಿಗೆ ಬೆಲ್ಲದಚ್ಚಾಗಿ-
ಸವಿಗೊಳಿಸಿ ಸಮರಸವ ಎದೆಗಿಳಿಸಲೆಂದಿತ್ತು ಆ 'ವಿಳಂಬಿ'.
ಅದಕೆ ಬೆಂಬಲವಾಗಿ ಬಂದೆಯಾ,

ಬಾ, -'ವಿಕಾರಿ'.
(ಆ ಹೆಸರು ನಿನಗಲ್ಲ, ನಮಗೇ ಸರಿ.)

ಒಳಗು ಹೊರಗೂ ನಿನ್ನ ಹರಿದು ತಿನ್ನುವರಿಹರು ಬಲು ಹುಷಾರಿ.
ನೀನಾಗದಿರು ಕಂಡ ಕಂಡವರ ಮೋರೆ ಪರಚಿಕೊಳ್ಳುವ ಮಾರಿ,
ಆಗು ಸುವಿಚಾರಿ, ಜನತೆಗುಪಕಾರಿ, ಜಗಕೆ ಮಂಗಲಕಾರಿ.
ಭೂತ ಭವಿಷತ್ತುಗಳ ಕಾದಾಟದಲಿ ನಿನ್ನ ವರ್ತಮಾನದ ಜೋಲಿ
ತಪ್ಪದಿರಲಿ
ನೀನಾಗು ತುಮುಲದಲಿ ತಲೆಯನೆತ್ತುವ ಕಲಿ
ನಿನ್ನ ಹೊಂಗನಸುಗಳು ನನಸಾಗಲಿ.

ಕೊನೆಯ ನಿಲ್ದಾಣ

೧

ಜೇನು ಹುಟ್ಟಿಗೆ ಯಾರೊ ಹೊಗೆಯಿಟ್ಟು ಹೋದಂತೆ
ಮಂದಿ ಗಿಜಿಗಿಟ್ಟಿರುವ ನಿಲ್ದಾಣ:
ಯಾವುದೋ ಊರು,
ಎಲ್ಲಿಯೋ ಏತಕೋ ಅವಸರದ ಕೆಲಸ.
ಮನದ ಕೊನೆಯಂಚಿನಲಿ ಮತ್ತಾವುದೋ ಸರಸ ವಿರಸ;
ನಿಂತಲ್ಲಿಯೆ
ಕುಳಿತಲ್ಲಿಯೆ
ಎದೆಯ ಮಗ್ಗದಲಿ ಮಿಂಚಿನ ಲಾಳಿ ಓಡಾಡಿದೆ!
ಕೈಯ ಗಡಿಯಾರದಲಿ ಕಾಲದ ನಾಡಿ ಮಿಡಿಯುತಿದೆ-
ಅಲ್ಲಿಗೂ ಇಲ್ಲಿಗೂ ಎಲ್ಲಿಗೋ ಎಳೆಯನೆಳೆದಾಡುತಿದೆ ಜೀವಜೇಡ!
　　ದೂರ ತಾರಸ್ವರದಿ ಕೂಗಿಕೊಂಡಿತು ಗಾಡಿ
　　(ಮುಗಿಲ ಭೇದಿಸಿ ಬರುವ ಅಶರೀರವಾಣಿ!)
　　ಅಡಪು ಹತ್ತಿದ ಮೈಯ ತುರಿಸಿಕೊಳ್ಳುತ ನಾಯಿ
　　ಎದ್ದು ಕಿವಿ ಝಾಡಿಸಿದೆ-
　　ಧಡ್... ಧಡ್... ಧಡ್... ಧಡ್
　　ಕಂಪಿಸಿದವೆರಡೂ ಕಂಬಿ
　　ನೂರು ಗಾಲಿಗಳುರುಳಿ ದಡ್ಡು ಬಿದ್ದಿರುವೆದೆಯು
　　ಹೊಡೆದುಕೊಂಡಿದೆ ಮತ್ತೆ ಧಡ ಧಡಿಸಿ -

ಓ ಬಂತು!... ಬಂತು ನುಗ್ಗಿತು ಗಾಡಿ
ಬಂದಂತೆ ಕೊನೆಗೊಮ್ಮೆ ಬೇರುಕಿತ್ತು!
('ಬಂದಿತೆಂದರು ಇದ್ದುದಿದ್ದೆ ಇತ್ತು'.)
ಸಾಮಾನು ಸಟ್ಟು ಎಲ್ಲಾ ಒಳಗಿಟ್ಟು ಕುಳಿತೆಯಾ?-
ಇಲ್ಲಪೋ ಇಲ್ಲಿ ಜಾಗ, ಡಬ್ಬಿ ಭರ್ತಿ.
ಮೋಟಾರು ಬಸ್ಸೊ, ಸಿನಿಮ ಸರ್ಕಸ್ಸೊ, ಎಲ್ಲಿ ಹೋದರೂ
ಇದೇ ಫಜೀತಿ!

ಎಂಥ ಹುಚ್ಚನೋ ನೀನು!
ಸುಮ್ಮನೆ ದಂಗು ಬಡಿದೇಕೆ ನಿಂತಿ?
ಹೂಂ ಹತ್ತು, ಜೋರಾಗಿ ಆ ಕಡೆ ಒತ್ತು, ಈಗ ನಿನ್ನ ಸರತಿ.
'ಮಹಾಜನೋಯೇನ ಗತಸ್ಸಪಂಥಾ'
ಯಾರಾದರೇನು, ತಮಗಿಷ್ಟು ಆರಾಮು ಜಾಗ ಸಿಕ್ಕರೆ ಸಾಕು-
ಸಾಕಪ್ಪ ಸಾಕು; ಕುತ್ತಿಗೆ ಹಿಡಿದು ದಬ್ಬುವುದೊಂದೆ ಬಾಕಿ!
ಎಲಾ ಅವಿವೇಕಿ,
ಗುಪಿನಲ್ಲೂ ನೀನು ಮಾತ್ರ ಏಕಾಕಿ!

* * *

ಇದು ಹೊರಟಿದ್ದೆ ಲೇಟು
ಬಂದು ಮುಟ್ಟಿದ್ದು ಇನ್ನೂ ಲೇಟು;
ಸುಮ್ಮನೆ ಹೊಗೆ ಬಿಡುತ್ತಿದೆ ಸಾಹೇಬರ ಬಾಯ ಚಿರೂಟು:
ಫುಸ್.... ಫುಸ್... ಫುಸ್...
ಉಶ್‌ಶ್ .... ಎಲ್ಲಿ ಸತ್ತಿತೋ ಗಾಳಿ
ಒಂದೇ ಸವನೆ ಸೆಖೆ ಕುಚ್ಚುತಿದೆ
ಬಂದ ಬೆವರೆಲ್ಲ ಇಂಗಿ ಒಳ ಅಂಗಿ ಒಣಗಿ ಒತ್ತುಗರಡಾಗಿದೆ!
'ಸೋಡಾ ಲೆಮನ್ ಆರೇಂಜ್...'

'ಗರಮಾ ಗರಂ ಚಹಾ...'
'ಒಂದಾಣೆ ದಿನ ಪತ್ರಿಕೆ'
ಅರೆ, ಎಲ್ಲಿ ಹೋಯಿತು ಕೋಟಿನೊಳಗಿಟ್ಟ ಪಾಕೀಟು!
ಅದರ ಜೊತೆಗೇ ಇತ್ತು ಈಗ ತೆಗೆಸಿದ ತಿಕೀಟು,
ಐದರದೊಂದು ನೋಟು!
ನನ್ನ ಪಾಲಿಗೇ ಬರಬೇಕೆ ಇಂಥ ಪಡಿಪಾಟು?
ಅಪರೂಪಕ್ಕೆ ಭೆಟ್ಟಿಯಾಗಿದ್ದ ಗೆಳೆಯರಿಗೆ
ಚಹ ಕುಡಿಸಲೊಂದಾಣೆ ಉಳಿಯಲಿಲ್ಲ.
ಅವರಾದರೂ ನನ್ನ ಕರೆಯಲಿಲ್ಲ;
ಯಾವ ಡಬ್ಬಿಯನೇರಿ ಯಾರ ಡುಬ್ಬದ ಮೇಲೆ ಕುಳಿತರೋ ಯಾವ ಬಲ್ಲ!
ಕಿಟಕಿಯೊಳಗಿಂದಲೇ ಒಳಗೆ ತುರುಕಿರಬೇಕು ಅವರ ಹಮಾಲ.
ಬೆನ್ನ ಹಿಂದೆಯೆ ಬೆಕ್ಕಿನೊಲು ಬಂದು ನಿಲ್ಲುವನೀಗ ಚೆಕ್ಕರು.
ಇದ್ದುದನು ಹೇಳಿದರೆ ನಂಬಬಹುದೇ ಅವನು?
ಹಾಗೂ ಹೀಗೂ ಜಡಿದು ವಸೂಲು ಮಾಡದೆ ಬಿಡನು.
ಇಲ್ಲಿ ಗದ್ದಲದಲ್ಲಿ ಕಣ್ಣು ತಪ್ಪಿಸಿ ನುಸುಳಿ ಪಾರಾಗಬಹುದು-
ಅಲ್ಲಿ ಏನೋ ಎಂತೊ
ನಾನಿಳಿವ
ಆ
ಕೊನೆಯ ನಿಲ್ದಾಣದಲ್ಲಿ!
(ಜಪ್ತು ಮಾಡಿದರೆ ಮಾಡಲಿ, ನನ್ನ ಕಿಸೆಯೆಲ್ಲ, ಖಾಲಿ.)

* * *

ಇದು ದೊಡ್ಡ ನಿಲ್ದಾಣ ಕೂಟ
ಇಲ್ಲಿಂದಲೇ ಹೊರಟು ಇಲ್ಲಿಗೇ ಬಂದು ಕೂಡುವವೆಲ್ಲ ಕಡೆಯ ಗಾಡಿ;
ದೇಹಾದ್ಯಂತ ಸಂಚರಿಸಿ ಪುಪ್ಪುಸಕೆ ಹರಿವಂತೆ ರಕ್ತನಾಡಿ.
ನಮ್ಮ ಗಾಡಿಗೆ ಏನು ಬಂತೊ ಧಾಡಿ-

ನಿಂತು ನಿಂತಲ್ಲಿಯೇ ಗೊರಕೆ ಹೊಡೆಯುತ ಮಲಗಿಬಿಡುವ ರೂಢಿ.
ಎಲ್ಲಿ ಹೋದನೊ ಪುಣ್ಯಾತ್ಮ ಗಾರ್ಡ
ತ್ರಿಶಂಕುವಿನಂತೆ ನಮ್ಮನ್ನಿಲ್ಲಿಯೆ ಬಿಟ್ಟು; ಕೈಯಲ್ಲಿ ತಾಳಕೊಟ್ಟು
ಕುಣಿಯ ಹಚ್ಚಿದನಲ್ಲ, ಇವನೊಬ್ಬ ದೊಡ್ಡ ಕೀರ್ತನಕಾರನೇ ಥೇಟು!
ಆಕಳಿಸಿ, ತೂಕಡಿಸಿ, ಓಕರಿಸಿ ಸಾಕಾಯ್ತು ಮೂಗು ತಿಕ್ಕಿ!
ಒಬ್ಬರ ಮೇಲೊಬ್ಬರು ಹತ್ತಿ ಹತ್ತಿಕ್ಕಿ ಹತ್ತಿಯಂಡಿಗೆಯಂತೆ ತುಳಿಯುತ್ತಿಹರು -
ಹೊಡೆಯಬಾರದೆ ಗಂಟೆ
ಊದಬಾರದೆ ಸೀಟಿ!
ಉರುಳಬಾರದೆ ಒಮ್ಮೆಲೇ ನೂರು ಗಾಲಿ!
'ಊಧೋ ಉಧೋ ಒಳಗಿದ್ದ ಬೆಳಕೆ ಬೆಳಕೇ
ಉಧೋ ಉಧೋ ಹೊರಗೆ ಬಾ ಏಕೆ ಒಳಕೆ!'

೨

ಧಡಗ್... ಗಡಗ್... ಧಡಗ್... ಗಡಗ್...
ಇದ್ದ ಶಕ್ತಿಯನ್ನೆಲ್ಲ ಒಟ್ಟುಗೂಡಿಸಿ ಮುಂದಕೆಳೆಯಿತೆಂಜಿನ್ನು
ಒಂದೊಂದೆ ಸುತ್ತು ಎಣಿಸುತ್ತ ಉರುಳಿದವು ಗಾಲಿ,
ಉಸಿರಾಡಿಸಿತು ಗಾಳಿ,
ಸಾಗಿದವು ಡಬ್ಬಿ ಹೊಯ್ದಾಡುತ್ತ ಒಂದರ ಹಿಂದೆ ಒಂದು...
ದೊಡ್ಡ ಸಂಸಾರಕ್ಕೆ ಒಬ್ಬನೇ ದುಡಿಯುವವ
ಹಬ್ಬಿ ಬೆಳೆದಿದೆ ಬಳಗ ತೂಗು ತೊಟ್ಟಿಲವಾಗಿ, ಬೆಳ್ಳಿ ಬಟ್ಟಲವಾಗಿ
ಒಂದಕ್ಕೆ ಹತ್ತಾಗಿ, ಹತ್ತು ನೂರಾಗಿ!
ವರುಷ ವರುಷಗಳೆಷ್ಟೋ ಗತಿಸಿದವು ಹೀಗೆಯೇ ಹಳಿಗುಂಟ ಸಾಗಿ.

ಜಗ್ ಜಗ್ ಝುಕು ಝುಕು
ಜಗ್ ಜಗ್ ಝುಕು ಝುಕು ಜಗ್ ಜಗ್...
ಓಹೊ! ಕುಣಿಯಲೂ ಬಲ್ಲುದೀ ಗಾಡಿ ಒಮ್ಮೊಮ್ಮೆ ಉನ್ಮಾದಗೂಡಿ.
ಒಳ್ಳೆ ಪ್ರಾಯದ ಮೋಡಿಃ
ಹತ್ತಿದಿಬ್ಬವ, ಸಿಳ್ಳು ಹೊಡೆದು, ಹುಬ್ಬನು ಕುಣಿಸಿ
ಹಸಿರ ಸೆರಗನು ಜಗ್ಗಿ ಸರಸವಾಡಿ
ಸೇತುವೆಯನೊತ್ತಿ ಮುತ್ತಿಟ್ಟು ಆಲಿಂಗಿಸುತ
ಕಣಿವೆ ಕಂದರಗಳಲಿ ಕಟ್ಟಾಡಿಸಿ-
ಜಗ್ ... ಜಗ್.... ಝುಕು... ಝುಕು
ಜಗ್... ಜಗ್...
ಕೊಂಚ ಮುಗ್ಗರಿಸಿತ್ತು ಗಾಡಿ, ಬಿತ್ತು ಬ್ರೇಕು!
ಅಂತು ಇಂತೂ ಕೊನೆಗೆ ಬಂದು ಮುಟ್ಟಿತು ಇಗೊ ಬಂತು ನಿಲ್ದಾಣ;
ನಿಟ್ಟುಸಿರುಗರೆದು ನಿಂತಿತೋ ಆಗಿ ನಿತ್ರಾಣ;
ಹತ್ತುವರು ಇಳಿಯುವರು ಮುತ್ತಿ ಮುಗಿ ಬೀಳುವರು

ಮತ್ತೆ ನಿನ್ನಂಥವರು ಎಷ್ಟೋ ಜನ!
ಎಡಬಲದ ಗಿಡಮರಗಳೋಡಿ ಡಿಕ್ಕಿಯ ಹೊಡೆದು,
ಗಿರಿದರಿಗಳೆಲ್ಲ ಗರ ಗರ ತಿರುಗಿ, ಎಲ್ಲಿಗೋ ಬೀಸಿ ಒಗೆದು,
ಗಕ್ಕನೆ ಚೇನು ಜಗ್ಗಿ ನಿಲ್ಲಿಸಿದಂತೆ ಬಹುದೂರ ನೆನಪು-
ಇಡಿಯ ಹಾಡಿನಲಿ ಎದೆಯ ಮಿಡಿದಂತೆ ಯಾವುದೋ ಒಂದು ಚರಣ;
ಇರಲಿ; ಹೊತ್ತಾಯ್ತು ಮತ್ತೇಕೆ ಆ ಎಲ್ಲ ಹಳೆ ಪುರಾಣ?
ಹೊರು ನಿನ್ನ ಹೋಲ್ಡಾಲು
ಹಿಡಿದುಕೋ ಕೈಚೀಲ
ಇಳಿದು ಬಿಡು ಸಾವಧಾನ.

ಜಗ್... ಜಗ್.... ಜಗ್... ಜಗ್...
ಚಲಿಸುತಿವೆ ಗಾಲಿ,
ಮತ್ತೆ ಎಲ್ಲಿಂದಲೋ ಬಂತು ತ್ರಾಣ
ಎಲ್ಲಿಹುದೊ, ಈ ಇದರ ಕೊನೆಯ ನಿಲ್ದಾಣ?!

ಮೆರವಣಿಗೆಯ ಮುಂದೆ ಮಶಾಲು

೧

ಆಧುನಿಕ ಕನ್ನಡ ಕವಿಗಳ ಮೌಲ್ಯಮಾಪನ ಮಾಡುತ್ತ ಶ್ರೀ ಕೀರ್ತಿನಾಥ ಕುರ್ತಕೋಟಿಯವರು 'ನಡೆದು ಬಂದ ದಾರಿ'ಯಲ್ಲಿ ಶ್ರೀ ಚೆನ್ನವೀರ ಕಣವಿಯವರ ಕುರಿತು ಹೀಗೆ ಅಭಿಪ್ರಾಯ ಪಟ್ಟಿದ್ದಾರೆ :'....(ಇವರ) ಕಾವ್ಯ ಮಾರ್ಗ ಯಾವುದೆಂಬುದು ಇನ್ನೂ ನಿರ್ದಿಷ್ಟವಾಗಿಲ್ಲ... ಹಳೆ - ಹೊಸ ಸಂಪ್ರದಾಯಗಳ ನಡುವೆ ಅವರು ಹೊಯ್ದಾಡುತ್ತಿದ್ದಾರೆ.... ಇತ್ತೀಚಿನ ಅವರ ಕವಿತೆಗಳಲ್ಲಿ ಮಾತ್ರ ಅವರ ಪ್ರಯತ್ನ ನವ್ಯತೆಯ ಕಡೆಗೆ ಸಾಗಿದೆ. ಆದರೆ ನವ್ಯತೆಯ ಕಡೆಗೆ ಸಾಗುವಾಗ ಕಣವಿಯವರು ಎಚ್ಚರ ವಹಿಸಿದ್ದು ಬಹಳ ಸಂತೋಷದ ಸಂಗತಿಯಾಗಿದೆ. ಮುಖ್ಯವಾಗಿ ಅವರ ಕಾವ್ಯದೃಷ್ಟಿ ನಿಸರ್ಗದ, ಜೀವನದ ಚೆಲುವಿಗೆ ಆಕರ್ಷಿತವಾದ 'ರೋಮ್ಯಾಂಟಿಕ್' ದೃಷ್ಟಿಯಾಗಿದೆ. ಈ ದೃಷ್ಟಿ ನವ್ಯವೂ ಆಗಬಹುದು. ಆದರೆ ಈ ರೂಪಾಂತರಕ್ಕೆ ಬುದ್ಧಿವಾದದ ಸರ್ವಗ್ರಾಹಿಯಾದ ಹಿಡಿತ ಅವಶ್ಯವಾಗಿದೆ. ಕಣವಿಯವರು ಮುಖ್ಯವಾಗಿ ಭಾವನಾ ಪ್ರಧಾನ ಕವಿಗಳಾಗಿದ್ದಾರೆ'.

ಆಧುನಿಕ ಕನ್ನಡ ಸಾಹಿತ್ಯದ ಒಂದು ಸಮಗ್ರವೂ ಸಂಗ್ರಹವೂ ಆದ ಸಮಾಲೋಚನೆ ಬಂದದ್ದೇ ತಕ್ಕ ಮಟ್ಟಿಗೆ ಶ್ರೀ ಕುರ್ತಕೋಟಿಯವರ ಲೆಕ್ಕಣಿಕೆ ಯಿಂದ. ಆದ್ದರಿಂದ ಅದಕ್ಕೆ ಒಂದು ಬಗೆಯ ಪ್ರಮಾಣತ್ವ ಬರುವದು ಸಹಜ, ಅಂತೆಯೇ ಅವರ ಅಂಬೋಣವನ್ನು ಮೇಲೆ ಉದ್ಧರಿಸಿದ್ದು. ಆದರೆ ಈ ಉದ್ಧರಣದ ಉತ್ತರಾರ್ಧ ಒಪ್ಪಿಕೊಂಡರೂ ಪೂರ್ವಾರ್ಧವನ್ನು ಅಲ್ಲಗಳೆಯದಿದ್ದರೆ ಆ ಕವಿಯ ಕುರಿತು ಸಮೀಕ್ಷಕನು ಅಷ್ಟು ಪ್ರಾಮಾಣಿಕ

ವಾಗಿ ನಡೆದುಕೊಂಡಂತೆ ಅಲ್ಲ. ಕವಿ ಕಣವಿಯವರು ಸಂಪ್ರದಾಯ ಸಂದಿಗ್ಧರಾಗಿ ನಿರ್ದಿಷ್ಟ ನಿರ್ಣಯವಿಲ್ಲದೆ ಹೊಯ್ದಾಡುತಿದ್ದಾರೆಯೇ? ಅಂಥ ತೂಗುಯ್ಯಲೆಯ ತಾಕಲಾಟ ಅವರ 'ಆಕಾಶಬುಟ್ಟಿ'ಯಿಂದೀಚಿಗಿನ ಕಾವ್ಯ ರಚನೆಯಲ್ಲಿ ಕಂಡು ಬರುತ್ತದೆಯೆ? ಕಾವ್ಯದಲ್ಲಿ ನವ್ಯತೆಯನ್ನು ಅವರು ಹೇಗೆ ಕಂಡುಕೊಂಡಿದ್ದಾರೆ? ಬರೆ ಆ ಕಡೆಗೆ ಪ್ರಯತ್ನ ಸಾಗಿದೆಯೇ? ಈ ಬಗ್ಗೆ ಕಣವಿಯವರದೇ ಮತವೇನು?

'ಕನ್ನಡ ಕವಿತೆ ಈಚೆಗೆ ಒಂದು ಹೊಸ ಆಕೃತಿಯಲ್ಲಿ ನೂತನ ರಚನಾ ವಿಧಾನದೊಂದಿಗೆ ರೂಪಗೊಳ್ಳುತ್ತಿದೆ.... ಇಂಥದೇ ಒಂದು ನಿರ್ದಿಷ್ಟ ಸ್ವರೂಪವನ್ನು ಅದು ತಳೆದಿದೆಯೆಂದು ಈಗಲೇ ಹೇಳ ಬರುವಂತಿಲ್ಲ ವಾದರೂ, ತನ್ನದೇ ಆದ ಸ್ವತಂತ್ರ ರೀತಿಯಲ್ಲಿ ಅದು ಬೆಳೆದು ಬರ ಬೇಕಾದದ್ದು... ಈ ಸಂಗ್ರಹ ದ ಕೆಲ ಕವಿತೆಗಳಲ್ಲಿ ನವ್ಯ ಕಾವ್ಯ ಮಾರ್ಗದ ಹಲವು ಅಂಶಗಳನ್ನು ಕಾಣಬಹುದು. ಆಧುನಿಕ ಭಾವಗೀತೆ ಹಾಗೂ ನವ್ಯ ಮಾರ್ಗಗಳ ನಡುವೆ ನಿರ್ಮಾಣಗೊಂಡಿರುವ ಕಂದರಕ್ಕೆ ಇದು ಸೇತುವೆಯಾದೀತೆಂಬ ನಮ್ರ ಭಾವನೆ ನನಗಿದೆ.' ನಾಲ್ಕು ವರ್ಷಗಳಾಚೆ 'ದೀಪಧಾರಿ'ಯ ಪ್ರಸ್ತಾವನೆಯಲ್ಲಿ ಬಂದ ಕವಿಯ ಕೈಫಿಯತ್ತು ಇದು.

ಅಂದರೆ, ಈ ಕವಿಗೆ ನವ್ಯ ಕಾವ್ಯ ಮಾರ್ಗ ಮುಖ್ಯವಾಗಿ ಒಂದು ರಚನಾ ವಿಧಾನ. ಸ್ವತಂತ್ರ ರೀತಿಯಲ್ಲಿ, ಹೆಚ್ಚು ಕಡಿಮೆ ಅಂಶದಲ್ಲಿ ಪಳಗಿಸಿಕೊಳ್ಳ ಬಹುದಾದ ಅದೊಂದು ಹೊಸ ತಂತ್ರ. ವಿಶಿಷ್ಟ ಅನುಭೂತಿಗೆ ನಿಯತವಾದ ಅಭಿವ್ಯಕ್ತಿಯ ಸ್ವರೂಪವಲ್ಲ. ನಿರ್ದಿಷ್ಟ ಸ್ವರೂಪವನ್ನು ಅದು ಇನ್ನೂ ತಾಳಬೇಕಾಗಿದೆ. ಈ ಕವಿಯ ಮಟ್ಟಿಗೆ ಖಚಿತವಾದ ತನ್ನದೇ ಆದ ಆ ರೂಪ ಭಾವಗೀತೆ ಮತ್ತು ನವ್ಯಕಾವ್ಯ ವರ್ಗಗಳ ಒಂದು ಸಮನ್ವಯ. ಶ್ರೀ ಕುರ್ತ ಕೋಟಿಯವರು ನಿಷ್ಕರ್ಷವಾಗಿ ನುಡಿದಂತೆ ಇದು ಹಳೆ-ಹೊಸ ಸಂಪ್ರದಾಯಗಳ ನಡುವಿನ ಹೊಯ್ದಾಟವಲ್ಲ. ಅವೆರಡರ ನಡುವಿನ ಸೇತುವೆ. ಮತ್ತು ಆ ದೃಷ್ಟಿಯಿಂದ ಕಣವಿಯವರ ನವ ನಿರ್ಮಿತಿಯ ಮಾರ್ಗ ನಿರ್ದಿಷ್ಟವೇ ಆಗಿವೆ.

ಕಾವ್ಯವೂ ಒಂದು ಕಲೆ. ಅದು ನಾಟ್ಯಾಭಿನಯದಂಥ ಐಂದ್ರಿಯಿಕ ಕಲೆಯಲ್ಲ. ಚಿತ್ರಶಿಲ್ಪದಂಥ ಮಾಧ್ಯಮಿಕ ಕಲೆ. ಈ ಕಲೆಯ ಆವಿಷ್ಕಾರಕ್ಕೆ ತಕ್ಕ ಮಾಧ್ಯಮ, ತಂತ್ರ ಮತ್ತು ರೂಪಣಕ್ರಿಯೆ ಬೇಕು. ಆಯಾ ಕೃತಿಯ ವಸ್ತು ತನ್ನ ವಿಕಾಸಕ್ಕೆ ಅರ್ಥವ್ಯಂಜನೆಗೆ ಅನುಕೂಲವಾದ, ಅನುರೂಪವಾದ ಆ ಮಾಧ್ಯಮ- ತಂತ್ರ- ಶೈಲಿ- ಪ್ರಕ್ರಿಯೆಗಳನ್ನು ತಾನೇ ಗೊತ್ತುಪಡಿಸುತ್ತದೆ. ಉತ್ತಮ ಚಿತ್ರಕಾರ ಒಮ್ಮೆ ತೈಲ ವರ್ಣ, ಇನ್ನೊಮ್ಮೆ ನೀರ ಬಣ್ಣ, ಮಗುದೊಮ್ಮೆ ಖಡುವಿನ ಪುಡಿ, ಮತ್ತೊಮ್ಮೆ ಇದ್ದಲಿಪುಡಿ ಯಾವುದನ್ನೊ ಆಯ್ದುಕೊಳ್ಳಬಹುದು. ಗೆರೆಗಳಲ್ಲಿಯೋ, ಲೇಪಗಳಲ್ಲಿಯೋ, ಕ್ಯೂಬಿಸ್ಟ್, ಅಜಂತಾ, ಸಾಂಪ್ರದಾಯಿಕ - ಬೇಕಾದ ಶೈಲಿಯಲ್ಲಿ ಚಿತ್ರ ಬಿಡಿಸಬಹುದು. ಅದೇ ರೀತಿ ಉತ್ತಮ ಶಿಲ್ಪಿಯದು. ಕಂಚೋ, ಕಲ್ಲೋ, ಕಟ್ಟಿಗೆಯೋ, ಪ್ಲಾಸ್ಟರೋ, ಮಣ್ಣೋ ಯಾವುದೇ ಮಾಧ್ಯಮದಲ್ಲಿ ತನ್ನ ರೂಹುಗಾರಿಕೆ ಯನ್ನು ಆಧುನಿಕ, ಅತ್ಯಾಧುನಿಕ ಯಾವುದೇ ತಂತ್ರದಿಂದ ಪ್ರಕಟಿಸುತ್ತಾನೆ. ತನ್ನ ಆಶಯಕ್ಕೆ ಒಗ್ಗುವ, ಒಪ್ಪುವ ರೀತಿ -ರೂಪ-ರಚನೆಯನ್ನು ಕಲಾವಿದ ಸ್ವೇಚ್ಛೆಯಿಂದ ನಿರ್ಣಯಿಸುತ್ತಾನೆ. ಇಂಥ ಸ್ವಚ್ಛಂದತೆ ಸಾಂಪ್ರದಾಯಿಕ ಹೊಯ್ದಾಟವಲ್ಲ. ತನ್ನ ಕಲೆಯ ಹಳೆ - ಹೊಸ ಸಂಪ್ರದಾಯಗಳನ್ನೆ ಬಲ್ಲ ಕಲಾವಿದನಿಗೆ ಸಾಮರ್ಥ್ಯವಿದ್ದಷ್ಟೂ ಸ್ವಾತಂತ್ರ್ಯವಿದೆ. ವಿಶಿಷ್ಟ ಕೃತಿಯ ಸಂದರ್ಭ ಸಂದೇಶಗಳೇ ಆತನಿಗೆ ಸಾಧನ - ಸಂಪ್ರದಾಯಗಳ ಆಯ್ಕೆಯನ್ನು ಸೂಚಿಸುತ್ತವೆ. ಹೀಗೆಂದ ಮಾತ್ರಕ್ಕೆ ಆ ಕಲಾವಿದನ ಮಾರ್ಗ ನಿರ್ದಿಷ್ಟ ವಾಗಿಲ್ಲವೆನ್ನುವದು ವಿವೇಕವಲ್ಲ. ಯಾವ ಮಾರ್ಗವೇ ಇರಲಿ, ಯಾವ ಮಾಧ್ಯಮವೇ ಇರಲಿ ಕಲಾವಿದನಿಗೆ ಬೇಕಾದದ್ದು ಅದರ ಅರಿವು ಮತ್ತು ಎಚ್ಚರ. ಅಂಥ ಎಚ್ಚರ ಕಣವಿಯವರ ಕಾವ್ಯಕ್ಕೆ ಪಟುತ್ವದ ಪುಟವೇರಿಸಿದೆ.

'ಕಾವ್ಯ ಮೀಮಾಂಸೆ'ಯ ಹಾಗೂ ಹಳೆ - ಹೊಸ ವಿಮರ್ಶೆಯ ಮರ್ಮಜ್ಞರಾದ ಪ್ರೊ. ತೀ.ನಂ. ಶ್ರೀಕಂಠಯ್ಯನವರು ಒಂದು ಪ್ರಸಂಗದಲ್ಲಿ ನನ್ನೊಡನೆ ಅಂದಿದ್ದರು : 'ಕನ್ನಡದ ಭಾಗ್ಯ ದೊಡ್ಡದು. ಅಡಿಗರಂಥ ಕನ್ನಡದ ಸತ್ವ, ಮರ್ಮ ಬಲ್ಲ ಕವಿ ನವ್ಯ ಮಾರ್ಗ ಹಿಡಿದಿದ್ದಾರೆ. ಇಲ್ಲವಾದರೆ,

ಭಾಷೆಯ ಹದವೇ ಅರಿಯದ ಕವಿಗಳು ಈ ದಾರಿಗೆ ಬಿದ್ದರೆ ಕನ್ನಡಕ್ಕೆ ಅನರ್ಥವಾಗುತ್ತಿತ್ತು!' ಇದೇ ಮಾತು, ಅಷ್ಟೇ ಅರ್ಥವತ್ತಾಗಿ ಶ್ರೀ ಕಣವಿಯವರ ಕುರಿತೂ ಅನ್ನಬಹುದು. ಚಿನ್ನಗನ್ನಡದ ಅಕ್ಕಸಾಲಿಗರು ಅವರು. ಕನ್ನಡವನ್ನೂ ಕವಿತ್ವವನ್ನೂ ಕೂಡಿಯೇ ಪ್ರಭುತ್ವದಿಂದ ಪ್ರಯೋಗಿಸಬಲ್ಲ ಪ್ರಾಜ್ಞರಿಗೆ 'ಹಾಯ್ದತ್ತಹದನ'ವೇ ಹೊರತು ಹೊಯ್ದಾಟವಿಲ್ಲ.

ಆದರೆ ಇಷ್ಟೊಂದು ನಿಜ. ಕವಿ ಅಡಿಗರ ನವ್ಯ ಕಾವ್ಯದ ಪ್ರಪಾತಕ್ಕೆ ಪ್ರೇರಣೆಕೊಡುವ ಶಕ್ತಿಮಯ ಗತಿಮಯ ಹತಾಶೆಯನ್ನು (dynamic despair) ಅದರಂತೆ ಜೀವನದ ಹಿನ್ನೆಲೆ ಪಡೆಯದ, ಭಿನ್ನ ಪ್ರಕೃತಿಯ ಹೆಚ್ಚು ಪ್ರಸನ್ನ ಮತ್ತು ಸೌಮ್ಯ ವ್ಯಕ್ತಿತ್ವದ ಈ ಕವಿಯಲ್ಲಿ ಅಪೇಕ್ಷಿಸುವಂತಿಲ್ಲ. ಕಣವಿಯವರ ಕಾವ್ಯ ಪ್ರತಿಭೆ ಆ ಎರಕಕ್ಕೆ ಹೊಯ್ದ ಧಾತುವಲ್ಲ. ಅಂಥ ನಿಷ್ಠುರವಾದ ಪ್ರತಿಭೆ ಇವರದಲ್ಲ.

ಎಂದ ಮಾತ್ರಕ್ಕೆ ಇದೊಂದು ಕುಂದು ಎಂದಲ್ಲ. ಇವರ ಕಾವ್ಯದ ಕಂದವೇ ಬೇರೆ ಕೆಚ್ಚಿನದು. ಆವಿದ್ಧಕ್ಕಿಂತ ಸುಕುಮಾರ ಪ್ರಯೋಗ ಇದರ ಸಿದ್ಧಿ. ಅಡಿಗರ ರೊಚ್ಚು, ರಭಸ ಇಲ್ಲಿ ಬಯಸಬಾರದು. (ರಾಜಾ, ರೋರರ್, ರಾಕೆಟ್‌ಗಳ ಉಲ್ಲೇಖ ಬಂದರೂ ಅದು ಇಲ್ಲಿ ನಗರಸಭೆಯ ಧ್ವನಿವರ್ಧಕದಲ್ಲಿಯೇ!) ಈ ಕವಿಗೆ ಪರಿಶುದ್ಧ ಕಾವ್ಯ ಲೇಖನದ ರಹಸ್ಯ ಸಾಧಿಸಿದೆ. ಆದರೂ ಅಂಥ ಕಾವ್ಯದ ಅರೆ ಪಾಲಾದ ಪ್ರತೀಕಾತ್ಮಕ ವಿಚಾರಸರಣಿ (Symbolic mode of thought) ಇವರ ಕಾವ್ಯಧಾರೆಯ ಪಾತ್ರವಲ್ಲ. ವಾಚ್ಯವನ್ನು ಪೂರ್ತಿ ಅಲ್ಲಗಳೆದು, ಸೂಚ್ಯಕ್ಕೇ ಹಾಯುವ 'ಭಣಿತ ಭಂಗಿಯೇ' ಇವರ ನವ್ಯ ತಂತ್ರದ ಪರಿಯಲ್ಲ. ಇಲ್ಲಿ ವಾಚ್ಯ ಸೂಚ್ಯಗಳೆರಡೂ ಪದ ಮೈತ್ರಿಯಲ್ಲಿ ಸಪ್ತಪದಿ ಹಾಕುತ್ತವೆ. ಕಣವಿಯವರ ಪ್ರತಿಮಾ ಸೃಷ್ಟಿ, ರೂಪಕ ಪ್ರಪಂಚ ನುಣ್ಣಗಿನ ನಯಗೊಳಿಸಿದ ಚೆಲುವಿನದಾಗಿದೆ. (The world is of subdued beatuy). ಇವರಿಗೆ ನವ್ಯತೆ ಒಂದು ಪ್ರತಿಜ್ಞೆಯಲ್ಲ. ಏಕ ನಿಷ್ಠವಾದ ಪ್ರಜ್ಞೆಯಲ್ಲ; ವ್ರತದೀಕ್ಷೆಯಲ್ಲ. ರಸ ಸಂಪ್ರದಾಯದ ಕವಿ ಹೊಸ ತಂತ್ರದಲ್ಲಿಯೂ ಮನೋಜ್ಞವಾಗಿ ಬರೆಯಬಲ್ಲನೆಂಬುದಕ್ಕೆ ಕಣವಿಯರ

ಸಂಕಲನ ಒಂದು ಧನ್ಯ ಸಾಕ್ಷಿ. ಅವರ ಈ ಹಳೆ ಹೊಸತರ ನವಪಾಕ 'ದೀಪಧಾರಿ'ಗಿಂತಲೂ ಹಿಂದೆ, 'ಆಕಾಶಬುಟ್ಟಿ ಯೊಳಗಿನ ಅಂಚೆಯಾಳಿ'ನಂಥ ಕವನಗಳೊಳಗಿಂದಲೂ ಛಾಯೆಗೊಂಡು ಸ್ಫುಟವಾಗುತ್ತ ಬಂದಿದೆ. ಆರಂಭದಲ್ಲಿ ಇವರ ನವ್ಯತೆ ಕವಿ ವಿನಾಯಕ (ಪ್ರೊ. ಗೋಕಾಕ)ರದಂತೆ ಹೊಚ್ಚ ಹೊಸ ಉಪಮಾನಗಳ ಆಯ್ಕೆ ನೆಯ್ಗೆಗಳಲ್ಲಿ ಪ್ರಕಟವಾಯಿತು. ಆಧುನಿಕ ಜೀವನದ ಲೌಕಿಕ ರಂಗಗಳಿಂದ ಇವರ 'ಅಪ್ರಸ್ತುತ' ವಿಧಾನಗಳು ಆಯ್ದು ಬಂದವು. ಆದರೆ ಈ ಆಯ್ಕೆಗೂ ಆಳವಾದ ಒಂದು ಮಾರ್ಮಿಕತೆ ಇತ್ತು. ಅದೇ 'ದೀಪಧಾರಿ'ಯ ಕವನಗಳಲ್ಲಿ ಇನ್ನಿಷ್ಟು ಸಾಂದ್ರವಾದ ಹದ-ಹುರುಳು ತುಂಬಿಕೊಂಡು ಒಡ ಮೂಡತೊಡಗಿತು. ಆದರೂ ಇದರ ಒಟ್ಟು ಆವರಣ ಮತ್ತು ಆವೇಶ (ಈ ವಿಶೇಷಣ ಕಣವಿಯವರ ಕಾವ್ಯಪ್ರಕೃತಿಗೆ ಅನ್ವಯಿಸುವದೇ ಆದರೆ!) ರಸ ಸಂಪ್ರದಾಯದ್ದೇ ಉಳಿಯಿತು. ಆದ್ದರಿಂದ ನವ್ಯ ಕಾವ್ಯ ಮಾರ್ಗದ ಕೆಲವು ಅತಿಮಹತ್ವದ ಲಕ್ಷಣಗಳಿಂದ ಇವರ ಕಾವ್ಯ ಇನ್ನೂ ದೂರವಿದೆ. ಆ ಲಕ್ಷಣಗಳು ಯಾವುವು?

ಕಾವ್ಯದಲ್ಲಿ ಲಯಗಾರಿಕೆ (Rhythm) ಭಾವನಾಮಯವಾದ ಅಂತರ್ಮುಖತೆಯನ್ನು ಸಾಧಿಸುತ್ತದೆ. ಹೊರ ಪ್ರಕೃತಿಯಲ್ಲಿಯೂ ಪ್ರಾಣಿ ಜೀವನದ ಅನೈಚ್ಛಿಕ ಶಾರೀರಿಕ ವ್ಯಾಪಾರಗಳಲ್ಲಿಯೂ ಅಡಕವಾಗಿದ್ದ ಲಯ ಬದ್ಧತೆಗೆ ಸಂವಾದಿಯಾಗಿ ಕವನದ ವೃತ್ತಿ ಬಂಧ ಇಲ್ಲವೆ ಛಂದೋಗತಿ ಓದುಗನಲ್ಲಿ ನಿಸರ್ಗ ದೊಡನೆ ಪ್ರಾಣಮಯ ಹಾಗೂ ಮನೋಮಯ ಪಾತಳಿಯ ಮೇಲೆ ಗಾಢವಾದ ತಾದಾತ್ಮ್ಯ ತುಂಬುತ್ತದೆ. ಇದರಿಂದ ಹೊರ ಪರಿಸ್ಥಿತಿಯಿಂದ ಬುದ್ಧಿಗೆ ಒಳಪಡುವ ಸಾಮಾಜಿಕ ಲೌಕಿಕ ಪರಿಸರದಿಂದ ಚಿತ್ತವು ಬಿಡುಗಡೆ ಹೊಂದುತ್ತದೆ. 'ನಿಯತಿಕೃತ ನಿಯಮ ರಹಿತಾ' ಎಂದು ಲಾಕ್ಷಣಿಕರು ಕಾವ್ಯದ ಲಕ್ಷಣವನ್ನು ಹೇಳಿದ್ದು ಅವರು ಭಾವಸಿದ್ದಕ್ಕಿಂತ ಹೆಚ್ಚು ಆಳವಾಗಿ ಸತ್ಯ. ಅದೇ ರೀತಿ ಕಾವ್ಯದ ಒಂದು ಪ್ರಯೋಜನವೆಂದು ಅವರು ಹೇಳಿದ 'ಸದ್ಯಃಪರ ನಿರ್ವೃತಿ'ಯೂ ಅವರು ಊಹಿಸಿದ್ದಕ್ಕಿಂತ ಗಂಭೀರ ವಾಗಿ ಯಥಾರ್ಥ. ಸಹೃದಯನ ಮನಸ್ಸು ಒಟ್ಟು ಸಾಮಾಜಿಕ, ಸಾಂಸಾರಿಕ

ಪರಿಸರದಿಂದ ಹಿಂದೆಗೆದು, ಒಳಸರಿದು ಅಖಿಲ ಮಾನವತೆಯ ಒಂದು ಭಾವನಾಮಯ ಸಾಮೂಹಿಕತೆಯಲ್ಲಿ ಪ್ರಾಚೀನ ಪ್ರಾಥಮಿಕ ಪ್ರವೃತ್ತಿಗಳ ಪ್ರಜ್ಞೆಯಲ್ಲಿ (ಅದಕ್ಕೆ 'ಪ್ರಜ್ಞೆ'ಎನ್ನುವುದೂ ಸರಿಯಲ್ಲ!) ಲೀನವಾಗುತ್ತದೆ.

'ಕವಿಯ ಏಕತಾನ ಕವನದಂತೆ ನಾದಲೀನ'

'ಬರಿಯ ಭಾವಗೀತ'ದ 'ಸಹಜಪ್ರಾಸ' ಮಾಯಾಲೀಲೆಯಿದು. ಈ ಏಕತಾನದ ಪ್ರತಿಕ್ರಿಯೆಯೇ ನವ್ಯ ಕಾವ್ಯದ ಧಾತುವಿಗೆ ವಿರೋಧಿ. ನವ್ಯ ಮಾರ್ಗದ ವೃತ್ತಿ ಸಮತಾನತೆ (Equivalence) ರಸಸಂಪ್ರದಾಯದಲ್ಲಿ ಮಿಂದೆದ್ದ ಕವಿಪ್ರಜ್ಞೆಗೆ ತನ್ನ ಮೈಯುಂಡ ಏಕತಾನತೆಯಿಂದ ಈ ಸಮತಾನತೆಗೆ ಬರುವದು, ಅದರ ಹದ-ಹತೋಟಿ ತಪ್ಪದಂತೆ ಕಾದುಕೊಳ್ಳುವುದೂ ಸುಲಭವಲ್ಲ. ತಾನು ಮನಸೋತು ಸೊಗಸು ಕಂಡಂಥ ಛಂದೋಗತಿಯ ಗುಂಗಿನಿಂದ ಬಿಡುಗಡೆಯಾಗಲು ಹೊರಟ ಕವಿಗೆ ಅದರ ಕಷ್ಟ ಹೆಚ್ಚು. ಇಷ್ಟವೂ ಕಡಮೆ, ಪ್ರಾಸದ ಹಿಡಿತ ಸಡಿಲಿಸಿದರೂ ಲಯದ ಮಿಡಿತ ಬಿಡುವುದಿಲ್ಲ. ಪಾದಗಳ ಉದ್ದಳತೆ ಹೆಚ್ಚು ಕಡಿಮೆಯಾದರೂ ಗಣಗಳ ಗತ್ತು ತಳದಲ್ಲಿ ತಾಳ ಹಾಕುತ್ತದೆ. ಶುದ್ಧ ಸ್ವಚ್ಛಂದ ಅರ್ಥಗತಿಯ ಲಯಕ್ಕೆ ಇದು ಅಪಾಯಕಾರಿ. ಇದನ್ನು ತಪ್ಪಿಸಲಿಕ್ಕೆ ಬರಿ ಬಳಕೆಯ ಮಾತಿನಲ್ಲಿ ಬರೆದರೆ ಸಾಲದು. ಬಳಕೆ ಮಾತಿನದೇ ಆದ ನಾದಲಯ ಸಾಧಿಸಬೇಕು.

ಈ ಲಯಬದ್ಧತೆಯ ಬಗೆಗೆ ಇನ್ನೂ ಒಂದು ಮಾತು ಗಮನಿಸಬೇಕು. ಲಯದ ಛಂದೋಗತಿ ಕಾವ್ಯದಲ್ಲಿ ಎರಡು ವಿಧ. ಒಂದು ರೇಖಾವಿನ್ಯಾಸ (Linear scansion). ತನ್ನ ಏಕಾಂತದ ಬೇಸರ ಕಳೆದುಕೊಳ್ಳಲೋ, ಭಾವನೆ ಹೆಚ್ಚಿಸಿಕೊಳ್ಳಲೋ ತನ್ನಷ್ಟಕ್ಕೆ ಹಾಡಿಕೊಳ್ಳುತ್ತ ಒಂಟಿದಾರಿ ಹಿಡಿದು ಸಾಗಿದಂತೆ. ಇಂಥ ಪದ-ಪ್ರಸ್ತಾರದಲ್ಲಿ ಲಯ ಶಿಥಿಲವಿರುತ್ತದೆ. ಅರೆ ಮರ-ವಿಂದ ಹೆಜ್ಜೆ ಮತ್ತೆ ತಾಳಗತಿ ತ್ವರೆಯಿಂದ ತಿದ್ದಿಕೊಂಡಂತೆ. ಅರೆಮರವಿಲ್ಲದಿದ್ದರೂ ಕಣವಿಯವರ ನವ್ಯಕವನಗಳ ಲಯ ಈ ಮಾದರಿಯದು. ಅಂದರೆ ನವ್ಯದ ನೆನಪಾದಾಗ ಫಕ್ಕನೆ ಲಯಗಾರಿಕೆಗೆ ವ್ಯತ್ಯಯ ತಂದಂತೆ ಅನಿಸುತ್ತದೆ. ಉದಾಹರಣೆಗೆ 'ಅಪರಾವತಾರ'ದಲ್ಲಿ 'ಅಲ್ಲಿದ್ದ ಇಲ್ಲಿದ್ದ' ಇವು ಬೇಕೆಂತ

ಮೊಟಕು ಮಾಡಿದ ಪಂಕ್ತಿಗಳು. ಆದರೂ ಈ ಕವನದ ಒಂದು ಗತ್ತು - ೫ ಮಾತ್ರೆಗಳ ಒಂದು ಗಣದ ತಾಲ - ಮೊದಲಿನ ೧೦ ಸಾಲುಗಳಿಗೂ ಅವ್ಯಾಹತ ವಾಗಿ ಸಾಗಿ ೧೧ ನೆಯ ಸಾಲಿಗೆ ನವ್ಯಕ್ಕೆ ಈ ಪ್ರಮಾಣ ಬದ್ಧತೆ ಸಾಲದೆಂಬಂತೆ ಒಮ್ಮೆಲೇ ಛಂದೋಭಂಗದ 'ಹುಸಿಗುಂಡು ಹಾರಿಸಿ'ದ್ದಾಗಿದೆ. ಹೀಗೆ ಅನಿಯಮಿತ ಲೆಕ್ಕದಲ್ಲಿ ಮಾತ್ರಾಗಣಗಳ ಗತಿಲಯಗಳ ಭಂಗ ತಂದು ನವ್ಯದ ಸ್ವಚ್ಛಂದಗತಿಯನ್ನು ಹರಿಸಲಾಗಿದೆ. ಇರಲಿ, ಇನ್ನೊಂದು ವಿಧ, ವಾಸ್ತು ವಿನ್ಯಾಸ - ಅಂದರೆ ಒಂದು ವಾಸ್ತುಶಿಲ್ಪ ಕಟ್ಟಿನಿಲ್ಲಿಸಿದಂತೆ. ಅದರ ಅಂಗಾಂಗ ಅಂತಸ್ತುಗಳ ಒಟ್ಟು ಪರಿಣಾಮ ಸುಸಂವಾದಿ, ಸುಸಂವೇದ್ಯ, ಕವನದ ಬೇರೆ ಬೇರೆ ಪರಿಚ್ಛೇದಗಳು ಒಟ್ಟಾಗಿ, ಒಂದು ಒಳಕಟ್ಟು ಸಾಧಿಸಿ ಇಡಿತನದ ಸಮತೋಲ ಕಾದುಕೊಳ್ಳುವ ಮಾದರಿ ಇದು. ನವ್ಯಕಾವ್ಯದ ನಿಜವಾದ ಲಯ ಈ ರೀತಿಯದು. ಇಲ್ಲಿ ಲಯ ಗಣಗುಣಿತವಲ್ಲ, ಸಮಗ್ರ ಕವನದ ಗತಿಧರ್ಮ. ಒಂದು ರಾಗದ ಆಲಾಪ ವಿಸ್ತಾರದಂತೆ ವೃಂದವಾದನದ ಸಂಘಟಿತ ಸಂಗೀತದಂತೆ (orchestral symphony) ಇದರ ತೋರಿಕೆಯ ಸಂಕೀರ್ಣತೆಯು ಕಾಂತಿಯುಕ್ತವಾಗುತ್ತದೆ. ಇಂಥ ಅವಯವ ಸಂಸ್ಥಾನ 'ನಾಳಿನ ನವೋದಯ'ದಲ್ಲಿ ಕೆಲವುಟ್ಟಿಗೆ ಕಂಡು ಬರುವಂತಿದೆ. 'ಬೆಳಗಾಯಿತು' ಈ ಪದ ಎರಡು ಸಲ ತಂದು ನಡುವೆ ಹನ್ನೆರಡು ಸಾಲುಗಳ ಸಂಪುಟೀಕರಣ ಮಾಡಿ ಒಟ್ಟು ಪರಿಣಾಮದ ಏಕಸೂತ್ರತೆ ಇಡಲಾಗಿದೆ. ಮೊದಲನೆಯ ಪರಿಚ್ಛೇದದ ಇದೊಂದೇ ಉದಾಹರಣೆ ಇಲ್ಲಿ ಸಾಕು.

ನವ್ಯಕಾವ್ಯದ ಇನ್ನೊಂದು ವ್ಯವಚ್ಛೇದಕ ಲಕ್ಷಣ ಇತಿಹಾಸ ಪ್ರಜ್ಞೆ - ಮಾನವ ವಿಕಾಸದ ಐತಿಹಾಸಿಕ ಇಂಗಿತಜ್ಞತೆ. ಮಾನವನ ನಿಯತಿಯ ರಂಗ ಭೂಮಿಯೆಂಬ ತಿಳಿವಳಿಕೆಯಿಂದ ಇತಿಹಾಸವನ್ನು ಓದಿದುದರ ಸಂಸ್ಕಾರ ಕವಿಯ ಮನಸ್ಸಿನ ಮೇಲೆ ಆಶಾವಾದವಾಗಿಯೂ ನಿಲ್ಲಬಹುದು. ನಿರಾಶಾ ವಾದವಾಗಿಯೂ ನಿಲ್ಲಬಹುದು. ಹೇಗೆ ನಿಂತರೂ ಆ ನಿಲುಮೆಗೆ ಆ ಮನಸ್ಸು, ಸಮಾಜದ ಇಲ್ಲವೆ ಧರ್ಮದ ಒತ್ತಾಯದಿಂದ ಒಂದೇ ವಸ್ತುವನ್ನು ಸಾಮ್ಯ ವಿರೋಧ ತಾರತಮ್ಯಗಳ ನೆಳಲು ಬೆಳಕುಗಳ ಛಾಯೆಗಳಲ್ಲಿ ಚಿತ್ರಿಸಬಹುದು.

ಇಂಥ ಕವಿ ಇತಿಹಾಸವನ್ನು ಪುನಃ ಪರಿಶೋಧಿಸಿಕೊಂಡಂತೆ. ರೊಮ್ಯಾಂಟಿಕ್ ಸಂಪ್ರದಾಯ ಇತಿಹಾಸವನ್ನು ಮಾನವ ವಿಕಾಸದ ಕಾಲಕ್ರಮಾಗತ ಸಾಮಾಜಿಕ ಪ್ರಜ್ಞೆಯನ್ನು ಮೆರೆಯುತ್ತದೆ.

'ಇದ್ದದ್ದು ಮರೆಯೋಣ
ಇಲ್ಲದ್ದು ತೆರೆಯೋಣ
ಹಾಲ್ಜೇನು ಸುರಿಯೋಣ
ಕುಣಿಯೋಣು ಬಾ'

ಎಂದು ಅದರ ರಸದಾಮಂತ್ರಣ. ಆದರೆ ಐತಿಹಾಸಿಕ ಮನೋಧರ್ಮದ ವಿಶಿಷ್ಟವೂ ಪ್ರತಿಷ್ಠಿತವೂ ಆದ ಅಭಿವ್ಯಂಜನೆ ನವ್ಯ ಕಾವ್ಯದ ಒಂದು ಮುಖ್ಯ ಅಂಗ. ಈ ಅಂಗದಲ್ಲಿ ಕಣವಿಯವರ ನವೀನ ಕಾವ್ಯ ಅಲ್ಲಲ್ಲಿ ಯಶಸ್ವಿಯಾಗಿದೆ.

ಈ ದೃಷ್ಟಿಯಿಂದ ಕಣವಿಯವರ ಕವನದಲ್ಲಿ Communication ಇರುವಷ್ಟು Communion ಇರುವುದಿಲ್ಲ. 'ಹೆಣದ ಹಿಂದೆ' ಹೋಗುವ ಹೆಣ್ಣನ್ನು ಕಂಡಾಗ ಬೇಂದ್ರೆಯವರ ಬಾಯಿಯಿಂದ 'ಆನಂದ ಸ್ಪಂದದಿಂದ ಹುಟ್ಟಿ ಬಂದ ಸೃಷ್ಟಿಯಿಂದ 'ಇಂಥ ದೃಶ್ಯ ಹುಟ್ಟಬೇಕೆ?- ಎಂಬ ಆರ್ತನಾದ ಹೊಮ್ಮುತ್ತದೆ. ಸೃಷ್ಟಿ ಹುಟ್ಟಿದ್ದು ಹೇಗೊ! ಅದರ ಆನಂದ ಸ್ಪಂದದಿಂದಲೋ ಅಲ್ಲವೋ! ಏನೇ ಇದ್ದರೂ ಕವಿಯ ಪ್ರತಿಭಾಚಕ್ಷು - ಜ್ಞಾನ ದೃಷ್ಟಿ - ಒಮ್ಮೆ ಅನಿಮಿತ್ತ ಆಬ್ರಹ್ಮಸ್ತಂಬ ಪರ್ಯಂತವೂ ಹಾಯ್ದು ಬರುತ್ತದೆ. ಇಂಥ ದೃಷ್ಟಿ ರೊಮ್ಯಾಂಟಿಕ್ ಪ್ರತಿಭೆಗೂ ಇರಬಹುದು. ಅನೇಕ ಪಾಶ್ಚಾತ್ಯ ನವ್ಯ ಕವಿಗಳಿಗೆ ಇಂಥ ಐತಿಹಾಸಿಕ ಅಂತಃಕರಣದೊಂದಿಗೆ ತಾದಾತ್ಮ್ಯದ ಉತ್ಕಟತೆ ಬಂದಿರುತ್ತದೆ. ಉತ್ಕಟತೆ ಈ ಕವಿಯ ಮನೋಧರ್ಮವಲ್ಲ. ಆರ್ಜವ ಮಾರ್ದವಗಳ ಲಾಲಿತ್ಯಪೂರ್ಣತೆ ಆ ಧರ್ಮದ ಅಂಶಗಳು. ಫ್ರೆಂಚ್ ಕವಿ ಫೆನಾಂ ಹಾಗೂ ಆಂಗ್ಲ ಕವಿ ಡಾಯಲನ್ ಥಾಮಸ್ ಇವರನ್ನು ಹೋಲಿಸಿ ಒಬ್ಬ ಜರ್ಮನ್ ವಿಮರ್ಶಕ ಹೇಳಿದ್ದ : The French poet is more civilized, but the English poet is more artistic'.

ಇಲ್ಲಿ ಫ್ರೆಂಚನ ಬದಲು ಕಣವಿ, ಆಂಗ್ಲನ ಬದಲು ಅಡಿಗರನ್ನು ಇಟ್ಟು ಕೊಂಡರೆ ಅಲ್ಲಿ ಸಲ್ಲುವ ನಿರ್ಣಯ ಇಲ್ಲಿಯೂ ಸಲ್ಲುತ್ತದೆ!

ನವ್ಯ ಮಾರ್ಗದ ಇನ್ನೊಂದು ಲಕ್ಷಣ ದುರೂಹತೆ. ಅಭಿಜಾತ ನವ್ಯ ಕಾವ್ಯಕ್ಕೆ ದುರೂಹತೆ ಅಂಟಿ ಬಂದ ಬ್ರಹ್ಮಗಂಟು. ಬಾಳಿನ ಜಟಿಲ ಕುಟಿಲ ಸಂಕೀರ್ಣತೆಯನ್ನು ಏಕಾಗ್ರವಾಗಿ, ಸಮಗ್ರವಾಗಿ ಬಿಂಬಿಸುವ ಕಾವ್ಯಕ್ಕೆ ದುರೂಹತೆ ಅನಿವಾರ್ಯ. ಸಾಮಾನ್ಯವಾಗಿಯೇ ವಿಶ್ವದ ಪದಾರ್ಥಕೋಶ ಕ್ಕಿಂತ ಶಬ್ದಾರ್ಥಕೋಶ ಎಷ್ಟೋ ಪಾಲು ಚಿಕ್ಕದು. ಈ ಪರಿಮಿತಿಯಿಂದಾಗಿ ಯಾವ ಭಾಷೆಯಲ್ಲಿರಲಿ, ಶಬ್ದಗಳಿಗೆ ಅನೇಕಾರ್ಥಗಳ ವ್ಯಂಜನೆ ಒದಗಿ ಬಂದಿದೆ. ಇಂಥ ಕ್ಲಿಷ್ಟ ಸಾಧನದಿಂದ ಅದಕ್ಕೂ ಕ್ಲಿಷ್ಟ ಸಾಧ್ಯವನ್ನು ಸಾಧಿಸ ಹೊರಟ ನವ್ಯ ಕವಿ ತನ್ನ ವಾಗರ್ಥಪ್ರತಿಪತ್ತಿಯಲ್ಲಿ ವಿವಿಧ ಸ್ತರಗಳನ್ನು ರಚಿಸುವುದು ಸ್ವಾಭಾವಿಕ. ಆಸ್ಕರ ವಾಯಿಲ್ಡ್ ಎಂದಂತೆ 'Truth is never pure and seldom simple' (ಸತ್ಯ ಶುದ್ಧವೆಂದೂ ಇರುವುದಿಲ್ಲ. ಸರಳ ವಿರುವದೂ ಅಪರೂಪ!) ಅಂಥ ಸತ್ಯವನ್ನು ಶಬ್ದಗಳಲ್ಲಿ ಸೆರೆಹಿಡಿದಾಗ ದುರೂಹತೆಯಲ್ಲದೆ ಬೇರೆ ಯಾವ ಶ್ರೇಯಸ್ಸು? ಆದ್ದರಿಂದಲೇ ಏನೋ ವಿಲಿಯಂ ಎಂಪ್ಸನ್ ಅಂದದ್ದು: 'Ambiguity is the essence' (ದೂರೂ ಹತೆ ಕಾವ್ಯದ ತಿರುಳು.) ಆದರೆ ಈ ಅತಿವಾದವೇ ಅಳತೆಗೋಲಾದರೆ ಕಣವಿಯವರ ನವ್ಯ ಕವನ ಕಾವ್ಯವೇ ಅನಿಸಲಿಕ್ಕಿಲ್ಲ. ಏಕೆಂದರೆ ಸಹೃದಯರ ಸುದೈವಕ್ಕೆ ಇವರ ಕವನಗಳು ಅರ್ಥದ ಅರ್ಕವನ್ನು ಅಡಗಿಸಿಟ್ಟು ಒಗಟಾಗಿ ನಿಲ್ಲುವುದಿಲ್ಲ. ಈ ಕವಿ ಕೇವಲ ತನಗಾಗಿ ತಾನು ಹಾಡುವವನಲ್ಲ. ತನ್ನ ಹಾಡಿಗೆ ಮಂದಿ ಕಿವಿ ಕೊಡುತ್ತಾರೆ. ಮೆಚ್ಚಿ ತಲೆದೂಗಲೂ ಬಹುದು - ಎಂಬುದನ್ನು ಈತ ಚೆನ್ನಾಗಿಯೆ ಬಲ್ಲ. ಆದ್ದರಿಂದ ಶೈಲಿಯ ಸುಭಗತೆ, ಅರ್ಥದ ಸುಗಮತೆ, ಸಹಸಾ ಕವಿಯ ಕೈ ಬಿಟ್ಟಿಲ್ಲ. ರಸ ಸಂಪ್ರದಾಯದ ಉತ್ತಮ ಪಾಕಸಿದ್ಧಿಯುಳ್ಳ ಈ ಕವಿ ಆಧುವಿಕ ಪದ ಪ್ರಯೋಗದ ಹವ್ಯಾಸ ದಲ್ಲಿ ಓದುಗರ ಮಿದುಳಿಗೆ ಮಿಂಚಿನ ಆಘಾತ ಕೊಡುವ ಹೊಂಚುಹಾಕಿಲ್ಲ.

ಇದಕ್ಕೆ ಇನ್ನೂ ಒಂದು ಉಪಪತ್ತಿ ಹೇಳಬಹುದು. ಆಧುನಿಕ ಕಾವ್ಯದ ಭಾಷೆಗೆ (Modern idiom) ನವ್ಯದ ಲಾಕ್ಷಣಿಕರು ಎರಡು ಉಗಮಗಳನ್ನು ಕಾಣಿಸುತ್ತಾರೆ - ಒಂದು ಆಂಗ್ಲ ಕವಿ ಡನ್‌ನಿಂದ ಬಂದ ಪರಮಾರ್ಥವಾದಿ (metaphysical) ಸಂಪ್ರದಾಯ; ಇನ್ನೊಂದು, ಫ್ರೆಂಚ್ ಕವಿ ಮೆಲಾರ್ಮೆಯಿಂದ ಬಂದ ಪ್ರತೀಕನಿಷ್ಠ (symbolist) ಪ್ರಘಾತ. ಇವೆರಡರ ಬಲವಾಗಿ ಬಂದ ಕಾವ್ಯಮಾರ್ಗದಲ್ಲಿ ಭಾಷೆಯ 'ಕ್ಲಿಷ್ಟತೆ'ಗಿಂತ ಕ್ಲಿಷ್ಟ ಅರ್ಕದ ಏಕಾಗ್ರತೆ ಮತ್ತು ಬಹುಲಾರ್ಥ ಪಾತಳಿಗಳ ಶಕ್ಯತೆ ವಿಶೇಷ ಲಕ್ಷಣಗಳಾಗಿವೆ. ಆದರೆ ಈ ಸಿದ್ಧಾಂತವನ್ನು ಅಮೇರಿಕನ್ ಕವಿಯೂ ನಿಬಂಧಕಾರನೂ ಆದ ರೀಡ ವ್ಹಿ ಟೆಮೋರ್ ಹೀಗೆ ಆಕ್ಷೇಪಿಸುತ್ತಾರೆ : 'Modern idiom is not so much the product of the metaphysical and syrnbolist tradtitons as it is a reaction against the verbal practices of our own day... It is a denial of new vices erupting up in the imagery of popular literature.' ಆದರೆ ಇಂಥ ಅಪಚಾರ ದುರಭ್ಯಾಸಗಳು ಕನ್ನಡ ಭಾಷೆಯ ಸಾಹಿತ್ಯಿಕ ಬಳಕೆಯಲ್ಲಿ ತೀವ್ರ ಪ್ರತಿಕ್ರಿಯೆ ಎಬ್ಬಿಸುವಷ್ಟು ಅತಿರೇಕವಾಗಿ ಇನ್ನೂ ಹಬ್ಬಿಲ್ಲ. ಎಷ್ಟೋ ಕವಿಗಳ ಭಾಷೆಗಿಂತ ನಮ್ಮ ಗದ್ಯ ಶೈಲಿಕಾರರ ಭಾಷೆ ಹೃದ್ಯವಾಗಿದೆ. ಕೆಲವು ಕವಿಗಳ ಪದ್ಯಕ್ಕಿಂತ ಗದ್ಯವೇ ಚೆಂದವಾಗಿದೆ! ಆದ್ದರಿಂದ ಬಂಡೆಬ್ಬಿಸಿ ವಿಚಿತ್ರ ವಿಕ್ಷಿಪ್ತ ಭಾಷಾ ಪ್ರಯೋಗ ಹೂಡುವ ಪ್ರಚೋದನೆ ಕಣವಿಯಂಥ ತೀವ್ರ ಸಂವೇದನೆಯ ಕವಿಗೂ ಇರುವುದಿಲ್ಲ. ಇದರಿಂದಲೂ ಅವರಲ್ಲಿ ದುರೂಹತೆ ಅಷ್ಟಿಲ್ಲ. ಅಗಮ್ಯ ರಮ್ಯತೆಯ ಇಂದ್ರಜಾಲ ಬೀಸುವ ಗಾರುಡಿಗತನಕ್ಕೂ ಈ ಸಾತ್ವಿಕ ಕವಿ ಬೀಳುವುದಿಲ್ಲ.

ಕೊನೆಯದಾಗಿ, ನವ್ಯಕಾವ್ಯದ ಮಾಧ್ಯಮ ವಾಚ್ಯಾರ್ಥವಲ್ಲ. ಬಿಡಿ ಶಬ್ದಗಳೂ ಅಲ್ಲ. ಉಪಮಾರೂಪಕಗಳ ಹಚ್ಚಡವೂ ಅಲ್ಲ. ಪ್ರತೀಕಗಳೇ ನವ್ಯಮಾಧ್ಯಮ. ಇನ್ನು ಉಪಮಾನಗಳ ಪ್ರತಿಮಾಸೃಷ್ಟಿಯ ಉದ್ದೇಶ ಎರಡು: ಒಂದು ಅರಿವಿಗೆ, ಆಸ್ವಾದ್ಯತೆಗೆ ನೆರವಾಗುವದು; ಇನ್ನೊಂದು, ಪರಿಣಾಮ

ವನ್ನು ಇನ್ನಿಷ್ಟು ಉತ್ಕಟಗೊಳಿಸುವುದು. ಆಡುವ ಮಾತಿನಲ್ಲಿ ಆವೇಶ ಉತ್ಕಟತೆ ತುಂಬುವ ಕಸಬೆಲ್ಲವೂ ಉತ್ತಮ ಶೈಲಿಯೆಂದೂ, ಅರ್ಥ ಆಶಯವನ್ನು ಪೂರ್ಣವಾಗಿ ಸಮರ್ಪಕವಾಗಿ ಪ್ರಕಟಿಸುವ ಕಸಬನ್ನು ಶೈಲಿಯ ದೌರ್ಬಲ್ಯವೆಂದೂ ಭಾವಿಸುವ ಒಂದು ವಿಕೃತ ರುಚಿ ರೂಢವಾಗಿದೆ. ಈ ರೂಢಿಮೂಢರಿಗೆ ಜಾಣತನದ ಮಾತಿಗಿಂತ ಮಾತಿನ ಜಾಣತನವೇ ರಸೋಲ್ಲಾಸವಾಗಿ ಕಾಣುತ್ತದೆ. ಇಂಥ ರುಚಿವ್ಯಭಿಚಾರಕ್ಕೆ ನವ್ಯಕಾವ್ಯಮಾರ್ಗ ತೀವ್ರವಾದ ಪ್ರತಿಕ್ರಿಯೆ. ಇದು ನಿಜವಿದ್ದರೆ ಕಣವಿಯವರ ಶೈಲಿ ಈ ಕಸಬನ್ನು ತುಂಬ ಕೈಗೂಡಿಸಿಕೊಂಡಿದೆ. ಇವರ 'ದೀಪಧಾರಿ' ಸಂಗ್ರಹದಿಂದಲೇ ಈ ಕೆಳಗಿನ ಪ್ರತಿಮಾಸೃಷ್ಟಿಯನ್ನು ಎತ್ತಿಕೊಳ್ಳಲಾಗಿದೆ. ಇಲ್ಲಿ ಮೇಲೆ ಹೇಳಿದ ಎರಡನೆಯ ಉದ್ದೇಶವಿದ್ದೂ ಮೊದಲನೆಯ ಉದ್ದೇಶಕ್ಕೆ ಪ್ರತಿಮೆಗಳನ್ನು ಅಪೂರ್ವ ಶಕ್ತಿಯಿಂದ ಪಳಗಿಸಿಕೊಳ್ಳಲಾಗಿದೆ:

ದೇಹ ಮೋಂಬತ್ತಿಯೊಲು ಮುಡಿದ ಬೆಳಕಿನ ಕುಡಿಗೆ
ಕರಗಿ ಮಿದುವಾಗಿತ್ತು ಅಂತರಂಗ.

(ಎಂಥ ಮಾರ್ಮಿಕ ಸೊಗಸು ತುಂಬಿದೆ ಮೇಣಬತ್ತಿಯ ಪ್ರತಿಮೆಯಲ್ಲಿ!)

ಬಾನ ಬೀದಿಗೆ ಜೋಲಿ ಹೊಡೆದು ಉರುಳಿವೆ ಮೋಡ
ಪಡುವಣದ ಪಡಖಾನೆಯಿಂದ ತೂರಿ.

(ಕಾಮರೂಪ ಮೋಡಗಳು ಸ್ವೈರಗತಿಗೆ ಎಂಥ ಸಮರ್ಪಕ ಛಾಯಾ ಭಾವದ ರೂಪಕವಿದು!)

ಹಸುರು ಜೊಂಡಿನ ಹೊಂಡದಲ್ಲಿ ಬಡಕಲು ಎಮ್ಮೆ
'ಈಸಬೇಕೋ ಇದ್ದು ಜೈಸಬೇಕೋ'.

(ದಾಸರ ಬೋಧ ವಚನಕ್ಕೆ ಎಂಥ ಅಕಲ್ಪಿತ ಪ್ರೇಕ್ಷಣೀಯತೆಯ ಪ್ರಯೋಗ ವೈಚಿತ್ರ್ಯವಿದು ! ಆದರೂ ಎಂಥ ಔಚಿತ್ಯ!)

ಎದುರು ಗೋಡೆಗೆ ಶಿಲುಬೆಗೇರಿಸಿದ ಗಡಿಯಾರ
(ಎಂಥ ಪ್ರಭಾವಿಯಾದ ಪ್ರತೀಕವಿದು!)

ಸೇದಿ ಬೀಸಾಡಿರುವ ಸಿಗರೇಟಿನು ತುಂಡಿನೊಲು
ದೂರದಲಿ ಕಾಣಿಸಿತು ಮಂಕು ಚಿಕ್ಕೆ.

* * *

ಮಾವು ಹೂವಿನ ಕೊಡೆವಿಮಾನದಿಂದಿಳಿತಂದು
ಬಂದ ಪ್ರೀತಿಯ ಕಂದ....

* * *

ತೊಗಲ ಬಾವಲಿಯಂತೆ ಜೋತಿರುವ ಜೋಪಡಿಯ ನೆರಳು.
(ಎಂಥ ಚಿತ್ರಮಯ ಉಪಮಾನಗಳು ಇವು!)
ನೆಟ್ಟಿರುಳು ಕೊರಳ ಹಿಸುಕಿದ ತೆರದಿ ನರಿಯ ಕೂಗು.

* * *

ನೆರಳಿನದೊಂದು ಪರಿವಾರವೇ ನಿಂದು
ಕೈ ಚಾಚುತಿದೆ ನರಗೆ 'ನಾರಾಯಣ'.

* * *

ಔಷಧಿಯ ಚಮಚ ಎಣೆ ಎಣಿಸಿತ್ತು
ಒಂದೊಂದೆ ಕೊನೆಯ ಗಳಿಗೆ.

(ಈಲಿಯಟ್‌ನ ಬಾಳನ್ನು 'ಕಾಫಿಸ್ಪೂನು'ಗಳಿಂದ ಅಳೆಯುವ ಪ್ರತಿಮೆ ಪ್ರಸಿದ್ಧವಿದೆ. ಕಣವಿಯವರ ಈ ಪ್ರತಿಮೆಯ ಧ್ವನಿ ಇನ್ನೂ ಸಾಂದ್ರವಲ್ಲವೆ?)

ಕಣ್ದೆರೆಯುತಿದೆ ನಸುಕು
ಬಾನ ಬಸುರಿಂದೊಗೆದ ಕೂಸು.
ಉಷೆಯು ತಾವರೆಗೈಗಳಲ್ಲಿ ಮಿಸುಕಾಡುತಿದೆ.

(ಇದಕ್ಕೂ ಹೃದ್ಯವಾದ ಪಂಕ್ತಿಗಳು ಆಧುನಿಕ ಕಾವ್ಯದಲ್ಲಿ ಎಷ್ಟಿವೆ?)

ಉಸಿರ್ಗಟ್ಟಿ ದ್ವೀಪ ಮೇಲಕೆದ್ದಿವೆ
ನೀಲನಿದ್ದೆಗೈದಿವೆ.

* * *

ನೆತ್ತಿಯಲಿ ಸುರುಳಿ ಸುತ್ತಿ ಮಲಗಿದ ಮೆದುಳು.

(ಅದೇ ಮೆದುಳು ಈ ಸಂಕಲನದ 'ಜೀರ್ಣೋದ್ಧಾರ' ಕವನದಲ್ಲಿ ಹೀಗೆ ವರ್ಣಿತವಾಗಿದೆ:

ಮೆದುಳಿನ ಮೇಲೆ ನಾಯಿ ಕೊಡೆ ಬೆಳೆಯುಸಿಕೊಂಡ ಶುದ್ಧ ಹುಂಬ!

(ಆ 'ನಾಯಿಕೊಡೆ'ಯ ಹಿಂದೆ 'ಎದ್ದು ನಿಂತಿದೆ ಮುಗಿಲವರೆಗೆ ವಿಷಧೂಮ ವಿಜಯಸ್ತಂಭ.' ಅಣುಬಾಂಬಿನ ಉತ್ಪಾತಕ್ಕೆ ಎದ್ದ ನಾಯಿ ಕೊಡೆಯಂತಹ ಪ್ರಳಯ ಮೇಘದ ಚಿತ್ರ ಮರೆಯದಿದ್ದವರಿಗೆ ಮಾನವನ ಮಿದುಳಿನ ಈ ವಿಕಾರಗೆಟ್ಟ ಸ್ವರೂಪ ಹೆಚ್ಚು ಹೇಯವಾಗಿ ಮನದಟ್ಟಾಗುವದು. ನಿಃಸತ್ವ, ಕ್ಷಣಿಕ, ನಿರುಪಯೋಗಿ ಬಾಳಿನಿಂದ ಅಣುಬಾಂಬಿನ ಅಗ್ನಿ ಪ್ರಳಯ - ದನಕವೂ 'ನಾಯಿಕೊಡೆ' ಪ್ರತೀಕ. ಅದೂ 'ಸುರುಳಿ ಸುತ್ತಿ'- ಹೆಬ್ಬಾವಿನಂತೆ! - ಬಿದ್ದ ಮಿದುಳಿನ ಹುತ್ತದಿಂದೆದ್ದದ್ದು!)

ಬಯಕೆ ಊದಿನ ಕಡ್ಡಿ ಬರೆದು ಹಾಕಿತು ದಿನವು ಬಿನ್ನಹದ ಓಲೆ:

(ತನ್ನನ್ನೆ ತಾನು ಉರಿಯಿಸಿ ಕಂಪು ಚೆಲ್ಲುವ ಊದಿನ ಕಡ್ಡಿಯ ಪ್ರತಿಮೆ, ಅದರಿಂದ ಸುಳಿಸುಳಿಯಾಗಿ ಎದ್ದು ವರ್ಣಮಾಲೆಯಂತೆ ಹಬ್ಬುವ ಹೊಗೆಯ ಬರೆಹ ಜಿನುಗಾದಷ್ಟೇ ನವುರಾಗಿಯೂ ಇದೆ.)

ಥಳಥಳಿಸುವೆರಡು ಬಂಗಾರ ಪಾದುಕೆ ಮೇಲೆ
ಆಡುತಿವೆ ಪೂಜಾರಿ ಕೈಯ ಬೆರಳು.

(ಇಲ್ಲಿಯ ಅರ್ಥ ನಿಬಿಡತೆ ಮೆಲುಕು ಹಾಕಿದಷ್ಟೂ ಮೆಚ್ಚಿಗೆ.)

ಮುಗಿಲು ಝುಗ ಝುಗ ಮಿಂಚಿ
ಹೊಡೆದು ಕೊಂಡಿತು ಸ್ನ್ಯಾಪು

(ಸಿಗಲಾರದಿನ್ನಿಂಥ ಜಗದ ಭಂಗಿ!)

*　　　*　　　*

ಎಲ್ಲಿ ಬಿರುಗಾಳಿಯಲಿ ಮುಗುಚಿ ಮೋಡದ ದೋಣಿ ಚಿಕ್ಕಿ ತಳಕಂಡವೋ!

*　　　*　　　*

ಕತ್ತಲೆಯ ಅಂಚಿನಲಿ ಬೆಳಕಿನೆರಕವ ಹೊಯ್ದು
ತೆಗೆದಿರುವ ಅಪ್ರತಿಮ ಪ್ರತಿಮೆ ನೂರು.

'Proper study of mankind is man' ಅಂದ ಕವಿ ಪೋಪ. ಇದನ್ನೆ ಕಾವ್ಯಭ್ಯಾಸಕ್ಕೂ ಅನ್ವಯಿಸಬಹುದು. ಕಾವ್ಯದ ಸಮ್ಯಗವಲೋಕನೆಯೆಂದರೆ ಕವಿಯ ಇಂಥ ಪ್ರತಿಮಾಸೃಷ್ಟಿಯ ಪರಿಶೀಲನೆ. ಮೇಲಿನ ಪಂಕ್ತಿಗಳಲ್ಲಿ ನವ್ಯಗಂಧಿಯಾದ ಉತ್ಪ್ರೇಕ್ಷೆಯ ದೀಪ್ತಿಯಿದೆ. ಈ ಕವಿಯ 'ಅಪ್ರಸ್ತುತ' ವಿಧಾನಗಳು 'ಪ್ರಸ್ತುತ'ದ ಅರ್ಥ ಪರಿಪೋಷಗೊಳಿಸುವವಲ್ಲದೆ ಅವುಗಳಿಗೆ ಹೆಚ್ಚಿನ ವ್ಯಂಜನೆಯ ಪ್ರಭೆಯ ಪರಿವೇಷಗಳನ್ನೂ ಕಟ್ಟುತ್ತವೆ. ಕಾವ್ಯದೃಷ್ಟಿಯ ಕೃತಕೃತ್ಯತೆ ಇದಕ್ಕೂ ಹೆಚ್ಚಿನದೇನಿದೆ?

೨

'ಮಣ್ಣಿನ ಮೆರವಣಿಗೆ'ಯಲ್ಲಿ ಭಾವಗೀತೆಯ ಸರಾಗ ಭಾವಪೂರ್ಣತೆ, ಅದರೊಂದಿಗೆ ಅನುಸ್ಯೂತವಾದ ಭಾಷೆಯ ಅನುರಣನ (resonance). ಅದರಲ್ಲಿಯೂ ನವ್ಯ ತಂತ್ರದ ಅಂಶಗಳನ್ನು ಅಳವಡಿಸಿಕೊಂಡು ಅರಳಿದ ವಸ್ತು ವಿನ್ಯಾಸ - ಈ ತ್ರಿಗುಣಾತ್ಮಕ ತಥ್ಯವು 'ನವೀನ ಕವಿತಾ ವಿಧಾನದ' ಒಂದು ಆಕೃತಿಯನ್ನು ನಮ್ಮ ಮುಂದೆ ಇರಿಸಿದೆ.

ನವ್ಯಧ್ವನಿಗೆ ನಿರ್ವೇದನವೇ ವೇದವಲ್ಲ. ವಿಷಾದವೇ ಯೋಗವಲ್ಲ. ವ್ಯಂಗ್ಯ ವಿಡಂಬನೆಯೊಂದೇ ವೈಖರಿಯಲ್ಲ. ವಿನೋದ, ವಾತ್ಸಲ್ಯ, ಕೌತುಕ, ಕಾರುಣ್ಯ, ಆಶೆ, ಆದರ್ಶಗಳ ರಸೋಲ್ಲಾಸವೂ ಈ ಹೊಸ ಪಾತ್ರದಲ್ಲಿ ತುಳುಕಾಡಬಲ್ಲುದು - ಎಂಬುದನ್ನು ಕಣವಿಯವರು ಕಾಣಿಸಿಕೊಟ್ಟಿದ್ದಾರೆ. ಈ ಯುಗದ ಧರ್ಮಸಂಕರದ ನರಕವನ್ನು ತೆರೆದು ತೋರಿಸುವದರೊಂದಿಗೆ 'All this and heaven too' ಎಂಬ ಶ್ರದ್ಧೆಯೊಂದು ನಿರಾಮಯ ಚಿತ್ತಕ್ಕೆ ಸ್ಥಾಯಿಯಾಗಿ ನಿಂತಿದೆ. ಅದರ ಆವಿಷ್ಕಾರವೂ - ಅವಶ್ಯ. ಮುಸುಕಿದ ಮೋಡಗಳ ಒಳಮೈಗೆ ಬೆಳಕಿನ ಸಂಪರ್ಕ ಇರಲಿ ಇಲ್ಲದಿರಲಿ, ಅದರ ಆಚೆಯ ಬಾನು ನೀಲಿಯೇ ಇದೆ -ಎಂಬ ನೆನಪು ನಮಗೆ ಈ ದುರ್ದಿನ ದಲ್ಲಿಯೂ ಅಡಿಗಡಿಗೆ ಬೇಕು. 'ನಾ ಬಲ್ಲೆ ನನಗೆ ಗೊತ್ತಿಲ್ಲವಾದರೂ ಎಲ್ಲಿ ಆಚೆಯಾದಂಡಿ'- ಎಂಬ ನಂಬಿಕೆಯೇ ಮಾನವ ಕೋಟಿಯನ್ನು ಕಣಿಯಲ್ಲಿ, ಗಿರಣಿಯಲ್ಲಿ, ಕಚೇರಿಯಲ್ಲಿ ಗಿರಿಶಿಖರವೇರುವುದರಲ್ಲಿ, ರೈಲು ಅಟ್ಟುವಾಗ, ಸರಕು ಮಾರುವಾಗ, ಸರಸ ವಾಡುವಾಗ, ಬೇನೆಯಲ್ಲಿ ನರಳುವಾಗ, ನಿದ್ದೆಯಲ್ಲಿ ಹೊರಳುವಾಗ - ಬದುಕಿನ ಯಾವ ಮಟ್ಟದಲ್ಲಿಯೂ ಮಗ್ಗಲಲ್ಲಿಯೂ ಮುಂದೊಯ್ಯುತ್ತದೆ. ಜಗತ್ತಿನಲ್ಲಿ ಆಶ್ಚರ್ಯವೇನು?... ಎಂದ ಯಕ್ಷ ಯುಧಿಷ್ಠಿರನಿಗೆ. ಯುಧಿಷ್ಠಿರನ ಉತ್ತರ ಜೀವನದ ಅಪಾರ ಶ್ರದ್ಧೆಯ ಸಾಕ್ಷಿ:

'ಅಹನ್ಯಹನಿ ಭೂತಾನಿ ವಿಶಂತಿ ಯಮ ಸಾದನಂ
ಶೇಷಾಃ ಜೀವಿತುಮಿಚ್ಛಂತಿ - ಕಿಮಾಶ್ಚರ್ಯಮತಃ ಪರಂ?'

ದಿನದಿನವೂ ಜೀವಕೋಟಿ ಯಮನೂರ ಜಾತ್ರೆಗೆ ಸಾಗುತ್ತದೆ. ಆದರೂ ಹಿಂದೆ ಉಳಿದವರು ಇನ್ನೂ ಬದುಕಬೇಕೆಂದೇ ಬಯಸುತ್ತಾರೆ! ಇದಕ್ಕೂ ದೊಡ್ಡ ಆಶ್ಚರ್ಯವೇನು? 'ಮಣ್ಣಿನ ಮೆರವಣಿಗೆ'ಯೂ ಇದೇ ಬಗೆಯ ಅಂತಃಶ್ರದ್ಧೆ ಹಿಡಿದು ಹೊರಟಿದೆ.

ಯಾವ ವಸ್ತುವನ್ನೂ ಹೆಸರೆತ್ತಿದ ಮಾತ್ರಕ್ಕೆ ಪ್ರತೀಕವಾಗಿಸುವ ಮಾಯಾಸ್ಪರ್ಶ ಇವರದಲ್ಲ. ಭಾಷೆ - ಭಾವಗಳ ಅನ್ಯೋನ್ಯ ಪ್ರತಿಬಿಂಬಗಳ ಚಿತ್ರಶಾಲೆಯನ್ನು ಅನಂತವಾಗಿ ತೆರೆದು ತೋರಿಸುವ ಊಹೆಯ ನಿರ್ಭರತೆ ತನ್ನದಲ್ಲವೆಂಬ ಆತ್ಮಜ್ಞಾನ ಈ ಕವಿಗೆ ಇದೆ. ಈ ಕವಿಯ ಶಕ್ತಿ ಸರ್ವಸ್ವವೇ ಈ ಜ್ಞಾನದಲ್ಲಿದೆ. ತನ್ನ ಅಂತಃಶಕ್ತಿಯನ್ನು ಪೂರ್ತಿ ಅಳವಡಿಸಿಕೊಳ್ಳಬಲ್ಲ ಕಲಾಜಾಗೃತ ಕರ್ಮಕೌಶಲ್ಯ ಕಣವಿಯವರಷ್ಟು ಬೇರೆ ಯಾವ ಕವಿಯೂ ಇತ್ತೀಚೆಗೆ ಕಾಣಿಸಿಲ್ಲ. ಔದಾರ್ಯ ಔಚಿತ್ಯಗಳ ನಳಪಾಕ ಇವರ ಕವಿತಾ ವಿಧಾನದ ತೀರದ ಸೊಗಸು. ಇವರನ್ನು ಓದಿದಾಗ ೧೫-೨೦ ವರ್ಷಗಳ ಹಿಂದೆ ಆಂಗ್ಲ ಕಾವ್ಯಾಕಾಶದಲ್ಲಿ ಮೂಡಿದ ಆಕ್ಸಫರ್ಡ್ ಗುಂಪಿನ ನವ್ಯ ನಕ್ಷತ್ರ ಪುಂಜ ಕಣ್ಣು ಕಟ್ಟುತ್ತದೆ. ಅವರಂತೆಯೇ ಈ ಕವಿಗೂ ಒಂದು ಸಾಮಾಜಿಕ ಆದರ್ಶ (Social idealism) ಇದೆ. ಕೇವಲ ಮೂರ್ತಿಭಂಜಕ ವೃತ್ತಿಯಲ್ಲ. ಆದರೆ ಅಂಥ ಉತ್ಕಟವೂ ನಿಕಟವೂ ಆದ ವೈಚಾರಿಕ ವಿಪ್ಲವದ ಕೆಂಡಗಳೊಳಗಿಂದ ಈ ಕವಿ ಹಾಯ್ದಿಲ್ಲ. ಆಡೆನ್, ಸ್ಪೆಂಡರ್, ಮೆಕ್‌ನೀಸ ಮುಂತಾದವರ ರಾಜಕೀಯ ಪ್ರಜ್ಞೆಯೂ ತೀವ್ರವಾಗಿತ್ತು, ತೀರ ಎಡ ಪಕ್ಷದ್ದಿತ್ತು. ಆ ಮಟ್ಟಿಗೆ ಈ ಕವಿಯು ಸ್ಥಗಿತ ; ಸ್ಥಿಮಿತ. ಆದರೂ ಕಣವಿಯವರಲ್ಲಿ (ಮೆಕ್‌ನೀಸನಂತೆ)? ಲಘುವಾದ ಸುಟಿಯಾದ ಒಂದು ಶೈಲಿಯೂ ಇದೆ. ಪರಿಹಾಸ ರೂಪದಲ್ಲಿ ಸಾಮಾಜಿಕ ಡೊಂಕುಗಳ, ಸಾಮಾಜಿಕ ಮನುಷ್ಯನ ವಿಕೃತ ಮಾದರಿಗಳ ಉಪಹಾಸ ಮಾಡುವ ಉತ್ತಮ ಶಕ್ತಿಯಿದೆ. ಇದಕ್ಕೆ 'ಅಪರಾವತಾರ' ಮತ್ತು 'ಲಾಗ' ಕವನಗಳೇ ಸಾಕ್ಷಿ. 'ಅಪರಾವತಾರ' ಓದುವಾಗ ಅಡಿಗರ 'ನನ್ನ ಅವತಾರ'ದ ನೆನಪು ಬರುತ್ತದೆ. ಅಲ್ಲಿ 'ನನ್ನ' ತನದಿಂದ ಬಂದ ನಾಟಕೀಯ ವಕ್ರತೆ ಇಲ್ಲಿ ಇಲ್ಲ, ಅಲ್ಲಿಯ ಅನುಪಾತ ದೃಷ್ಟಿ (Per-

spective) ಐತಿಹಾಸಿಕ. ಇಲ್ಲಿ ಅದು ಸಮಕಾಲಿಕ. 'ಲಾಗ' ಯಾರಿಗೂ ಮೆಚ್ಚಿಗೆ ಆಗಬೇಕಾದ ಉಪರೋಧ ಕವನ. 'ಕುತ್ತಿಗೆಯ ಹಗ್ಗವನ್ನ' ಜಗ್ಗಿದಂತೆ ಕುಣಿದು ಲಾಗ ಹಾಕಿ ಶರಣು ಹೊಡೆದು ಕಾಣಿಸುವ 'ಬಡೇಮಿಯಾ' ಕೋತಿ ಇಂದಿನ ಆತ್ಮವಿಕ್ರಯಶೀಲ ಮನುಷ್ಯನ ಪ್ರತೀಕ. ಆದರೆ ಇದು ಪ್ರತೀಕಮಾತ್ರವಾಗುವಷ್ಟು ಸೂಕ್ಷ್ಮ ಸೂಚ್ಯತೆಯಿಂದ ರೂಪುಗೊಂಡಿಲ್ಲ. 'ಸೇತು ಬಂಧವ ಬಿಟ್ಟು ಹಡಗಹತ್ತು'- ಎಂಥ ಧ್ವನಿಪೂರ್ಣವಾದ ಮಾರ್ಮಿಕ ಮಾತು! ಆದರೆ ಒಂದು ಮಾತು. ಲೋಕಪ್ರಿಯವಾದ ಎಲ್ಲ ಮಂಗಾಟಿಕೆಯ ಕತೆಗಳನ್ನೂ ಬಳಸಿಕೊಳ್ಳುವ ಹಟ ಇಲ್ಲಿ ಕವಿ ಇಟ್ಟುಕೊಂಡಂತೆ ಕಾಣುತ್ತದೆ. ಅವೆಲ್ಲ ನಿದರ್ಶನಗಳಲ್ಲಿ ಒಂದು ಒಳ ಹೊಂದಿಕೆಯ ಅರ್ಥವಿಕಾಸದ ಕ್ರಮ ಮೂಡಿಲ್ಲ.

ವ್ಯಂಗ್ಯವೋ, ವಿನೋದವೋ, ವೈಚಾರಿಕತೆಯೋ, ವರ್ಣನಾವಿಶೇಷವೋ- ಯಾವ ವಸ್ತು ವಿನ್ಯಾಸವೇ ಆಗಿರಲಿ ಯಾವ ಕವನದಲ್ಲಿಯೂ ಕವಿ ಸಹೃದಯನಿಗೆ ವಂಚನೆ ಮಾಡುವುದಿಲ್ಲ. ತೃಪ್ತಿಪಡಿಸುವರೇ ಹೊರತು ಚಕಿತ, ಸ್ತಂಭಿತ ಮಾಡುವುದಿಲ್ಲ. ತೀರ ಪಾರದರ್ಶಕವಲ್ಲವಾದರೂ ಇವರ ಕವನಬಿಂಬ ಅಷ್ಟು ಅಪಾರದರ್ಶಕವೂ ಅಲ್ಲ. ತುಸು ಚಿನ್ನಾಟವಾಡಿದ ಮೇಲೆ ಮರಿಗೆ ಉಣಿಸುವ ತಾಯಿಯಂತೆ ಇವರ ಕಾವ್ಯದ ಶಕ್ತಿ ಮತ್ತು ಶೈಲಿ.

ಈ ಸಂಗ್ರಹದ ತೀರ ಸಾಮಾಜಿಕ ಸಂದರ್ಭವುಳ್ಳ ಕವನಗಳೆಂದರೆ ಗುಣ ಕ್ರಮದಲ್ಲಿ 'ನಾಳಿನ ನವೋದಯ' ಮತ್ತು 'ಜೀರ್ಣೋದ್ಧಾರ', ಮಾನವ್ಯದ ಸಂದರ್ಭವಿದ್ದವು 'ಯುಗಾದಿ', 'ವಿಕಾರಿ', 'ವಕ್ರರೇಖೆ' ಮತ್ತು 'ಮಣ್ಣಿನ ಮೆರವಣಿಗೆ'. 'ಶಿಶುಕಂಡ ಕನಸು' 'ಮಣ್ಣಿನ ಮೆರವಣಿಗೆ'ಗೆ ಒಂದು ರೀತಿ ಪೂರಕ.

'ಕೊನೆಯ ನಿಲ್ದಾಣ' ಉಭಯಾನ್ವಯಿ. ವ್ಯಕ್ತಿ - ಸಮಾಜ ಎರಡೂ ತುದಿಗೆ ಅದು ಸಮ್ಮುಖ. 'ಅಪರಾವತಾರ' ಮತ್ತು 'ಲಾಗ' ವಿಕೃತಿಯೇ ಪ್ರಕೃತಿಯಾದ ಇಂದಿನ ವಿಶಿಷ್ಟ ಸಾಮಾಜಿಕ ಮಾನವನ ಮಾದರಿಗಳನ್ನು ಪ್ರತಿನಿಧಿಸುತ್ತವೆ. ಚಂದ್ರ ತಾರೆಗಳಲ್ಲಿಯೂ ರೂಪಾಯಿ ನಾಲ್ಕಾಣೆಗಳನ್ನೇ

ಕಾಣುವ, ಅಲ್ಲಿದ್ದ - ಇಲ್ಲಿದ್ದ ಸುಪ್ರಸಿದ್ಧ, ರೋಜಕರ್ಣಿಯನ್ನು ವೇದದಷ್ಟೇ ಪೂಜ್ಯವೆಂದು 'ಕೊಬ್ಬರಿಯ ಜತೆಗೆ ಅದರ ಕರಟವನ್ನೂ ತಿಂದುಬಿಡುವ' ವ್ಯವಹಾರಜ್ಞ. ಅರಸಿಕ ಸ್ವಾರ್ಥಶಿಖಾಮಣಿ, ಧೂರ್ತ ಶಿರೋಮಣಿ, ಗೋಮುಖ ವ್ಯಾಘ್ರ 'ಅಪರಾವತಾರ'ದಲ್ಲಿ ಪೂರ್ಣಾವತಾರ ತಾಳಿದ್ದಾನೆ. ಮೂರನೆಯ ಮಹಾಯುದ್ಧ ಇವನ ಅಂತರಂಗದಲ್ಲಿಯೇ ಹೊಗೆಯಾಡುತ್ತಿದೆ ಎಂದು ಕವಿ ಸಾರುತ್ತಾನೆ. ಈ ಕವನದ ಕೊನೆಯನ್ನು ವಿರಾಡ್ರೂಪದ ಸ್ತೋತ್ರದ ಪಂಕ್ತಿಗಳಿಂದ ಮಾಡಿ ಕವಿ ವಕ್ರೋಕ್ತಿಯ ಅಲೌಕಿಕ ವೈಖರಿಯನ್ನು ಕಾಣಿಸಿದ್ದಾನೆ. ಈ ನಮ್ರ ವೃತ್ತಿಯ ನರ್ಮವಚನದ ಕವಿ ಇದಕ್ಕೂ ತೀಕ್ಷ್ಣ ವಾಗ್ಬಾಣಗಳನ್ನು ಕಾವ್ಯದ ಕಮಾನಿಗೆ ಹೂಡಲಾರ! ಇನ್ನು 'ಇಸ್ತ್ರಿ ಮಾಡಿದ ಪ್ಯಾಂಟು ಕ್ರಾಪು ತಲೆ, ಬುಶ್‌ಕೋಟು' ತೊಟ್ಟವ, 'ಕಂಡ ಕಂಡವರೆದುರು ಹಲ್ಲು ಕಿರಿಯುವ', 'ಕೆಲಸ ತೀರುವವರೆಗು ಮುಜುರೆ ಮಾಡುವ', 'ಲಾಗ ಹೊಡೆದರೆ ಬೇರೆ ತ್ಯಾಗ ಬೇಡ'ವೆಂಬ ತತ್ವ ನಂಬಿದವ, ತನ್ನ ಡೋಲು ಬಡಿಸುವುದಕ್ಕೆ ಮರೆಯದವ ಬೇರೆ ಕೋತಿಯಲ್ಲ. ಆಧುನಿಕ ಹರಿಶ್ಚಂದ್ರ-ಅಸತ್ಯಕ್ಕಾಗಿ ಹೆಂಡತಿಯನ್ನೂ ತನ್ನನ್ನೂ ಮಾರಿಕೊಳ್ಳಲು ಮಾರ್ಕೆಟ್ಟಿನಲ್ಲಿ ನಿಂತು ಸವಾಲು ಕರೆಯುವ ಸಾಮಾಜಿಕ ಮನುಷ್ಯ!

ಇವೆಲ್ಲ ಕವನ ಕೃತಿಗಳಲ್ಲಿ ತಾರತಮ್ಯದ ವಿವೇಕ ಒಂದು ದುಡುಕು. ಏಕೆಂದರೆ, ರಸಪ್ರಪಂಚದಲ್ಲಿ ಅಭಿರುಚಿ, ಅದರ ಹಿಂದಿನ ಅಭ್ಯಾಸ ಬಲ ಇವೇ ಅಳತೆಗೋಲು; ಆಯ್ಕೆಯ ಒರೆಗಲ್ಲು. ಸಂಮಿಶ್ರ ಪ್ರತಿಮೆಗಳ ಬುದ್ಧಿ ಪೂರ್ವಕವಾದ ಕಲಬೆರಕೆ ಮಾಡಿ, ಕಟ್ಟಿದ ಸಂಕೀರ್ಣ ಪ್ರಭಾವಪುಂಜ ಒಂದೊಂದು ನವ್ಯ ಕವನ. ಆ ತಂತ್ರ ಅನುಸರಿಸಿದ ಮಟ್ಟಿಗೆ ಈ ಕವನಗಳಲ್ಲಿ, ಕವಿಯ ಹೃದ್ಗತದ ಅಭಿವ್ಯಕ್ತಿಯ ಪರೆ ಪದರುಗಳು ಓದುಗನ ನೋಟದ ನಿಟ್ಟು ನಿಲುಮೆ ನೇರ ಬೇರೆ ಬೇರೆಯಾದಷ್ಟೂ ಬೆರಗಿನದಾಗಿ ಕಾಣಿಸಬಹುದು. ಆದರೂ ಹಾಗೆ ವಿಂಗಡವಾಗಿ ಆಸ್ವಾದಿಸುವ ಮೊದಲು ಸಾಕಲ್ಯವಾಗಿ ಕೆಲವು ಸಂಗತಿಗಳನ್ನು ಗಮನಿಸಬೇಕು.

'ನಾಳಿನ ನವೋದಯ' 'ಜೀರ್ಣೋದ್ಧಾರ' 'ಮಣ್ಣಿನ ಮೆರವಣಿಗೆ' ಈ ಕವನಗಳ ಸಾಮಾಜಿಕ ಇಲ್ಲವೆ ಐತಿಹಾಸಿಕ ಸಂದರ್ಭ ಓದುಗನ ಸತ್ತ್ವ ಪರೀಕ್ಷೆ ಮಾಡುವಷ್ಟು ಭಾರವಾಗಿಲ್ಲ. ಇಲ್ಲಿಯ ಆಶಯದ ಮೇಲೆ ಬೆಳಕು ಬೀರಲು ಪ್ರೊ. ಟಾಯನಬಿಯನ್ನು ಮೆಲಕು ಹಾಕಬೇಕಾಗಿಲ್ಲ. ನವ್ಯಕಾವ್ಯ 'ರೋಮ್ಯಾಂಟಿಕ್' ಮಾದರಿಯಂತೆ 'ಹ್ಲಾದೈಕಮಯ'ವಾಗಿರದಿದ್ದರೂ 'ಅನನ್ಯಪರತಂತ್ರ'ವಾಗಿರಬೇಕು. ಹೊರಗಿನ ಉಪಾಧಿಗಳನ್ನು ಅವಲಂಬಿಸಿ ಅದರ ಅರ್ಥವ್ಯಾಪ್ತಿ ಇಲ್ಲವೇ ಸಮಸ್ಯಾ ಪೂರ್ತಿ ಇರಬಾರದು. ಅದು ಆಸ್ವಾದನೆಯ ಮಟ್ಟಿಗೆ ಸ್ವಯಂಪೂರ್ಣವಿರಬೇಕು. ಏನೆಲ್ಲ ಓದಿಕೊಂಡೇ ತಜ್ಞತೆಯ ತರಬೇತಿ ಪಡೆದೇ ನವ್ಯಕಾವ್ಯ ಕೈಗೆತ್ತಿಕೊಳ್ಳಬೇಕಾದರೆ, ಅದಕ್ಕೆ ಓದುಗರೇ ಸಿಗಲಿಕ್ಕಿಲ್ಲ. ಅಂಥ ಕವಿಗೆ ಸಮಾನಧರ್ಮ ಅಂಥ ಇನ್ನೊಬ್ಬ ಕವಿಯೇ. ಆದ್ದರಿಂದಲೇ ಏನೋ, ಉತ್ತಮ ತರಗತಿಯ ನವ್ಯಕವನ ಕೇವಲ ವಿದ್ವತ್ಪರಿತೋಷಕ್ಕೇ ಮೀಸಲಾದಂತೆ ಇದೆ. ಆದರೆ ಕಣವಿಯವರು ನವ್ಯವನ್ನು ನುಣ್ಣಗೆ ಮಾಡಿ ಪಚನಕ್ಕೆ ಹಗುರಾಗಿರಿಸಿ ಓದುಗರಿಗೆ ಉಪಕಾರ ಮಾಡಿದ್ದಾರೆನ್ನಬೇಕು.

ಈ ಕವನಗಳಲ್ಲಿ ಧರ್ಮಪ್ರವರ್ತಕನ ಕಾವಿಲ್ಲ. ತನ್ನ ಮತ ಮಾರುವ ವರ್ತಕನ ಕಸಬೂ ಇಲ್ಲ. ಹೊಸ ಧರ್ಮಾಂತರದ (Conversion) ಕೆಚ್ಚೂ ಇಲ್ಲ. ಇಲ್ಲಿ ದಯೆಗಿಂತ ದೂರದ ಧರ್ಮವಿಲ್ಲ. ಇಲ್ಲಿಯ ಚಿಂತನ ಶೀಲತೆಯು ಅಚಿಂತ್ಯದ ಚಿತ್ಸ್ವರೂಪವನ್ನು ಧ್ಯಾನಿಸುವುದಿಲ್ಲ. ರೂಢ ಧರ್ಮದ ಸಾಂಸ್ಕೃತಿಕ ಸೌಂದರ್ಯವೂ ಅದರಲ್ಲಿ ಉಳಿದಿರುವ ಅಜಾಗ್ರತ ಕಾವ್ಯವೂ ಕವಿಯ ಪ್ರತಿಮಾಸೃಷ್ಟಿಯ ಸಾಮಗ್ರಿ ಆಗಿದೆ. ಇಲ್ಲಿ ಅನುಭೂತಿಗಿಂತ ಸಹಾನುಭೂತಿಯೇ ಕವಿಯ ಚಿತ್ತಕ್ಕೆ ಉದ್ದೀಪನೆಯಾಗಿದೆ :

'ಗುಂಪಿನಲ್ಲೂ ನೀನು ಮಾತ್ರ ಏಕಾಕಿ?'

* * *

'ಇದ್ದುದನು ಹೇಳಿದರೆ ನಂಬಬಹುದೇ?

*   *   *

'ಬದಿಯಲ್ಲಿ ಬೆಳೆದು ನಿಂತಿದೆ ಸ್ವಾಮಿ, ಸನಾತನ ಅಶ್ವತ್ಥ ವೃಕ್ಷ :
ಸುತ್ತು ಮುತ್ತೂ ಹಸಿರು ಪೈರು ಬೆಳೆದಂತಿಲ್ಲ -
ಅಷ್ಟು ವರ್ತುಲ ಜಾಗ ಇಂದಿಗೂ ರೂಕ್ಷ.'

-'ವಿಕಾರಿ'ಯಲ್ಲಿ ಕಪ್ಪೆ ವಟಗುಟ್ಟಿದ ಸಂದೇಶವೂ ಆಧುನಿಕ 'ಮಂಡೂಕೋಪನಿಷತ್ತು!'

-'ಮಣ್ಣ ಮೆರವಣಿಗೆ'ಯಲ್ಲಿ ಇರುವ ೨ನೇ ಪರಿಚ್ಛೇದದೊಳಗಿನ ಶಿಶು ಮನಸ್ಸಿನ ವಿಕಾಸ, ೩ನೇ ಪರಿಚ್ಛೇದದಲ್ಲಿ ಪ್ರತೀಕಾತ್ಮಕವಾಗಿ ಬಂದ ಯುದ್ಧ ಕಾಲದ 'ಬ್ಲಾಕ್‌ಔಟ''ಎಲರ್ಟ್'ಗಳ ಚಿತ್ರ ಜೀವನದ ಸಂಭ್ರಮವನ್ನು ಚೆನ್ನಾಗಿ ಧ್ವನಿಸುತ್ತದೆ.

-'ಜೀರ್ಣೋದ್ಧಾರ'ದ ೨ನೇ ಪರಿಚ್ಛೇದದಲ್ಲಿ ಬಣ್ಣಿಸಿದ, ಮಹಾಸಾಗರದಲ್ಲಿ ಇದ್ದಕ್ಕಿದ್ದಂತೆ ಹೊಯ್ದಾಡ ಹತ್ತಿದ, ಹಡಗದ ಲಂಗರು ಕಿತ್ತು ನೀರಿನ ಆಳಕ್ಕೆ ಇಳಿಯುವ ಆತ್ಮಘಾತಕ ಆಸೆ ಆಧುನಿಕ ವಿಶ್ವದ ವೈಜ್ಞಾನಿಕ ಪ್ರಳಯಬುದ್ಧಿಯ ಚಿತ್ರವನ್ನು ಮಾರ್ಮಿಕವಾಗಿ ರೂಪಿಸಿಗೆ. (ಸ್ಪುಟ್ನಿಕ್ ಯುಗದಲ್ಲಿ ಪ್ರಕಟವಾಗುತ್ತಿದ್ದರೂ ಈ ಕವನ ತುಸು ಹಿಂದಿನದು?)

-'ನಾಳಿನ ನವೋದಯ'ದಲ್ಲಿ ಆಂಡಯ್ಯ ಕವಿಯ ಮತ್ತು ಆದಿ ಪಂಪನ ಅಮರ ಪಂಕ್ತಿಗಳನ್ನು ಉಪಯೋಗಿಸಿದ ಔಚಿತ್ಯ ವಿವೇಕ; 'ಅಜ್ಜಯ್ಯನ ಅಭ್ಯಂಜನ' ಎಂಬ ಕೆ.ವಿ. ಪುಟ್ಟಪ್ಪನವರ ಒಂದು ಪ್ರಬಂಧದ ಶೀರ್ಷಿಕೆ ಇಲ್ಲಿ ಬಾಪೂಜಿಯ ಉಲ್ಲೇಖನಕ್ಕೆ ಉಪಾಧಿಯಾಗಿ ಧನ್ಯವಾಗಿದೆ.

- ಬಾಳಿನ ಆಳವಾದ ವಿವೇಕದ ಇನ್ನಿಷ್ಟು ಪಂಕ್ತಿಗಳನ್ನು ನೋಡಿರಿ.

'ಬಾನ ಹರುಷಕೆ ನೆಲವೆ ತಾಯಿ ಬೇರು.'

*   *   *

'ವರುಷಕೊಂದಾದರೂ ಬೇಕು ನಮಗೆ ಹೊಸ ಮಾದರಿ'

* * *

'ಕತ್ತಲೆಯ ಹುತ್ತ ಬೆಳೆದಿದೆ ಎತ್ತ ಸರಿದರೂ
ಬೆಳಕಿನಿಂದಲೆ ಅದರ ಉಪಜೀವನ.'

* * *

'ನುಶಿ ಮುಟ್ಟಿದರೆ ಅದರ ಗತಿಯೇನು?-
ಮೊದಲೆ ರೇಶಿಮೆಯ ಬಟ್ಟೆ!'

* * *

'ತಾಳ್ಮೆಯ ಮೇಲೆ ಕರಹೇರಿ ಕರಕರೆ
ಪಡುವ ರೇಡಿಯೋ ಹಾಡು.'

ಇವೆಲ್ಲ ಕವನಗಳ ಇನ್ನೊಂದು ಸಾಮಾನ್ಯ ವಿಶೇಷವೇನೆಂದರೆ, ಹೆಚ್ಚು ಕಡಿಮೆಯಾಗದ, ತಪ್ಪು ತಡೆಯಿಲ್ಲದ ಪದಪವಣಿಕೆಯ ಶಕ್ತಿ, (unvarying energy of diction) ಶುಷ್ಕ ಶಬ್ದ ಸಂಭಾರವೇ ಇಲ್ಲ. ತೀರ ಕಡಿಮೆ ಮಾತಿನ ಕಾರ್ಪಣ್ಯವೂ ಇಲ್ಲ. ಪ್ರಾಸಗಳ ಹಿತಮಿತವಾದ ಪೋಣಿಕೆಯು ಶಬ್ದಾರ್ಥದ ಔಚಿತ್ಯದ ಸಮರ್ಪಕ ಅಲಂಕಾರವಾಗಿದೆ. ಈ ಕವಿ ಕೇವಲ ನಾದಲೋಲನಲ್ಲ. 'ಮಣ್ಣಿನ ಮೆರವಣಿಗೆ'ಯೊಳಗಿನ ಮೊದಲ ಭಾಗದ ಎರಡು ಪಂಕ್ತಿಗಳಲ್ಲಿ ಬಂದ 'ತಣ್ಣನೆ - ನುಣ್ಣನೆ' ಇವುಗಳ ಸಾಮಂಜಸ್ಯ, 'ಶಿಶುಕಂಡ ಕನಸಿ'ನೊಳಗೆ 'ಕಣ್ಣಗೊಂಬೆಗೆ ಮೂಡಿ, ಮನಸಿನಲಿ ಅಚ್ಚಾಗಿ, ಕನಸಿನಲಿ ಬಿಚ್ಚುವವು ರೀಲು ರೀಲು'?- ಎಂಬಲ್ಲಿ ಅಚ್ಚು-ಬಿಚ್ಚುಗಳ ಸಾರ್ಥಕತೆಗೆ ರೀಲು ರೀಲಿನ ನಾದದ ಆವರ್ತ ಸಾಧಿಸಿದ ಸಂವಾದ: ಅದೇ ರೀತಿ 'ಅಪರಾವತಾರ' ದಲ್ಲಿಯ 'ಮುದ್ದು-ಹದ್ದು' 'ನಾದ-ಪ್ರಮಾದ', 'ಜೀರ್ಣೋದ್ಧಾರ'ದಲ್ಲಿಯ 'ವಿಜಯ ಸ್ತಂಭ - ಶುದ್ಧ ಹುಂಬ!' 'ತೆಂಗು - ಹಂಗು.' 'ವಿಕಾರಿ'ಯಲ್ಲಿ 'ಕೀಲ -ಚೀಲ' ಹೀಗೆ ಅದೆಷ್ಟೊ ಉದಾಹರಣೆ ಕೊಡಬಹುದು. ಇಲ್ಲಿ

ಅರ್ಥಕ್ಕೆ ನಾದ, ಆಶಯಕ್ಕೆ ಅಲಂಕಾರ ವಿಧೇಯವಾಗಿ ವರ್ತಿಸಿದೆ, ನರ್ತಿಸಿದೆ. ಒಂದೊಂದು ಕವನವೂ ಇಂಥ ಪ್ರಾಸಾನುಪ್ರಾಸಗಳ ಕುಶಲ ಸಂಯೋಜನೆಯ ಪ್ರಾಸಾದ.

೩

ಹೀಗೆ ಧ್ವನಿತವಾಗುವ ಪ್ರತಿ ಕವನದ ಆಶಯವೇನು? ಸ್ವಲ್ಪದರಲ್ಲಿ ಪರಾಮರ್ಶಿಸೋಣವೇ?

'ಮಣ್ಣಿನ ಮೆರವಣಿಗೆ' ಬ್ರಹ್ಮಾಂಡದ ಒಡಲಲ್ಲಿ, ಭೂಮಿತಾಯ ಮಡಿಲಲ್ಲಿ ವಿಕಾಸಗೊಂಡ ಮಾನವ ಮನಸ್ಸಿನ ಟೆಲಿಸ್ಕೋಪಿಕ್ ದರ್ಶನ ಕೊಡುತ್ತದೆ. ೧ನೇ ಪರಿಚ್ಛೇದ ಹೊರವಿಶ್ವದ ಚಿತ್ರ. ೨ನೇ ಪರಿಚ್ಛೇದದಿಂದ ಭೂಮಿಯಲ್ಲಿ ಪ್ರಾಣಮಯ ಮನೋಮಯ ಕೋಶಗಳು ಆನಂದಮಯವಾಗಿ ಕಣ್ಣು ಬಿಡುತ್ತವೆ. ಶೈಶವದ ಮುಗ್ಧ ಅವಸ್ಥೆಯ ಕೌತುಕ ಇಲ್ಲಿ ರೂಪುಗೊಂಡಿದೆ. 'ಮಣ್ಣಿನೆದೆಯೊಳು ಸ್ನೇಹವಂಕುರಿಸಿ ಬೆಳೆದ' ಪರಿ ಇಲ್ಲಿ ಹೃದ್ಯವಾಗಿ ಬಂದಿದೆ. ಸಾಲೆ ಕೋಣೆಯಲ್ಲಿ ಮಗ್ಗಿ ಒಪ್ಪಿಸುವಾಗ ಕಿಟಕಿಯಾಚೆಯ ಪಾರಿವಾಳ ಭಾವ ಮೇಳ ಕರೆಯುತ್ತದೆ. 'ಮೇಜು ಮೇಲೆಯೆ ಇತ್ತು ಪೃಥ್ವಿಗೋಳ.' ಆದರೆ ದೂರದ ಬೆಟ್ಟಬಯಲುಗಳಲ್ಲಿ ಕಣ್ಣೆದುರು ಸಾಗಿತ್ತು ಮಣ್ಣಿನ ಮೆರವಣಿಗೆ! ೩ನೇ ಪರಿಚ್ಛೇದದಲ್ಲಿ ಬಾಳಿನ ಪೌಗಂಡ ಯೌವನಗಳ ಹೊಂಗನಸು ಹೊರ ಬದುಕಿನ ಕರ್ಕಶಕ್ಕೆ ಕ್ರಮಶಃ ಹುಡಿಯಾಗುತ್ತದೆ. 'ಒಟ್ಟಿನ ಮೇಲೆ ಪರಿಸ್ಥಿತಿ ತುಂಬ ಶೋಚನೀಯ' ಆದರೂ ಕವನದ ಕೊನೆ ಉನ್ಮತ್ತ ಆಶಾವಾದದಲ್ಲಿ: 'ಜನನದಲಿ ಮರಣದಲಿ ತುಂಬಿ ಜಯಗಾನ', 'ಸಾಗಲಿ ಮುಂದೆ ದುಂದು ಮೆರವಣಿಗೆ.' ಕವಿ ಜೀವನವನ್ನು ನಿರಾಕರಿಸುವ ನಿವೃತ್ತ ಜೀವಿಯಲ್ಲ.

'ಯುಗಾದಿ' 'ವಿಕಾರಿ' ಇವು ನೈಮಿತ್ತಿಕವಾಗಿ ಮೂಡಿ ಬಂದರೂ ನಿತ್ಯ ತಥ್ಯಗಳನ್ನು ಬಿಟ್ಟಿಲ್ಲ. 'ಯುಗಾದಿ'ಗಿಂತಲೂ 'ವಿಕಾರಿ' ಹೆಚ್ಚು ಪ್ರಭಾವಶಾಲಿ. 'ಯುಗಾದಿ' ಹೊಸವರ್ಷವೆಂಬ ಅನಾದಿ ವೃದ್ಧ ಪುರುಷನ ಸ್ವಾಗತದಿಂದ

ಆರಂಭವಾಗುತ್ತದೆ. ಹೋದವರ್ಷ ಕೊಂಡದ್ದು ಬಾಳದ ಬೇರ ಬೀಸಣಿಗೆ. ಆ ಬೇರು ಬಾಳಲೇ ಇಲ್ಲ. ರಸವಾರಿದ ಬದುಕಿನ ಶುಷ್ಕಸ್ಮೃತಿಗಳಷ್ಟೇ ಮನಸ್ಸಿನಲ್ಲಿ ಗಾಳಿ ಎಬ್ಬಿಸುವವು. ಗತಗೋಷ್ಠಿಗಳ ಗಂಧ ಒಂದೇ ಬಾಳದ ಬೇರಿನಂತೆ ವಾತಾವರಣವನ್ನು ತುಂಬಿ ನಿಲ್ಲುವದು. ಮುಂದಿನ ಪರಿಚ್ಛೇದ ದಲ್ಲಿ ಸುಂದರವಾದ ಋತುರಾಜನ ರಂಗ ಪ್ರವೇಶವನ್ನು ಕೊಂಡಾಡಲಾಗಿದೆ. ಗಿಡ, ಮರಗಳನ್ನು ಮನಸಾರೆ ಪ್ರೀತಿಸುವ ಈ ಕವಿ ಹೊಸ ಋತುವಿನೊಡನೆ ಮೊದಲ ಕೂಟದ ಬೇಟವನ್ನು ಮನೋಜ್ಞವಾಗಿ ಚಿತ್ರಿಸಿದ್ದಾನೆ. ಬರುವ ವರ್ಷಕ್ಕೆಲ್ಲ ಬಲು ಹುಷಾರಿ. ಅವು ಬರುವ ದಾರಿಯಲ್ಲಿ ಸದಾ 'ರಿಪೇರಿ' ನಡೆಯುತ್ತಿದೆ. ಏಕೆಂದರೆ, ಕನಿಷ್ಠ ವರ್ಷಕೊಂದಾದರೂ ನಮಗೆ ಹೊಸ ಮಾದರಿ ಬೇಕು!

ಕೊನೆಯ ಪರಿಚ್ಛೇದ ಹಲವು ವಿಸಂವಾದಿ ಕಲ್ಪನೆ ಭಾವನೆಗಳ ಮೇಳಗೀತ ದಂತೆ ಇದೆ. ಅಲ್ಲಿ ಬಂದ ಪ್ರತಿಮೆಗಳ ವಿಸಂಗತಿಯೇ ಇದಕ್ಕೆ ನಿದರ್ಶನ. ಭೋಧಿವೃಕ್ಷ, ಪ್ರಣತಿ, ಸನ್ನದ್ಧವಾದ ರಥ - ಕರುಣೆ, ಶಾಂತಿ, ಕಲ್ಯಾಣ, ಯುದ್ಧರಂಗ! ಇನ್ನು ಬಾಳ ಕುರುಕ್ಷೇತ್ರದಲ್ಲಿ ಅರ್ಜುನನೇ ಕೃಷ್ಣನಾಗಬೇಕು. ರಥಿಯೇ ಸಾರಥಿ. ಪ್ರತಿಯೊಬ್ಬನದೂ ಸರತಿ!

'ವಿಕಾರಿ'ಯೂ ಒಂದು ಯುಗಾದಿಯದೇ ಹಾಡು. ಕವನದ ಆರಂಭ ತುಂಬ ಕಲಾತ್ಮಕವಿದೆ. ವಿಕಾರಿಯ ಹೊಸ ಆಗಸ ಬಿಕೊ ಎನ್ನುತಿದೆ. ಹಾಳು ನೀಲಿ ಸುರಿಯುತ್ತ, ಬದುಕಿನ ಅಸಹ್ಯತೆ, ಅಸಹಾಯತೆ, ನೀರಸತೆ ಬಲು ಬಲಿಷ್ಠವಾಗಿ ರೂಪಿತವಾಗಿದೆ. ಬದುಕು ವಕ್ರಹಳಿಗುಂಟ ಹೊಟ್ಟೆ, ಹೊಸೆ ಯುತ್ತ ಹೊರಟು ನಿಂತಿದ್ದ (!) - ರೈಲು - ಪ್ರಗತಿ ಇಲ್ಲದ ಗತಿ, ಮೇಲೆ ಚಕ್ರಾಕಾರ ಸುತ್ತುವ ರಣಹದ್ದು, ದಸ ದಸ ತೇಕುವ ನಾಯಿ -ಬಡಕಲು ಗಿಡದ ಬುಡದಲ್ಲಿ. ವಟಗುಟ್ಟುವ ಕಪ್ಪೆ ಅದು ವಟಗುಡುವ ವಾರ್ತೆಯೇನು? ಬಾಳಿನ ಗಾಣಕ್ಕೆ ಪ್ರಾಣ ಹೂಡಿದೆ. ಕೀಲಿ ಜಡಿದ ಗುದಾಮುಗಳಲ್ಲಿ ಖಾಲಿಚೀಲ! ಜನದ ನೀತಿಮತ್ತೆ ಎಂತಹದು? 'ತುಂಬಿ ಬೆಳೆದ ಹೊಲ ನೋಡಿಕೊಂಡು ದನ ತುಡುಗಿಗೆ ಬಿಟ್ಟಿಹರು' ಕಟ್ಟಡದ ಕಲ್ಲೂ ತಾವು ಇಟ್ಟಲ್ಲಿ

ಇರಲಾರೆವೆಂದು ಸಿಡಿದುನಿಂತಿವೆ! ಹೀಗಿದೆ ನಮ್ಮ ಸಮಾಜದ ಸಂಘಟನೆಯ ಅಣುವಿಸರಣ! ಸೊಟ್ಟ ನಾಣ್ಯವೂ ನಮ್ಮನ್ನು ದಿಟ್ಟಿಸಿ ನೋಡುತ್ತಿದೆ?-ದುಡ್ಡಿನ ದೊಡ್ಡಸ್ತಿಕೆ. ಬಿಳಿಯ ಬಟ್ಟೆಯ ಒಳಗೇ ತೊನ್ನು ಬೆಳೆಯುತ್ತಿದೆ - ಡಂಭಾಚಾರದ ನಾಗರಿಕತೆ, ಆದರೆ 'ವಿಕಾರಿ' 'ವಿಳಂಬಿ'ಯ ಬೆನ್ನಿಗೆ ಬಂದು ಮನ್ವಂತರ ತರಲೆಂದು ಕವಿಯ ಹಾರೈಕೆ. 'ವಿಕಾರಿ' ಎಂಬ ಹೆಸರು ನಮಗೇ ಸರಿ. ಇಲ್ಲಿಯ ಬೋಧ - ಸಂದೇಶ ಸರಳವಾಗಿದೆ. ಸುಗಮವಾಗಿದೆ. ಈ ಮಟ್ಟಿಗೆ ನವ್ಯತಂತ್ರದ ಹೆಡಸುಗಟ್ಟಿಲ್ಲ.

'ಶಿಶುಕಂಡ ಕನಸು' ಆತ್ಮವೃತ್ತಪರ. 'ಮಣ್ಣಿನ ಮೆರವಣಿಗೆ'ಗೆ ಇದು ಪರಿಪೂರಕ. ಅದರ ನಂತರವೇ ಇದು ಅಚ್ಚಾಗಬೇಕಾಗಿತ್ತು. ಕವಿ ಇನ್ನೂ 'ಬೆಳೆದ ಮಗು'. ಇದೇ ಕವನದ ಸೂತ್ರವಾಕ್ಯ. ಚೆನ್ನವೀರರ ರಸಾಪಾಕ ಸಿದ್ಧಿಯ ಕೈಗುಣ ಕಂಡು ಬರುವ ಪಂಕ್ತಿಗಳು ಇಲ್ಲಿ ಸಿಗುತ್ತವೆ :

ಹೂವಿಗೆರಗಿದ ತುಂಬಿ, ಸಿಂಪಿಗೊರಗಿದ ಮುತ್ತು
ತಂಪುಗಾಳಿಗೆ ಬಿರಿದ ಸಂಪಿಗೆಯ ಮೊಗ್ಗು,
ತೆಂಗಿನೊಳಗಿನ ತಿಳಲು, ಗಾನದಿಂಪಿನ ಹೊಳಲು
ಮನಸಿನೊಳಗಿನ ಕನಸು ಹೀಗೆ ಬೆಳೆದು.
ನೆರಳ ನೇವರಿಸುತ್ತ ಬೆಳಕು ಬೆರಳಾಡಿಸಿತು
ಬೆಳುದಿಂಗಳಿನ ಹಾಲು ಖೀರು ಕುಡಿಸಿ.

* * *

ಚಂದ್ರದೋಣಿಯನೇರಿ ಹುಟ್ಟು ಹಾಕು.

ರಸ ಸಂಪ್ರದಾಯದ ರಿಂಗಣದಿಂದ ನವ್ಯಮಾರ್ಗದ ಕಾಲ್ನಡಿಗೆಗೆ ಬಂದ ಕವಿಯ ಮನೋವಿಕಾಸಕ್ಕೆ ಅನುಗುಣವಾಗಿ ಈ ಕವನ ಆರಂಭದಲ್ಲಿ ತುಂಬ ನಾದಲೀಲೆಯ ಲಾಲಿತ್ಯದಿಂದ ಮುಂದೆ ನವ್ಯ ತಂತ್ರದ ವಸ್ತುವಿನ್ಯಾಸಕ್ಕೆ ಮಾರ್ಪಟ್ಟಿದೆ.

ಶೈಶವದ ಲಾಲಿಯೊಳನಿಂತ ಬಯಲೆಲ್ಲವೂ ಒಂದೆ ಬೆಟ್ಟವಾಗುತ್ತ ನಿಂತು ಪ್ರಪಂಚ ಬೆಳೆಯಿತು. ಬಾಲ್ಯವೆಲ್ಲ ಕೌತುಕ ರಸದ ಕಾರಂಜಿಯಾಗಿ ಪುಟಿಯಿತು. ಆ ಕಣ್ಣಿಗೆ ಇರುವೆಗಳ ಸಾಲು ಸಾಲುದುರ್ಗವಲ್ಲ; 'ಸಕ್ಕರೆಯ ವಾಗೀನು ಸಾಗಿಸುವ ನುಣ್ಣಗಿನ ಸಣ್ಣ ಲೈನುದಾರಿ!' ಬಾಲ್ಯಕ್ಕೂ, ಸಕ್ಕರೆಯ ಕಣವೇ ಹಿಗ್ಗಿನ ಹೊರೆಯಾಗಿ ಭಾವಿಸಿದ ಇರುವೆಗೂ ಎಂಥ ಸಾಮ್ಯ! ೩ನೇ ಪರಿಚ್ಛೇದದಲ್ಲಿ ಕವಿ ಬೆಳೆದು ಪ್ರೌಢನಾದ. ಆದರೂ ತನ್ನ ಮಕ್ಕಳಲಿ ತಾನು ಕಳಕೊಂಡ ಬಾಲ್ಯದ ಚಂದ್ರಲೋಕವನ್ನು ಮತ್ತೆ ಪಡೆದ. ಇಂದಿನ ಇರುಳು ಎಳೆಯ ಕನಸುಗಳನ್ನೆ ಮತ್ತೆ ಪಡೆದಂತೆ. ಪ್ರೌಢ ನಾಗರಿಕ ಜೀವನ ಬೆಳಕನ್ನೆ ಬಿಗಿದು ಹಿಡಿದಂತೆ. ತಾಳ್ಮೆಯ ಮೇಲೆ ಕರ ಹೇರಿದ ಕರಕರೆ. ಮನೆಗೊಂದು ಹೂದೋಟ, ಎಲ್ಲಿ? ನಗರಸಭೆಯ ಉಪವನದ ಬೆಂಚಿನ ಮೇಲೆ ಹುರಿ ಗಡಲೆ, ಸೇಂಗಾ, ಪೆಪ್ಪರಮೆಂಟು (ಆಣೆಗೆ ಎಂಟು!). ಬದುಕಿನ ವಿಷಯ 'ನಾಳೆ ನೋಡಿದರಾಯ್ತು ಪತ್ರಿಕೆಯಲ್ಲಿ ಯಾಕ್ರಿ?' ನೇರವಾದ ಬಾಳಿನ ಸಂಪರ್ಕ ಯಾರಿಗಿದೆ? ಯಾಕೆ ಬೇಕಾಗಿದೆ? 'ರಾಜ ಮಾರ್ಗದ ರಿಪೇರಿ'ಯ ಪ್ರತಿಮೆ ಮತ್ತೆ ಬಂದಿದೆ. ...

ಮತ್ತದೇsss ಬೆಳಗು. ಇದು ಸೃಷ್ಟಿಯ ಔದಾರ್ಯ ಸೌಂದರ್ಯಗಳ ದಿವ್ಯ ಸಂದರ್ಭದಲ್ಲಿಯೂ ನಾಗರಿಕನಾಗಿ ಮಾನವ್ಯವನ್ನು ಕಳೆದುಕೊಂಡ ಆಧುನಿಕ ವ್ಯಕ್ತಿಯ ವರ್ತಮಾನ ಜೀವನದ ಮೇಲೆ ಕವಿ ಬರೆದ ವಾರ್ತಿಕೆ.

'ವಕ್ರರೇಖೆ'ಯ ಕಲ್ಪನಾಚಾತುರ್ಯ ತುಂಬ ಪ್ರಶಂಸನೀಯ. ಬಾಳ ಬದುಕೆಲ್ಲ ಒಂದಲ್ಲ ಒಂದು ರೀತಿ ಸೊಟ್ಟ, ಡೊಂಕು. ನಿಯತಿಯ ಈ ತಿರುವು, ಈ ತಿರುವು - ಮುರುವು ಗಾಳಿಪಟದಂತೆ ಕೊಸರಿಕೊಂಡು ಏಳುವ ಬಾಳಸೂತ್ರದ ಈ ರೇಖಾಗತಿ ಇಲ್ಲಿ ಅಪೂರ್ವ ಪರಿಣಾಮಕಾರಿಯಾಗಿದೆ. ಇಂಥ ಕವನದ ಪ್ರೇರಣೆ ಭಾವೋದ್ರೇಕವಲ್ಲ, ಜೀವನವನ್ನು ನೇರವಾಗಿ, ಇಡಿಯಾಗಿ ನೋಡಬಲ್ಲ ತಟಸ್ಥ ವೃತ್ತಿ. ಪ್ರತಿಪದ್ಯದ ಪ್ರತಿಮಾ ಮಾಲೆ ಒಟ್ಟು ಕವನವನ್ನು ಒಂದು ಚಿತ್ರಶಾಲೆಯಾಗಿಸಿದೆ. ನಗರಮಧ್ಯದಿಂದ ಶೂನ್ಯಮಂಡಲಕ್ಕೇರಿ ಮತ್ತೆ ಮನೆಯ ಬಾಗಿಲಿನಲ್ಲಿ ಈ ಚಿತ್ರಮಾಲೆ ಮುಗಿಯುತ್ತದೆ. ಇಲ್ಲಿಯ ಈ ವಾಕ್ಯಗಳನ್ನು ಮೆಲುಕು ಹಾಕಿರಿ:

'ಓಣಿ ಓಣಿಯ ಸುತ್ತಿ ಸಂದಿಗೊಂದಿಗೆ ಹಾಯ್ದು
ಇದ್ದಲ್ಲಿಯೇ ಇಹುದು ಬೀದಿನಾಯಿ'.

* * *

'ಮಳೆಗಾಲ ಬೇಸಿಗೆಯ ಹರೆಯ ಮುಪ್ಪಿನ ತಿರುವು-
ತಳದ ಒರತೆಗೆ ನೂರು ಸೆಲೆಯ ಸ್ನೇಹ.'

* * *

'ನಿಂತ ನೀರೆಲ್ಲವೂ ತಿಳಿದು ತಳ ಕಂಡಾಗ
ದುಷ್ಯಂತನಿಗೆ ಬೇರೆ ಅರಿವು - ಮರೆವು.'

* * *

'ಜೀರ್ಣೋದ್ಧಾರ' 'ನಾಳಿನ ನವೋದಯ'ಗಳು ಸಾಮಾಜಿಕ ಉತ್ಥಾಪನೆಯ ಪ್ರತಿಬಿಂಬಗಳು. ಅವೆರಡರಲ್ಲಿ 'ಜೀರ್ಣೋದ್ಧಾರ' ಹೆಚ್ಚು ವ್ಯಾಪಕ. ಅದು ಬರಿ ಭಾರತದ ಭಾಗ್ಯೋದಯದ ನಕ್ಷೆಯಲ್ಲ. ಅದಕ್ಕೆ ಜಾಗತಿಕ ಚೌಕಟ್ಟು ಇದೆ. ಆದರೆ, 'ನಾಳಿನ ನವೋದಯ' ಅತ್ಯಂತ ಪರಿಣಾಮಕಾರಿಯಾಗಿ ಕಟ್ಟಿದ ನಮ್ಮ ನವ ನಿರ್ಮಿತಿಯ 'ಪುರುಷ ಸೂಕ್ತ.' ಭಾರತದ ರಾಷ್ಟ್ರೀಯ ಉತ್ಥಾಪನೆಯ ಇಂಗಿತ ಈ ಭವ್ಯಕವನದಲ್ಲಿ ಒಳ್ಳೆರಂಜಕವಾಗಿ ಭಾವವ್ಯಂಜಕ ವಾಗಿ ಬಂದಿದೆ. ಅದಮ್ಯವಾದ ಆಶಾವಾದ ಈ ಕವನವನ್ನು ಎತ್ತಿ ತೇಲಿಸಿ ಕೊಂಡು ನಡೆದಿದೆ. ಈ ಆಶಾವಾದ ಕುರುಡು ನಂಬಿಗೆಯಲ್ಲ. ಹುಂಬ ಹುಮ್ಮಸವಲ್ಲ.

ಐದ್ವೈದು ವರುಷಗಳ ಸೋಪಾನವನ್ನೇರಿ ಆಪಾದ
ಮಸ್ತಕವ ನೋಡಿಕೊಂಡು,
ನಪಯುಗಾರಂಭದಲಿ ಅಂಬೆಗಾಲಿಟ್ಟ ಶಿಶು ಆಗಲೇ
ಬೆಳೆದು ನಿಂತು-

ಹಾಲಿನ ಬಾಟ್ಲಿ ಬಿಟ್ಟು, ಬಟ್ಟಲನ್ನವ ತೊರೆದು
ತನ್ನಿಚ್ಛೆಯಲಿ ತಾನೆ
ಉಣ್ಣುತಿದೆ ಐದೈದು ಬೆರಳ ತುತ್ತು...

ಪಾಂಚವಾರ್ಷಿಕ ಯೋಜನೆಗಳ ಅಭಿವೃದ್ಧಿ ವಿಕಾಸದ ಇಷ್ಟು ವಾತ್ಸಲ್ಯ ಪೂರ್ಣ ಚಿತ್ರ ಕನ್ನಡದಲ್ಲಿ ಇನ್ನೂ ಅರಳಿಬಂದಿಲ್ಲ. ಆದರೂ ಈ ನವಜಾತ ಶಿಶುವಿನ ಸದ್ಯಸ್ಥಿತಿಯ ಬಗೆಗೆ ಸುಳ್ಳು ಸಂಭಾವನೆ ಇಲ್ಲ. ಮಗುವಿಗೆ ನೆಗಡಿ, ಕೆಮ್ಮು, ಜ್ವರ, (ಜ್ವರದಲ್ಲಿ ಬಡಬಡಿಸುವದೂ ಉಂಟು!) ಆದರೂ ಈ ಪೋರನ ಬೆಳವಣಿಗೆ ನೆರೆಹೊರೆಯು ಬೆರಗುಬಡುವಂತಿಹುದು. ಆದರೂ 'ಮುಂದಿನದು ಬರೆದಂತೆ ಹಿಂದಿನದು ಮರೆಯುತ್ತ ಹೊರಟರೇ ಸ್ವಲ್ಪ ಕಷ್ಟ'. ಅಪೂರ್ವ ಸಾಧಿಸ ಹೊರಟು ಪೂರ್ವ ಮರೆಯದಂತೆ ಬಾಪೂಜಿಯವರ ಸ್ಮರಣ ಕವಿ ಮಾಡಿ ಕೊಡುತ್ತಾರೆ. 'ಅವನ ಮನದಲ್ಲಿ ಮೂಡಿ ಹೆಗಲೇರಿ ಬೆಳೆದಂಥ ದಿವ್ಯಕನಸು'. ಹೆಜ್ಜೆ ಹೆಜ್ಜೆಗೆ ಮನಸ್ಸಿನಲ್ಲಿ ಕಟೆಯುತ್ತಿಹುದು. ಆದರೇನು? ಗಾಂಧೀಜಿ ಅಸ್ತಂಗತ. ಹೊತ್ತು ಮುಳುಗಿತು. ಮತ್ತೆ ಹರಿದಾಡುತ್ತಿವೆ ಹಾವು ಚೇಳು. ಕಾಡಿನ ಶ್ವಾಪದಗಳು ನಾಡನಾಕ್ರಮಿಸಿ, ಬಾಲ ಗುಂಡಾಡಿಸುತ್ತ, ಜಪಮಾಲೆ ಎಣಿಸುತ್ತ ಜಪ್ಪಿಸಿ ಕುಳಿತಿವೆ - ಈ ಪ್ರತಿಮೆ ಅದೆಷ್ಟು ಸ್ವಾರಸ್ಯವಾಗಿದೆ! ಈ ಕವನದ ಕಟ್ಟಡದ ರಚನೆ ಒಂದು ಅಖಂಡ ಶಿಲ್ಪ, ಪರಿಚ್ಛೇದದಿಂದ ಪರಿಚ್ಛೇದಕ್ಕೆ ಹಾಯುವ ಭಂಗಿಯೂ ಕಲಾತ್ಮಕ. ನಡುವೆ ತಂದೆ 'ಶ್ರುತಯೋಜನೆ' (allusions)ಗಳು ತುಂಬ ಮಾರ್ಮಿಕ. ೧ನೇ ಪರಿಚ್ಛೇದದಲ್ಲಿಯ 'ಬೆಳಗಿ'ನ ವರ್ಣನೆಯೇ ತುಂಬ ಲಾಕ್ಷಣಿಕ. ಆರಂಭದ ಈ ಮಿಶ್ರ ಪ್ರತಿಮೆಗಳ ಪಂಕ್ತಿಯ ಪಾಂಗನ್ನೆ ನೋಡಿರಿ :

'ನೀಲಿಯಾಗಸದ ತೊಳೆದ ಪಾಟಿಯ ಮೇಲೆ
ಹಕ್ಕಿ -ಧ್ವನಿ ಮೂಡಿ ತೀಡಿತು ಹೊಸದೊಂದು
ವರ್ಣಮಾಲೆ'.

ಆಗಸದ ಪಾಟಿ - ಧ್ವನಿಯ ವರ್ಣಮಾಲೆ ಅಮೂರ್ತಕ್ಕೆ ಮೂರ್ತದ, ಕಿವಿಯ ಬದುಕಿಗೆ ಕಣ್ಣ ಬದುಕಿನ ಉಪಮಾನ ರೂಪಣ!

ತನ್ನ ಈ ರೂಪಣ ಶಕ್ತಿಯಲ್ಲಿ ಪೂರ್ಣ ನಂಬಿಗೆಯುಳ್ಳ ಈ ತರುಣ ಕವಿಯ ಗುಣಾತಿರೇಕವೇ ಒಂದು ದೋಷವಾಗಿದೆ. ಪ್ರತೀಕಾತ್ಮಕ ರಚನೆಗೆ ಬೇಕಾದ ನಿಷ್ಠುರ ಸಂಯಮ ಆಗೀಗ ತಪ್ಪಿಹೋಗುತ್ತದೆ. ಬಣ್ಣ ತುಂಬುವ ಮೋಹ ಅನಿವಾರ್ಯವಾಗುತ್ತದೆ. ಇದರಿಂದ ಸ್ಫಟಿಕ ಸ್ಫುಟವಾಗಿ ನಿಲ್ಲ ಬೇಕಾದ ಪ್ರತೀಕ ಸಡಿಲಾಗುತ್ತದೆ;ಮೊಂಡವಾಗುತ್ತದೆ. ಪ್ರತೀಕೀಕರಣ ಒಂದು ಲೇಪನ ಕ್ರಿಯೆಯಲ್ಲ; ರೂಪಣ ಕ್ರಿಯೆಯೂ ಅಲ್ಲ. ಕಾರ್ಪಣ್ಯವೆನಿಸುವಷ್ಟು ಶಬ್ದಗಳ ಮಿತವ್ಯಯ. ಅದಕ್ಕೆ ಬೇಕಾದ ಮನಃಸಂಯಮ (reserve), ಪುಟ ಹಾಕಿದ ಧಾತುವಿನಂಥ ಶಬ್ದಗಳ ಆಯ್ಕೆ (Preferecne for the calcinated word). ವಿಶೇಷಣ ಹಾಗೂ ವಾಕ್ಯರಚನೆಯ ದಾರಿದ್ರ್ಯವೊ ಎನ್ನುವಷ್ಟು ಭಾಷೆಯನ್ನು ಅದರ ಮೂಲ ಘಟಕಗಳಲ್ಲಿ ವಿಕಲಗೊಳಿಸಿ ಬಳಸುವದು - ಇವೇ ಕೆಲವು ಪ್ರತೀಕೀಕರಣದ ಲಕ್ಷಣಗಳೆನ್ನಬಹುದು. ಕಣವಿಯವರ ಶೈಲಿಗೆ ಈ ಕಟುವಾದ ಪಥ್ಯ ಅಷ್ಟೊಂದು ಒಗ್ಗುವುದಿಲ್ಲ. ರಸಿಕನ ಊಹೆಗೆ ಕೆಲವೊಂದು ಕಠಿಣ ಕೆಲಸ ಅವರು ಬಿಟ್ಟುಕೊಡುವುದಿಲ್ಲ. ಈ ಉದಾಹರಣೆ ಯನ್ನೇ ಕೊಳ್ಳಿ :

ನಾನು (ಬೆಳೆದ ಮಗು)
ಮೂರು ಮಕ್ಕಳ ತಂದೆ
ಮೂರು ಸಲ ಮಗುವಾಗಿ ಮತ್ತೆ ಬೆಳೆದೆ.

ಇಲ್ಲಿ ೨ನೆಯ ಪಂಕ್ತಿ ಉಳಿದುದರ ಸಾರವತ್ತತೆಗೆ ನೀರು ಬೆರಿಸಿದಂತೆ ಆಗಿದೆ. ೩ನೆಯ ಪಂಕ್ತಿಯೇ ನಾಟಕ ಮೂರು ಸಲ ತಂದೆಯಾದುದನ್ನು ಸೂಚಿಸುತ್ತದೆ. ಅಷ್ಟೂ ಊಹಿಸಲಾರದ ಓದುಗನಿಗಾಗಿ ಈ ಕಾವ್ಯವಲ್ಲ! ಅದೇ ರೀತಿ ಗಿರಣಿ ಬಂಬಿನ ಹುತ್ತದಿಂದ ಹೆಡೆ ಬಿಚ್ಚಿದ ಹೊಗೆ ಹಾವೂ ಹೌದೆಂದು ಬೇರೆ ಹೇಳುವುದೇಕೆ? ಹಾಗೆಯೇ 'ಕೊನೆಯ ನಿಲ್ದಾಣ'ದಲ್ಲಿ ಪಾಕೀಟು ಕಳ್ಳನ ಪ್ರಸಂಗದ ವಿವರಣೆ ಅಷ್ಟು ಸರಾಗವಾಗಿ ಬೇಕಿದ್ದಿಲ್ಲ.

ಡಬ್ಬಿಗಳನ್ನು ಎಳೆಯುವ ಎಂಜಿನ್ನಿಗೆ 'ದೊಡ್ಡ ಸಂಸಾರಕ್ಕೆ ಒಬ್ಬನೇ ದುಡಿಯುವವನ' ರೂಪಕ ತುಂಬ ಸಾರ್ಥಕವಿದೆ. ಆದರೆ ಅದನ್ನು 'ಹೀಗೆಯೇ ಹಳಿಗುಂಟ' ಎಳೆದು ಅದರ ಸಾಮರ್ಥ್ಯ ನುಗ್ಗಾಗಿದೆ! 'ಕೊನೆಯ ನಿಲ್ದಾಣ' ಪೂರ್ತಿ ತೃಪ್ತಿಗೊಡುವುದಿಲ್ಲ. ಅದರಲ್ಲಿಯ ಇಂಗಿತಕ್ಕೆ ಆಳ ಕಡಿಮೆ. ಅಗಲ ಹೆಚ್ಚಾದಂತಿದೆ. ಆರಂಭದಲ್ಲಿ ಎದ್ದ ಆಸೆ ಮುಂದೆ ಫಲಿಸುವುದಿಲ್ಲ. ಅದು ಶಬ್ದ ಚಿತ್ರವೋ, ಪ್ರಪಂಚದ ಮೇಲಿನ ರೂಪಕವೋ, ವ್ಯಕ್ತಿ ಜೀವನದ ಅತಂತ್ರ ಪರತಂತ್ರ ಯಾತ್ರೆಯ ಪ್ರತೀಕವೋ ಸ್ಫುಟವಾಗಿಲ್ಲ. A Symbol is emptied of personal meaning. It has only emotional reference. ಆದರೆ ಈ ಕವಿಗೆ ಭಾವ ಸಂದರ್ಭದಲ್ಲಿಯೂ ವೈಯಕ್ತಿಕ ಆಶಯ ತುಂಬುವ ಹಂಬಲವಾಗುತ್ತದೆ. ಇದರಿಂದ ಪ್ರತೀಕಕ್ಕಿಂತ ಮೂರ್ತೀಕರಣ (personificaion) ಈ ಕವಿಗೆ ಹೆಚ್ಚು ಮೆಚ್ಚಿಗೆ. ಸಿಕ್ಕಲ್ಲಿ ಹೆಕ್ಕಿದ ಉದಾಹರಣೆಗಳಿವು :

'ಮರಿಗೆ ಮರಿ ಇಕ್ಕಿರುವ ಶೂನ್ಯ ಮಂಡಲ'.

* * *

'ನಿಂತಲ್ಲಿಯೇ ನೀಲಿಗಟ್ಟಿರುವ ಆಕಾಶ.'

* * *

'ನಳದಲ್ಲಿ ನೀರು... ಹಂಡೆ ಕೊಡಗಳ ಜೊತೆಗೆ
ತೋಡಿಕೊಂಡಿತು ತನ್ನ ಸುಖದುಃಖ.'
ಅಗ್ನಿಗೆಂಡವ ಹಾಯ್ದು ತಳಿರ ಪಲ್ಲಕ್ಕಿಯಲಿ
ಚಿಗುರು - ಹೂ - ಮಿಡಿ ಛತ್ರ ಚಾಮರವ ಹಿಡಿದು
'ದೇವತಾ ಪೃಥಿವಿ'.

(ಎಂಥ ರಸ ತುಂಬಿದ ವಿವರಣೆ)

'ನಗರ ಭವನದ ಧ್ವನಿವರ್ಧಕದ ತೂರಿ ಸುರಿಯುತಿವೆ
ರಾಜಾ, ರೋರರ್, ರಾಕೆಟ್, ರಾಣಿ!'

(ಜೋಗದ ಜಲಪಾತ ಯಾವ ಕವಿಯ ವಾಣಿಯಲ್ಲಿಯೂ ಇಷ್ಟು ಚಮತ್ಕಾರಿಕ ವಿನಿಯೋಗ ತಾಳಿದ್ದಿಲ್ಲವೇನೋ!)

'ಬಾನಂಗಳಕೆ ಬರುವ ಚಂದ್ರನ ಹೆಗಲ ಮೇಲೆ ಹೊತ್ತು,
ಬಾನ ಕಣದಲಿ ಕೋಟಿ ಚಿಕ್ಕೆ ಹಂತಿಯು ಕಟ್ಟಿ
ದಿವದ ಬದುಕನು ಒಕ್ಕಿ ರಾಶಿ ಮಾಡಿ -
ಬೆಳಕು ಚಕ್ರಾಕಾರ ತಿರುಗುತ್ತಿದೆ'.

(ಎಂಥ sustained metaphor! ಜಾಡುಹಿಡಿದ ರೂಪಕ!)

'ಕೋಗಿಲೆಯು ಮಾತ್ರ ಬಿಟ್ಟೂ ಬಿಡದೆ ತನ್ನ
ಜಾಹೀರಾತು ಪ್ರಕಟಿಸಿದೆ -
ಅಚ್ಚಾಗಿಹುದು ಕೆಳಗಿನ ಕವಿತೆ
'ಚೈತ್ರ' ಪತ್ರಿಕೆಯ ವಿಶೇಷ ಸಂಚಿಕೆಯ ಮೊದಲ
ಪುಟದ ಮೇಲೆ'.

(ಇಲ್ಲಿ ಪತ್ರಿಕೆಯ ಇಷ್ಟೊಂದು ವಿವರ 'ಬಿಟ್ಟೂಬಿಡದೆ' ಬರುವದೇಕೋ!)


ಇಂಥ ರೂಪಕದ ಸ್ಫೂಪಕಶಕ್ತಿ ಇದ್ದೂ ಕವಿಯ ಶೈಲಿ ವ್ಯರ್ಥ ವಾಗಾಡಂಬರಕ್ಕೆ ಇಳಿಯುವುದಿಲ್ಲ. ಇದಕ್ಕೆ ಕಾರಣ ಕವಿಯ ನಿರಂತರ ಕಲಾಜಾಗೃತಿ. ಪುನರುಕ್ತಿಯನ್ನು ಕವಿ ಆದಷ್ಟು ತಪ್ಪಿಸಿಕೊಳ್ಳುತ್ತಾನೆ. ವಸ್ತು ಒಂದೆ ಆದರೂ ಉಕ್ತಿವೈವಿಧ್ಯ, ಉಪಮಾನ ವೈಚಿತ್ರ್ಯ ಕವಿಗೆ ಯಶಸ್ವಿಯಾಗಿ ಸಾಧಿಸಿದೆ, ಮಿಶ್ರರೂಪಕ ಕ್ರಿಯೆಯ ನವ್ಯತಂತ್ರದ ಅಭೇಧ್ಯ ಶಕ್ತಿ. ಅದನ್ನೂ ಕವಿ ಅಲ್ಲಲ್ಲಿ ಪ್ರಕಟಿಸುತ್ತಾನೆ. ('ನೀಲಿಯಾಗಸದ ತೊಳೆದ ಪಾಟಿ ---' ಆದರೆ ಅದೇ ಆಕಾಶ ಬೇರೆಡೆಗೆ ಬಂದಲ್ಲಿ ಬೇರೆ ರೂಪಗಳನ್ನೇ ತಾಳಿದೆ. ಮೋಡವೋ ಕವಿಯ ಕೈಯಲ್ಲಿ ಕಾಮರೂಪವಾಗಿದೆ. ಒಮ್ಮೆ ಐರಾವತ, ಇನ್ನೊಮ್ಮೆ ಬಯಲಟ್ಟದ

ಭರ್ಜರಿವೇಷ, ಮತ್ತೊಮ್ಮೆ ಮಳೆಯ ಜಾಲರಿ ಹಿಡಿದು ಶಿರಿಸಲದ ಹೂವಿನ ಅರಿಷಿಣ ತೊಡೆದು, ಹೂಬಿಸಿಲ ಮುಗುಳುನಗೆ ತಳೆದು ಸಾಗಿದ ಲಜ್ಜಾವತಿ, ಮಗುದೊಮ್ಮೆ ಹನಿ ಹನಿ ಕವಣೆ ಬೀಸುವ ಬಂಟ! - ಆಯಾ ಸಂದರ್ಭಕ್ಕೆ ರಸಪುಷ್ಟವಾದ ಔಚಿತ್ಯವುಳ್ಳ ಪ್ರತಿಮೆಗಳು. ಈ ರೂಪಣ ಬರಿ ಸ್ಥಿರಚಿತ್ರ (Stills) ಗಳಲ್ಲ. ಗತಿಮಯ ಸಜೀವತೆಯ ಚೆಲುವು.

ಇಷ್ಟು ಹೊತ್ತು ಕಣವಿಯವರ ನವ ವಿಧಾನದ ಸೇತುವೆಯ ಮೇಲೆ ನಿಂತು ಕೆಳಗೇ ಹರಿಯುವ ಕಾವ್ಯ ಪ್ರವಾಹವನ್ನೂ, ಸುತ್ತಲಿನ ಪ್ರಕೃತಿ ಪ್ರಪಂಚವನ್ನೂ ಕವಿಯ ಕಣ್ಣಿನಲ್ಲಿ ಕಣ್ಣಿಟ್ಟು ನೋಡಿದ್ದಾಯಿತು. ಕವನಗಳ ಪಾಕ ಸಿದ್ಧಿಯನ್ನೂ ಸಾಕಷ್ಟು ಸವಿದು ಅದರ ತರ-ತರಗತಿಗಳ ತರ-ತಮವನ್ನೂ ನೋಡಿದ್ದಾಯಿತು. ಈ ಸೇತುವೆ ಭಾವಗೀತ ಮತ್ತು ನವ್ಯಕಾವ್ಯಮಾರ್ಗಗಳ ನಡುವೆ ಇಮ್ಮುಖದ ದಾರಿ ತೆರೆದಂತೆ. ಇಂದು ಕನ್ನಡ ಕಾವ್ಯಲೋಕದಲ್ಲಿ 'ಅತ್ತ ಕತ್ತಲೆಯಲ್ಲ ಇತ್ತ ಬೆಳಕೂ ಅಲ್ಲ, ಮೋಟು ಮರ ದೆವ್ವದಾಕಾರ ತಾಳಿರುವ ಸಂಧಿಕಾಲ.' 'ಎಂಥ ಕತ್ತಲೆಯಲ್ಲು ಸ್ವಂತ ತೇಜವ ಬಿಡದ, ಚಿಕ್ಕೆ ಬೆಳಕಿನ ಧೈರ್ಯ, ಶಾಂತಿ, ಔದಾರ್ಯ' ಈ ನಾಡಿನಲ್ಲಿ ಮೂಡಬಹುದು - ಎಂಬುದೇ ಕವಿಯೊಂದಿಗೆ ಈ ರಸಿಕನದೂ ಹಾರೈಕೆ.

ಗೋಕರ್ಣ

೨೦-೯- ೧೯೬೦ **ಗೌರೀಶ ಕಾಯ್ಕಿಣಿ**



ಚೆನ್ನವೀರ ಕಣವಿಯವರು ಕನ್ನಡದ ಹಿರಿಯಕವಿಗಳ ಶ್ರೇಣಿಯಲ್ಲಿ ಅಗ್ರಗಣ್ಯರು. ಹೊಸಗನ್ನಡದ ಕಾವ್ಯಕ್ಷೇತ್ರದಲ್ಲಿ ಅವರ ಹೆಸರು ಎಂದೆಂದಿಗೂ ಹಸಿರು. ಕಣವಿಯವರು ಒಟ್ಟು ೧೬ ಕವನ ಸಂಕಲನಗಳನ್ನು ಹೊರ ತಂದಿದ್ದಾರೆ. ವಿದ್ಯಾ ವಿನಯ ಸಂಪನ್ನರಾದ ಕಣವಿಯವರು ಸರಳ ಜೀವಿ. ತಳುಕಿನ ವೆಂಕಣ್ಣಯ್ಯ ಸ್ಮಾರಕ ಗ್ರಂಥಮಾಲೆಗೂ ಕವಿಗಳಿಗೂ ಬಹಳ ಕಾಲದ ನಂಟು. ಇಂಥ ಮಧುರ ಬಾಂಧವ್ಯದ ನೆನಪಿನೊಂದಿಗೆ ಈ ಕಾವ್ಯ ಸಂಪುಟಗಳು ಪ್ರಕಟವಾಗುತ್ತಿವೆ.

'ಮಣ್ಣಿನ ಮೆರವಣಿಗೆ'ಯಲ್ಲಿ ಭಾವಗೀತೆಯ ಸರಾಗ ಭಾವಪೂರ್ಣತೆ, ಅದರೊಂದಿಗೆ ಅನುಸ್ಯೂತವಾದ ಭಾಷೆಯ ಅನುರಣನ, (resonance) ಅದರಲ್ಲಿಯೂ ನವ್ಯತಂತ್ರದ ಅಂಶಗಳನ್ನು ಅಳವಡಿಸಿಕೊಂಡು ಅರಳಿದ ವಸ್ತುವಿನ್ಯಾಸ ಈ ತ್ರಿಗುಣಾತ್ಮಕ ತಥ್ಯವು 'ನವೀನಕವಿತಾವಿಧಾನ'ದ ಒಂದು ಆಕೃತಿಯನ್ನು ನಮ್ಮ ಮುಂದೆ ಇರಿಸಿದೆ.

ನವ್ಯಧ್ವನಿಗೆ ನಿರ್ವೇದನವೇ ವೇದವಲ್ಲ. ವಿಷಾದವೇ ಯೋಗವಲ್ಲ. ವ್ಯಂಗ್ಯ ವಿಡಂಬನೆಯೊಂದೇ ವೈಖರಿಯಲ್ಲ. ವಿನೋದ, ವಾತ್ಸಲ್ಯ, ಕೌತುಕ, ಕಾರುಣ್ಯ, ಆಶೆ, ಆದರ್ಶಗಳ ರಸೋಲ್ಲಾಸವೂ ಈ ಹೊಸ ಪಾತ್ರದಲ್ಲಿ ತುಳುಕಾಡಬಲ್ಲುದು ಎಂಬುದನ್ನು ಕಣವಿಯವರು ಕಾಣಿಸಿಕೊಟ್ಟಿದ್ದಾರೆ. ಈ ಯುಗದ ಧರ್ಮಸಂಕರದ ನರಕವನ್ನು ತೆರೆದು ತೋರಿಸುವುದರೊಂದಿಗೆ 'All this and heaven too' ಎಂಬ ಶ್ರದ್ಧೆಯೊಂದು ನಿರಾಮಯ ಚಿತ್ತಕ್ಕೆ ಸ್ಥಾಯಿಯಾಗಿ ನಿಂತಿದೆ.

– ಗೌರೀಶ ಕಾಯ್ಕಿಣಿ

(ಹಿನ್ನುಡಿಯಲ್ಲಿ)

ತಳುಕಿನ ವೆಂಕಣ್ಣಯ್ಯ ಸ್ಮಾರಕ ಗ್ರಂಥಮಾಲೆ
೨, ರಮ್ಯ, ಗೋಕುಲಂ 3ನೇ ಹಂತ, ಮೈಸೂರು-2